UNIVERSAL
LIBRARY

OU_200308

UNIVERSAL
LIBRARY

881—5-8-74—15,000

**OSMANIA UNIVERSITY LIBRARY**

o. K83|P18B Accession No. 8G.K5371

r

ok should be returned on or before the date last marked below.

## ಓದುಗರಲ್ಲಿ . . . .

ಈ 'ಬಳ್ಳಿ-ಮೊಗ್ಗು' ಹೊಸ ಕಾದಂಬರಿಯೇನಲ್ಲ. ಎರಡು-ಮೂರು ವರ್ಷಗಳ ಕೆಳಗೆ 'ಪ್ರಜಾಮತ'ದಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದ್ದ ಕಾದಂಬರಿ.

ಈ ಕಾದಂಬರಿಯ ಹಿನ್ನೆಲೆ ಕಾನ್ವಂಟ್. ಆಗಿನ ಕಾಲದ—ನಾನು ಓದಿದ—ಕಾನ್ವೆಂಟ್. ಅಂತೆಯೇ ಅದರಲ್ಲಿ ಬರುವ ಮುಖ್ಯವಾಗಿ ಹೆಸರುಗಳು ನನ್ನ ಗುರುಗಳದು ಅಥವಾ ಸ್ನೇಹಿತೆಯರದು. ಯುದ್ಧ ಮುಗಿದದ್ದೇ, ಅವರೆಲ್ಲ ತಮ್ಮ ಸ್ವದೇಶಗಳಿಗೆ ಹೊರಟುಹೋದರೆಂದು ಕೇಳಿದೆ. ಅಷ್ಟರಲ್ಲಿ ನನ್ನ ಬಾಳು ಬೇರೆ ದಿಕ್ಕಿಗೆ ತಿರುಗಿತ್ತು. ಹೀಗಾಗಿ ಆ ಒಂದು ಅಪೂರ್ವ ಆತ್ಮೀಯತೆ, ಅನುಭವ ಅನಿವಾರ್ಯವಾಗಿ ಕಡಿದುಹೋಯಿತು. ಆದರೆ ನನ್ನ ನೆನಪಿನಾಳದಲ್ಲಿ ಮಾತ್ರ ಅದು ಹಸಿರಾಗಿಯೇ ಉಳಿದಿತ್ತು. ಉಳಿದು-ಬೆಳೆದು, ತನ್ನ ಹಿನ್ನೆಲೆಯಲ್ಲಿ ಈ ಕಥೆಯನ್ನು ರೂಪಿಸಿಕೊಂಡಿತು.

ಈ 'ಬಳ್ಳಿ-ಮೊಗ್ಗು' ಒಂದು ಅನಾಥ ಮಗುವಿನ ಕಥೆ; ಹೆತ್ತ ತಾಯಿಗಾಗಿ ಅದು ತೋರುವ ಹಂಬಲ, ಪಡುವ ಯಾತನೆಯ ಚಿತ್ರ. ಕಥೆ ಸಂಪೂರ್ಣವಾಗಿ ನನ್ನ ಹಗಲು ಕನಸುಗಳ ಶಿಶು. ಅದಕ್ಕೂ, ಆ ನನ್ನ ವಾತಾವರಣ—ಸ್ನೇಹಿತೆಯರಿಗೂ, ಕಲ್ಪನೆಯ ಎಳೆಯೊಂದನ್ನು ಬಿಟ್ಟು ಬೇರೆ ಯಾವ ಸಂಬಂಧವೂ ಇಲ್ಲ.

ಈ ಕಾದಂಬರಿಯನ್ನು ಹೊರತರುತ್ತಿರುವ 'ಗೀತಾ ಬುಕ್ ಹೌಸ್' ಸಹೋದರರಿಗೂ ಅಂದವಾದ ಮುದ್ರಣ ಮಾಡಿರುವ ಶ್ರೀ ಸದ್ಗುರು ಪ್ರಿಂಟರ್ಸ್ ಅವರಿಗೂ ಮುಖಚಿತ್ರದ ಕಲಾವಿದರಿಗೂ ನನ್ನ ವಂದನೆಗಳು.

ಎಂದಿನಂತೆ ತಮ್ಮ ಪ್ರೋತ್ಸಾಹ-ಅಭಿಪ್ರಾಯಗಳಿಗಾಗಿ ಕಾತರಳಾಗಿರುವ ಮತ್ತು ಈವರೆಗೂ ತಾವು ತೋರಿರುವ ಅಭಿಮಾನ-ಉತ್ಸಾಹಗಳಿಗೆ ಚಿರಋಣಿಯಾಗಿರುವ,

18, ನಾಲ್ಕನೆ ಮೇಯಿನ್ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು-560 003

**ಎನ್. ಪಂಕಜ**

## ಇದೇ ಲೇಖಕಿಯ ಇತರ ಕೃತಿಗಳು

ಕಾವೇರಿಯ ಆರ್ತರವ

ಬರಲಿ ಇನ್ನು....ಯಮುನೆ ? ('ಸಿಪಾಯಿ ರಾಮು' ಚಲನಚಿತ್ರವಾದ ಕಾದಂಬರಿ)

ಉಷಾನಿಶಿ

ಮಲಯಮಾರುತ

ವೀಣಾ !....ಓ ವೀಣಾ !....

ಗಗನ

ಮುಗಿಲ ಮಿಂಚು

ನಮಸ್ಕಾರ ಗರುಡಮ್ಮನವರೇ....ಏನ್ಸಮಾಚಾರ ?

ತರಂಗರಂಗ (ನಗೆಬರಹಗಳ ಸಂಕಲನ)

ಕಾವೇರಮ್ಮ ಅಮೇರಿಕಾದಲ್ಲಿ (ನಗೆಕೃತಿ)

ಕಮಲಾ ನೆಹರು (ಭಾರತ_ಭಾರತಿ–ಇಂಗ್ಲಿಷ್ ಅನುವಾದ)

# ಬಳ್ಳಿ–ಮೊಗ್ಗು

## ೧

'ಅರುಣಾ ?....'

ಕೂಗನ್ನು ಕೇಳಿದ್ದೇ ತಡ ಅರುಣ ಧಡಕ್ಕನೆ ನಿಂತಳು ; ಗಾಬರಿಯಾಗಿ ನೋಡಿದಳು.

'ಎಲ್ಲಿಗೆ ಹೊರಟೆ ?'

ಒಳ್ಳೆಯ ಪ್ರಶ್ನೆ ; ಇದಕ್ಕೇನು ಉತ್ತರ ಕೊಡುವುದು ? 'ಏನೋ, ಹೀಗೇ ಬೇಜಾರಾಯ್ತು ; ಈ ಸೆರೆಮನೆಯಲ್ಲೇ ಸ್ವಲ್ಪ ಅಡ್ಡಾಡಿ ಬರೋಣ ಎಂದು ಹೊರಟೆ ಅಷ್ಟೇ'—ಎಂದು ಹೇಳಿ ತಪ್ಪಿಸಿಕೊಳ್ಳುವುದೇ ? ಆಮೇಲೆ ಮದರ್ ಸುಪೀರಿಯರ್ ಏನೆಂದಾರು ? ಚೆನ್ನಾಗಿ ಇಲ್ಲಿಗೆ ಬಂದು ಸಿಕ್ಕಿಹಾಕಿಕೊಂಡಳಲ್ಲಾ ! ಅವಳಿಗೇನು ಗೊತ್ತಿತ್ತು, ಮದರ್ ಸುಪೀರಿಯರ್ ಈ ಕಡೆಯೇ ಇರುವುದು ?

ಮೆಲು ಹಾಡನ್ನು ಗುಂಯ್‌ಗುಟ್ಟುತ್ತಾ ಅರುಣ ಕಾರಿಡರ್‌ಗೆ ಬರುವುದಕ್ಕೂ ಆ ಕಡೆಯಿಂದ ಬಾಗಿಲನ್ನು ತೆಗೆದುಕೊಂಡು ಮದರ್ ಸುಪೀರಿಯರ್ ಪ್ರವೇಶಿಸುವುದಕ್ಕೂ ಸರಿಹೋಗಿತ್ತು.

'ಅರುಣ—ಮಗು, ನಿನಗೀಗ ಪಿಯಾನೋ ಕ್ಲಾಸಿತ್ತಲ್ಲವೆ ?' ಮದರ್ ಸುಪೀರಿಯರ್‌ನ ಮೃದುಧ್ವನಿಯಲ್ಲಿ ಬಿಗಿಯಿತ್ತು.

'ಹೌ....ಹೌದು' ತಡವರಿಸಿದಳು ಅರುಣ.

ಹುಡುಗಿ ನಿರುತ್ತರಳಾದಳು. ದಟ್ಟವಾದ ಹುಬ್ಬುಗಳ ಕೆಳಗಿನಿಂದ ಮಿರಮಿರನೆ ಮಿರುಗುತ್ತಿದ್ದ ಆಕೆಯ ತೀಕ್ಷ್ಣದೃಷ್ಟಿಯನ್ನು ಎದುರಿಸಲಾರದೆ ತಲೆ ತಗ್ಗಿಸಿದಳು.

'ನಂಗೆ ತುಂಬಾ ತಲೆನೋವು ; ಯಾಕೋ ವಿಪರೀತ ಹೊಟ್ಟೆ ನೋವು ; ಏನೋ ಕೈಕಾಲು ನೋವು—ಮದರ್.' ಮಿಕ್ಕ ಹುಡುಗಿಯ

ರಂತೆ ಏನಾದರೊಂದು ಕಾರಣ ಹೇಳಿ ತಪ್ಪಿಸಿಕೊಳ್ಳಬಹುದಾಗಿತ್ತು. ಆದರೆ ಅರುಣಳಿಗೆ ಕಪಟ–ಸುಳ್ಳು, ಯಾವುದೂ ಇಷ್ಟವಿಲ್ಲ ; ಅದು ಬರುವುದೂ ಇಲ್ಲ.

'ಬದ್ಧೀ ಇರೋದನ್ನ ಮಾಡಿ, ಸಿಕ್ಕಿಹಾಕಿಕೊಳ್ಳೋ ಬದಲು, ನೀ ಹೀಗಿರೋದೇ ವಾಸಿ, ಮೆಸ್.' ಪ್ರಾಣಸ್ನೇಹಿತೆ ನಾರ್ಮಾ ಉಪದೇಶಿಸಿದ್ದಳು.

'ಯಾಕೆ ಡಿಯರ್ ?' ಅವಳ ಮುಖಭಾವವನ್ನೇ ಗಮನಿಸುತ್ತಿದ್ದ ಮದರ್ ಸುಪೀರಿಯರ್ ಹತ್ತಿರ ಸಾರಿ, ಮೃದುವಾಗಿ ಕೇಳಿದರು—'ನಿಂಗೆ ನಮ್ಮ ಪಿಯಾನೋ ಇಷ್ಟವಿಲ್ಲವೇ ?'

'ಪಿಯಾನೋವನ್ನ ಕೇಳಿದ್ರೆ....' ಅರುಣ ನಿಧಾನವಾಗಿ ಹೇಳಿದಳು —'ಎದೆಯಲ್ಲೆಲ್ಲ ಏನೋ ಒಂದು ತರಹ ಸಂಕಟವಾಗತ್ತೆ ; ಏನೇನೋ ಜ್ಞಾಪಕಕ್ಕೆ ಬಂದಹಾಗಾಗತ್ತೆ; ತಕ್ಷಣ ಮರೆತುಹೋಗತ್ತೆ.'

ತನಗೇ ಅರಿವಿಲ್ಲದಂತೆ ಇಷ್ಟು ಹೇಳಿ, ದಿಗಿಲಿನಿಂದ ಮದರ್ ಸುಪೀರಿಯರ್ ಅತ್ತ ನೋಡಿದಳು. ಮದರ್ ಸುಪೀರಿಯರ್‌ಗೆ ಕೋಪ ಬಂದಿಲ್ಲ ತಾನೇ ?

ಪಿಯಾನೋ ಕಾನ್ವೆಂಟಿನ ಜೀವಾಳ ; ಕಾನ್ವೆಂಟ್ ಏಕೆ, ಪಾಶ್ಚಾತ್ಯರ ಹೃದಯವೇ ಆ ವಾದ್ಯ !

'ನಮ್ಮಲ್ಲಿ—ಎಂಥಾ ಬಡವರ ಮನೇಲೂ ಸಾಧಾರಣವಾಗಿ— ಪಿಯಾನೋ ಇರತ್ತೆ. ಪುಟ್ಟ ವಯಸ್ಸಲ್ಲೇ ಪಾಠ ಪ್ರಾರಂಭ ಆಗತ್ತೆ. ಹೀಗಾಗಿ, ಬುದ್ಧಿ ತಿಳಿದಷ್ಟು ದಿನಗಳಿಂದ ನಾನದನ್ನ ಕಲೀತಾ ಇದೀನಿ— ನುಡಿಸ್ತಾ ಇದೀನಿ.' ಮಾರ್ಗರೇಟ್ ತಿಳಿಸಿದ್ದಳು.

'ನಮ್ಮಲ್ಲಿ ಹಾರ್ಮೋನಿಯಂ ಹೇಗೋ, ಹಾಗೆ ಮೆಸ್, ಪಿಯಾನೋ ಇವರುಗಳಿಗೆ' ಕಲಾವತಿ ವಿವರಿಸಿದ್ದಳು. ಅಂಥದರಲ್ಲಿ, 'ನಂಗೆ ಪಿಯಾನೋ ಇಷ್ಟ ಇಲ್ಲ; ನಾನದನ್ನ ಕಲಿಯೋದಿಲ್ಲ' ಎಂದು ನೇರವಾಗಿ—ಅದರಲ್ಲೂ ಮದರ್ ಸುಪೀರಿಯರ್‌ಗೆ ಹೇಳುವುದು ಸಾಧ್ಯವೇ ? ಸರಿಯೇ ? ಉಹುಂ— ಕಪಾಳಕ್ಕೆ ಹೊಡೆದಂತಾಗುವುದು !

'ನೀನು ಪಿಯಾನೋ ನುಡಿಸುವುದನ್ನ ಕಲಿಯಬೇಕು—ಅದರಲ್ಲಿ ಪರಿಣತಳಾಗಬೇಕು, ಅಂತ ನಿನ್ನ ಡ್ಯಾಡಿ ವಿಲ್‌ನಲ್ಲಿ ಬರೆದಿಟ್ಟಿದ್ದಾರೆ,

ಮಗೂ. ಅವರ ಆಸೆಯನ್ನ ಪೂರೈಸಬೇಕಲ್ಲವೇ ?' ಈವರೆಗೂ ಅವಳನ್ನೇ ಗಮನಿಸುತ್ತಾ ಮೌನವಾಗಿ ನಿಂತಿದ್ದ ಮದರ್ ಸುಪೀರಿಯರ್ ನಿಶ್ಯಬ್ದತೆಯನ್ನು ಮುರಿದರು.

'ವಿಲ್–ವಿಲ್ !' ಅರುಣ ಮುಖ ಮುದುರಿದಳು. 'ಸಾಕಾಗಿದೆ ಈ 'ವಿಲ್'ನ ಆಜ್ಞೆಗಳು !'

ತಾನು ಎಲ್ಲಿಗೆ ಹೋಗಬೇಕು, ಬರಬೇಕು, ಕೂರಬೇಕು, ನಿಲ್ಲಬೇಕು, ಪ್ರತಿಯೊಂದನ್ನೂ ಬರೆದಿಟ್ಟಿದ್ದಾರೋ ವಿಲ್‌ನಲ್ಲಿ ಡ್ಯಾಡಿ ?

ಅರುಣಳಿಗೆ ನಗಬೇಕೆನಿಸಿತು. ಆದರೆ ಎದುರಿನಲ್ಲಿ ಕಾನ್ವೆಂಟಿನ ಮಹಾರಾಣಿ ! ಬೇಗ ಹೋಗಬಾರದೇ? ಅವಳು ಹೀಗೆಯೇ ಚಡಪಡಿಸುತ್ತಿರುವಂತೆಯೇ, ಮದರ್ ಸುಪೀರಿಯರ್ ಮುಂದಡಿ ಇಟ್ಟರು—'ಇದೊಂದು ವಿಚಿತ್ರದ ಹುಡುಗಿ—ಅರ್ಥವೇ ಆಗುವುದಿಲ್ಲವಲ್ಲಾ, ಜೀಸಸ್, ಜೀಸಸ್ !' ಎಂದುಕೊಳ್ಳುತ್ತಾ.

ಕಾನ್ವೆಂಟಿನ ಬೋರ್ಡಿಂಗ್‌ಗೆ ಬಂದು ಸೇರಿದಾಗ ಅರುಣ ಇನ್ನೂ ಬುಡುಬುಡು ಓಡುತ್ತಿದ್ದ ಮಗು. ಒಳ್ಳೆ ಗುಂಡುಗುಂಡಾಗಿ ಮುದ್ದು ಮುದ್ದಾಗಿದ್ದ ಆ ಮಗು ಕೂಡಲೆ ಎಲ್ಲರ ಗಮನವನ್ನೂ ಸೆಳೆದಿತ್ತು—ಎಲ್ಲರ ಕಂಕುಳನ್ನೂ ಏರಿತ್ತು.

'ನಿಮ್ಮ ಇಂಡಿಯಾದಲ್ಲಿರೋ ದಾಳಿಂಬರೆಯನ್ನೆಲ್ಲಾ ಕಿತ್ತು ನಿನ್ನೀ ತುಟಿಗಳಲ್ಲಿ—ಕೆನ್ನೆಗಳಲ್ಲಿ ಇಟ್ಕೊಂಡಿದೀಯಾ, ಮಗೂ ?' ಅದನ್ನು ಕಂಡ ತಕ್ಷಣ ಎಲ್ಲರೂ ಉದ್ಗರಿಸಿದ್ದರು

ಬಂದ ಎರಡೇ ದಿನಗಳಲ್ಲಿ ಎಲ್ಲರನ್ನೂ ಗುರುತು ಮಾಡಿಕೊಂಡು ಬಿಟ್ಟು, ಎಲ್ಲರ ಹೆಸರನ್ನೂ ತನ್ನ ನಾಲಿಗೆಗೆ ಸರಿಯಾಗಿ ಬದಲಾಯಿಸಿಕೊಂಡು, ಇಂಗ್ಲೀಷು-ಕನ್ನಡ ಎಲ್ಲ ಸೇರಿಸಿ ಮುದ್ದುಮುದ್ದಾಗಿ ಮಾತಾಡುತ್ತಾ, ತಪ್ಪುಗಾಲು ಹಾಕುತ್ತಾ, ಇಡೀ ಕಾನ್ವೆಂಟನ್ನೇ ಸುತ್ತುತ್ತಿದ್ದ ಆ ಮಗುವನ್ನು ಎಲ್ಲರೂ ಪ್ರೇಮಿಸಿದ್ದರಲ್ಲಿ ಆಶ್ಚರ್ಯವಿಲ್ಲ.

ಅದರಲ್ಲೂ ಮದರ್ ಸುಪೀರಿಯರ್. ಅರುಣಳನ್ನು ಕಂಡರೆ.... ಇಂಗ್ಲೆಂಡಿನಲ್ಲಿದ್ದ—ಬಹುಕಾಲದ ಹಿಂದೆ ನೋಡಿದ್ದ ತಮ್ಮ ಪುಟ್ಟ ತಂಗಿಯ ನೆನಪೇ ಆಗುತ್ತಿತ್ತು ಅವರಿಗೆ. ಈಗ ಬಹಳೇ ದೊಡ್ಡವಳಾಗಿರಬೇಕು ;

ಎಲ್ಲಿದ್ದಾಳೋ-ಹೇಗಿದ್ದಾಳೋ? ಈಗದೆಲ್ಲಾ ಹಳೆಯ ಜನ್ಮದ ಕಥೆಯೇ ಸರಿ. ಅದನ್ನೆಲ್ಲಾ ಮರೆತುಬಿಡಬೇಕು. ಆದರೂ...

'ಏಸುವಿನ ವಧು ಆದ ಮೇಲೆ, ಈ ಪ್ರಾಪಂಚಿಕ ಕಟ್ಟನ್ನೆಲ್ಲಾ ಕಿತ್ತೊಗೆಯಬೇಕು; ಶಾರೀರಕ ವ್ಯಾಮೋಹವನ್ನೆಲ್ಲಾ ಕಡಿದೊಗೆಯಬೇಕು; ಸದಾ ಏಸುವಿನ ಧ್ಯಾನದಲ್ಲಿರಬೇಕು' ಎಂಬ ತತ್ವಕ್ಕೆ ಮದರ್ ಸುಪೀರಿಯರ್ ಮಿಕ್ಕೆಲ್ಲಾ ನನ್‌ಗಳಂತೆ ತಲೆಬಾಗಿದ್ದರೂ, ಹಾಳು ಕರುಳೆಂಬುದು ಇದೆಯಲ್ಲಾ-ಅದು ಮಿಡಿಯುತ್ತಿತ್ತು. ಈ ಅರುಣಳನ್ನು ಕಂಡಾಗ ಸಮಾಧಾನ ಪಟ್ಟುಕೊಳ್ಳುತ್ತಿತ್ತು.

'ನಿಂಗೇನು ಮೆನ್, ಮದರ್ ಸುಪೀರಿಯರ್‌ನ ಪೆಟ್. ಲಕ್ಕಿ ಮೆನ್-ಲಕ್ಕೀ!' ಮಿಕ್ಕೆಲ್ಲಾ ಹುಡುಗಿಯರು ಅರುಣಳನ್ನು ಹಾಸ್ಯಮಾಡುತ್ತಿದ್ದರು. ಆದರೆ ಒಬ್ಬರಾದರೂ ಅಸೂಯೆಪಡುತ್ತಿರಲಿಲ್ಲ. ಕಾರಣ—ಅರುಣ ಎಲ್ಲರಿಗೂ, ಇಡೀ ಕಾನ್ವೆಂಟಿಗೇ ಮುದ್ದುಮರಿ. ಅದಕ್ಕೆ ಅವಳ ಮೃದುಸ್ವಭಾವವೇ ಕಾರಣ.

ಎಲ್ಲರಿಗೂ ಆಸೆ—ಅರುಣಳನ್ನು ತಮ್ಮ ಗುಂಪಿಗೆ ಸೇರಿಸಿಕೊಳ್ಳಲು. ಆದರೆ ಅವಳು ಯಾವ ಗುಂಪಿನಲ್ಲೂ ಐಕ್ಯವಾಗದೆ, ಎಲ್ಲ ಗುಂಪಿನೊಳಗೂ ಸಂಚರಿಸುತ್ತಿದ್ದಳು. ಅವಳಿಗೆ ಮಾತ್ರ ಇತ್ತು, ತಡೆಯಿಲ್ಲದ ಪ್ರವೇಶ.

ಆದರೂ ಈ ಹುಡುಗಿ ಅಸುಖಿ! ಕಾರಣ?

ಕೋಣೆಗೆ ಕರೆಸಿ, ಕೇಳಿ ತಿಳಿದುಕೊಳ್ಳಲು ಪ್ರಯತ್ನಿಸಿ, ವಿಫಲರಾಗಿದ್ದರು ಮದರ್ ಸುಪೀರಿಯರ್; ಸ್ನೇಹಿತೆಯರೆಲ್ಲ ಹತಾಶರಾಗಿದ್ದರು. ಬಾಯಿಬಿಟ್ಟರೆ ತಾನೆ ಅರುಣ? ಆದರೆ ಎಲ್ಲರಿಗೂ ಗೊತ್ತು, ಮೇಲೆ ಮಧುರವಾಗಿ ನಗುತ್ತಾ, ಹಕ್ಕಿಯಂತೆ ಉಲಿಯುತ್ತ, ಚಿಟ್ಟೆಯಂತೆ ಹಾರುತ್ತಿದ್ದ ಆ ಎಳೆ ಹುಡುಗಿಯ ಹೃದಯವನ್ನು ಯಾವುದೋ ಕೀಟ ಕೊರೆಯುತ್ತಿದೆ, ಎಂಬುದು.

ಆ ಕೀಟ ಯಾವುದು ಎನ್ನುವುದು ಮೊದಲು ತಿಳಿದರೆ ತಾನೆ ತೆಗೆದು ಹಾಕಬಹುದು?

ಕಾನ್ವೆಂಟ್ ಚರ್ಚಿನ ಗಂಭೀರನಿನಾದವು ಕಾನ್ವೆಂಟಿನ ನಿಶ್ಶಬ್ದತೆಯನ್ನು ಸೀಳಿತು. ತಕ್ಷಣ ಎಲ್ಲಿದ್ದವರಲ್ಲಲ್ಲೇ, ನೆಲದ ಮೇಲೆ ಮೊಣಕಾಲೂರಿ

ಕಣ್ಣು ಮುಚ್ಚಿದರು ಮೌನವಾಗಿ ಪ್ರಾರ್ಥನೆ ಮಾಡಿ, ಕ್ರಾಸ್ ಸಂಕೇತ ದೊಂದಿಗೆ ಎದ್ದರು. ಅರುಣ ಸಹ ಮಾಡಿದಳು. ಚಿಕ್ಕಂದಿನಿಂದ ನೋಡಿ ನೋಡಿ, ಅವಳಿಗೆ ಅಭ್ಯಾಸವಾಗಿ ಹೋಗಿತ್ತು.

ಅವಳಿಗೇನೋ ಸಮರ್ಪಕವಾದ ಕಾರಣವಿತ್ತು; ಆದರೆ ನಿನ್ನೆ ಮೊನ್ನೆ ತಾನೆ ಬಂದು ಸೇರಿದ ಹಿಂದೂ ಹುಡುಗಿಯರೂ ಈ ಕ್ರಿಶ್ಚಿಯನ್ ಪದ್ಧತಿಗಳನ್ನು ಅನುಸರಿಸುವುದೇ ?

ಆ ವಾತಾವರಣದ ವೈಶಿಷ್ಟ್ಯವೇ ಅಂತಹುದೇನೋ, ಅಂತೂ ಅವರು ತಮಗೇ ತಿಳಿಯದಂತೆ ಆ ಹುಡುಗಿಯರ ಕರಗಳು ಆಗಾಗ ಈ ಕ್ರಾಸ್ ಸಂಕೇತವನ್ನು ಮಾಡುತ್ತಿದ್ದವು! 'ಜೀಸಸ್, ಜೀಸಸ್!' ಮಾತಿಗೆ ಮುಂಚೆ ಉದ್ಗರಿಸುತ್ತಿದ್ದರು.

ಇದರಿಂದ ಭೀತಗೊಂಡ ತಾಯಂದಿರನೇಕರು, 'ಸಾಕು, ಈ ಕ್ರಿಶ್ಚಿಯನ್ ಓದು!' ಎಂದು ಕಾನ್ವೆಂಟ್ ಬಿಡಿಸಿದ್ದೂ ಉಂಟು.

'ಎಲ್ಲಾ ಹೀತನ್ಸ್! ಶುದ್ಧ ನಾಸ್ತಿಕರು!' ಮದರ್ ಸುಪೀರಿಯರ್ ನೊಂದುಕೊಂಡರು—'ಅನ್ಯಾಯ! ಸ್ವರ್ಗದ ರಾಜ್ಯಕ್ಕೆ ಹೋಗೋ ಅವಕಾಶಾನ ಕೈಯಾರೆ ಕಳಕೊಂಡುಬಿಟ್ರು. ಎಲ್ಲರಿಗೂ ಹೆವನ್ ಸಿಗತ್ಯೆ? ಈ ಹೀತನ್ಸ್‌ಗೆ ಇಷ್ಟೂ ಗೊತ್ತಿಲ್ಲ?'

ಬೈಬಲ್ ಕ್ಲಾಸ್ ಕಡ್ಡಾಯವಾಗಿದ್ದುದು ಈ ಹಿಂದೂ ವಿದ್ಯಾರ್ಥಿನಿಯರ ತಾಯಂದಿರುಗಳಿಗೆ ಮತ್ತೊಂದು ತಲೆನೋವು!

'ನಮ್ಮ ಮಕ್ಕಳಿಗೆ ಯಾಕೆ ಏಸುಕ್ರಿಸ್ತನ ವಿಚಾರ? ಸಧ್ಯ ನಮ್ಮ ದೇವರುಗಳೇ ಸಾವಿರದೆಂಟಿವೆ! ಮೊದಲು ಅವರುಗಳನ್ನ ಅರಿತರೆ ಸಾಕು!' ಕೆಲವರು ನೇರವಾಗಿ ಮದರ್ ಸುಪೀರಿಯರ್ ಹತ್ತಿರಕ್ಕೇ ಬಂದು ಗಲಾಟೆ ಮಾಡಿದ್ದುದೂ ಉಂಟು. ಅದಕ್ಕೆ ಮದರ್ ಸುಪೀರಿಯರ್‌ದು ಒಂದೇ ಶಾಂತ ಉತ್ತರ—'ನಾವೇನು ಮಾಡೋಕ್ಕಾಗತ್ತೆ? ಕಾನ್ವೆಂಟ್ ರೂಲ್ಸೇ ಹಾಗಿದೆ.'

ದಿನಾಲು ಮನೆಯಿಂದ ಬರುವವರಿಗೆ ಕಾನ್ವೆಂಟ್‌ನಲ್ಲೇ ಇರುವ ವಿದ್ಯಾರ್ಥಿನಿಯರನ್ನು ಕಂಡರೆ ಅಸೂಯೆ; ಅಲ್ಲಿರುವವರಿಗೆ ಇಲ್ಲಿಯವರನ್ನು ಕಂಡರೆ ಅಸೂಯೆ.

'ಎಷ್ಟು ಚೆನ್ನಾಗಿರತ್ತಪ್ಪ, ಹೀಗೆ ಮನೆಯವರಿಂದ ದೂರ ಇರೋದು!

ಅದೂ ಸದಾ ಸ್ನೇಹಿತೆಯರ ಮಧ್ಯೆ !' ಹೊರಗಿನಿಂದ ಬರುವವರು-ಅಂದರೆ, ಡೇಸ್ಕಾಲರ್ಸ್ ಮಾತನಾಡಿಕೊಳ್ಳುತ್ತಿದ್ದರು—'ದಿನಾ ಅಷ್ಟೊಂದು ದೂರ, ದಿಂದ ಬರೋ ಯೋಚನೆ ಇಲ್ಲ! ಮಹಡಿಯಿಂದ ಕೆಳಗೆ ನೆಗೆದರೆ ಸರಿ, ಕ್ಲಾಸು !'

'ಪುಣ್ಯವಂತರು, ಸದಾ ಮಮ್ಮಿಯ ಜೊತೆಯಲ್ಲೇ ಇರ್‍ತಾರೆ ! ನಮ್ಮ ಹಾಗೆ ಎಲ್ಲರನ್ನೂ ಬಿಟ್ಟು, ಇಲ್ಲಿಗೆ ಬಂದು, ಯಾರದೋ ಶಿಸ್ತಿಗೆ ಒಳಗಾಗಿಲ್ಲ !' ಬೋರ್ಡರ್ಸ್ ಅಂದರೆ, ಅಲ್ಲಿಯೇ ಇರುವವರು ನಿಟ್ಟುಸಿರು ಬಿಡುತ್ತಿದ್ದರು— ಒಳ್ಳೇ ಗುಬ್ಬಚ್ಚಿಗಳಂತೆ ಮನೆಗೆ ಹಾರುವ ಆ ದಂಡನ್ನು ಕಂಡು—'ನಮ್ಮ ಹಾಗೆ ತಮ್ಮ ತಂಗಿ ಡ್ಯಾಡಿ, ಎಲ್ಲರನ್ನೂ ಬಿಟ್ಟು, ದೂರ ಇಲ್ಲಿಗೆ ಬಂದು ಇದ್ದು....

ಪಾಪ—ಒಬ್ಬೊಬ್ಬರಂತೂ ಅತ್ತೇಬಿಡುತ್ತಿದ್ದರು. ಮನೆಯ ಗೀಳನ್ನ ತಡೆಯದೆ !

* * *

'ಮನೆಯಲ್ಲಿ ಮಮ್ಮಿ !' ಅರುಣ ಮೈಮರೆತು ನಿಲ್ಲುತ್ತಿದ್ದಳು— 'ಮ-ಮ್ಮಿ ! ಮ-ಮ್ಮಿ ....'

ಎಂತಹ ಮೋಹಕವಾದ ಶಬ್ದ ಅದು ! ಎಷ್ಟೊಂದು ಮಾಧುರ್ಯ ಆ ಕಿರುಪದದಲ್ಲಿ !

'ನನ್ನ ಮಮ್ಮಿ ಎಲ್ಲಿ ?' ಕೊನೆಗೆ ತಡೆಯದೆ, ಒಂದು ದಿನ ಸಿಸ್ಟರನ್ನು ಕೇಳಿಯೇಬಿಟ್ಟಳು—'ಎಲ್ಲಿ ನನ್ನ ಮಮ್ಮಿ ?'

ಸಿಸ್ಟರ್ ಒಂದು ಕ್ಷಣ ತಡವರಿಸಿದರು. 'ಸ್ವರ್ಗಕ್ಕೆ ಹೋಗಿದ್ದಾರೆ, ಮಗು.' ತಪ್ಪಿಸಿಕೊಳ್ಳಲು ಯತ್ನಿಸಿದರು. 'Don't worry.'

'ಅಲ್ಲೇ ಯಾವಾಗಲೂ ಇರೋದಿಕ್ಕಾ ?' ಭಯವಿಹ್ವಲೆಯಾಗಿ ಅರುಣ ಉಸುರಿದಳು

'ಏನೂ ಯೋಚಿಸಬೇಡ, ಮಗೂ ; ನಮ್ಮ ಜೀಸಸ್ ಚೆನ್ನಾಗಿ ನೋಡಿಕೋತಾರೆ.' ಸಿಸ್ಟರ್ ನುಸುಳಿಕೊಂಡರು.

'ಆದ್ರೆ, ಸಿಸ್ಟರ್—ಜೀಸಸ್ ನನ್ನ ಮಮ್ಮೀನ ಮಾತ್ರ ಯಾಕೆ ಕರ್‍ಕೊಂಡು ಹೋದ ? ಮೇರಿ, ಮಾರ್ಗರೆಟ್, ಸುಶೀಲ, ಕಲಾವತಿ, ರೀಟಾ,

ಪ್ರೇಮ—ಇವರುಗಳ ಮಮ್ಮೀನ ಯಾಕೆ ಕರ್ಕೊಂಡು ಹೋಗಲಿಲ್ಲ?' ದುಃಖ ದಿಂದ ಭಾರವಾದ ಧ್ವನಿಯಲ್ಲಿ ಮಗು ಪ್ರಶ್ನಿಸಿತು.

'ಹುಶ್, ಹಾಗೆಲ್ಲ ಮಾತಾಡಬಾರ್ದು ! ಅದು ಮಹಾ ಸಿನ್ ! ಮದರ್ ಸುಪೀರಿಯರ್‌ಗೆ ತಿಳಿದ್ರೆ ನೊಂದುಕೋತಾರೆ ಗೊತ್ತಾ ?'

ತುಟಿಗಳ ಮೇಲೆ ಕೈಯಿಟ್ಟವರೇ, ಅರುಣ ಮತ್ತೇನನ್ನಾದರೂ ಕೇಳುವುದಕ್ಕೆ ಮುಂಚೆಯೇ ಮುನ್ನಡೆದುಬಿಟ್ಟರು.

ಈ ಮದರ್ಸ್-ಸಿಸ್ಟರ್ಸ್‌ಗಳು ಅದೆಷ್ಟೊಂದು ನಿಶ್ಶಬ್ದವಾಗಿ ನಡೆಯು ತ್ತಾರೆ ! ಈ ದೊಡ್ಡ ಕಾನ್ವೆಂಟಿನ ಪೂರ್ತಿ ಅವರುಗಳದೇ ಓಡಿಯಾಟ— ಆದರೂ, ಅವರುಗಳು ಬರುವುದೂ ಗೊತ್ತಾಗುವುದಿಲ್ಲ, ಹೋಗುವುದೂ ಗೊತ್ತಾಗುವುದಿಲ್ಲ ! ಒಳ್ಳೇ ನೆರಳಿನ ಓಡಾಟದ ಹಾಗೆ, ಅವರುಗಳ —ಓಡಾಟ ! ಮತ್ತು, ಎಲ್ಲೆಲ್ಲೂ ಅವರದೇ ಕಣ್ಣು ! ಮಾತೆತ್ತಿದರೆ ಸರಿ— 'ಜೀಸಸ್ ! ಜೀಸಸ್ !' ಎಂಬ ಉದ್ಗಾರ. 'ಸಿನ್' ಬಗ್ಗೆ ಲೆಕ್ಚರ್. ಸ್ವರ್ಗದ ವರ್ಣನೆ !

'ನಾನು ಯಾವ ಸಿನ್ ಮಾಡಿದ್ದೆ, ಜೀಸಸ್ ?—ನನ್ನ ಮಮ್ಮೀನ ಕಳಕೊಳ್ಳೋದಿಕ್ಕೆ ?' ಅರುಣ ಆ ಇಡೀ ರಾತ್ರಿ ದಿಂಬಿನೊಳಗೆ ಬಿಕ್ಕಿದ್ದಳು—'ನನ್ನ ಮಮ್ಮೀನ ವಾಪಸ್ಸು ಕಳಿಸಿಬಿಡು ಜೀಸಸ್—ಬೇಗ ಕಳಿಸಿಬಿಡು. ಮಾರ್ಗರೆಟ್ ಮಮ್ಮೀನ ಸ್ವಲ್ಪ ದಿವಸ ಕರಸ್ಕೋ—ನಿನ್ನ ಸ್ವರ್ಗದ ರಾಜ್ಯಕ್ಕೆ....

* * *

ಅರುಣಳ ವಿಷಯ ಯಾರಿಗೂ ಏನೂ ಹೆಚ್ಚಿಗೆ ಗೊತ್ತಿರಲಿಲ್ಲ. ಮೊದಲು ಅವಳಿಗೆ ತಿಳಿದಿದ್ದರೆ ತಾನೆ ? ಬಾಯಿಂದ ಬಾಯಿಗೆ ಹರಡಿದ ಸುದ್ದಿ ಇಷ್ಟು—

'ಅವಳೊಬ್ಬ ಆಗರ್ಭ ಶ್ರೀಮಂತನ ಮಗಳು. ಚಿಕ್ಕಂದಿನಲ್ಲಿಯೇ ತೀರಿಹೋದ ಅವಳ ಡ್ಯಾಡಿ. ಸಾಯುವ ಮುನ್ನ ಅವಳನ್ನು ಇಲ್ಲಿಯ ಮದರ್ಸ್ ಕೈಯಲ್ಲಿಟ್ಟು, ಪ್ರತಿಯೊಂದಕ್ಕೂ—ವಿಲ್ ಮೂಲಕ ಆದೇಶ ಗಳನ್ನು ಬರೆದಿಟ್ಟು, ಕೊನೆಯುಸಿರೆಳೆದಿದ್ದರು.'

ಡ್ಯಾಡಿ ಸತ್ತಿದ್ದೇನೋ ಖಚಿತವಾದ ಸುದ್ದಿ. ಖುದ್ದಾಗಿ ಮದರ್ ಸುಪೀರಿಯರೇ ಹೋಗಿ ನೋಡಿಬಂದರಂತೆ. ಆದರೆ....ಮಮ್ಮಿ ?....ಎಲ್ಲಿ ಸತ್ತಳೋ, ಯಾರು ಕಂಡರೋ ?

'ಈ ನಮ್ಮ ಮದರ್ ಮೇರಿ ಇದಾರಲ್ಲ—' ಸಿಸ್ಟರ್‌ನ ಮೂಲಕ ಅರುಣಳ ವೇದನೆಯನ್ನು—ಹಂಬಲವನ್ನು ಅರಿತ ಮದರ್ ಸುಪೀರಿಯರ್ ಒಂದು ದಿನ ಹುಡುಗಿಯನ್ನು ಮದರ್ ಮೇರಿಯ ವಿಗ್ರಹದ ಬಳಿ ಕರೆದು ಕೊಂಡು ಹೋಗಿ ಹೇಳಿದ್ದರು—'ಇವಳೇ ನಿನ್ನ ಮಮ್ಮಿ—ನಮ್ಮೆಲ್ಲರ ಮಮ್ಮಿ.'

'ಉಹು—' ಎಂದು ಒಪ್ಪಿಕೊಳ್ಳದ ಅರುಣಳಿಗೆ ಬೋಧಿಸಿದ್ದರು—'ಎಂದೆಂದಿಗೂ ಸಾಯದ, ಬಿಟ್ಟುಹೋಗದ ಮಮ್ಮಿ—ಇದು ಡಿಯರ್.'

'ಆದರೆ ಈ ಮಮ್ಮಿ ಕಲ್ಲು!' ದೀರ್ಘಕಾಲ ಅದನ್ನೇ ನಿಟ್ಟಿಸಿ ನೋಡಿದ್ದ ಅರುಣ ನಿಟ್ಟುಸಿರೆಳೆದಿದ್ದಳು—'ಎಲ್ಲರ ಮಮ್ಮಿ ಹಾಗೆ ನಗೊಲ್ಲ ; ಮುದ್ದು ಮಾಡೊಲ್ಲ ; ತಿಂಡಿ ಮಾಡ್ಕೊಡಲ್ಲ—ಬೈಯಲ್ಲ !'

'ನೋಡು child —' ಎಂದು ಮದರ್ ಸುಪೀರಿಯರ್ ಸಮಾಧಾನ ಮಾಡಲು ಯತ್ನಿಸಿದಾಗ, ಅರುಣ ಕೇಳುವವರ ಕರುಳು ಕತ್ತರಿಸಿ ಹೋಗು ವಂತೆ ರೋದಿಸಿದ್ದಳು—'ನಂಗೂ ಅಂಥಾದ್ದೇ—ಎಲ್ಲರಂಥಾದ್ದೇ ಮಮ್ಮಿ ಬೇಕು ! ನಿಜವಾದ ಮಮ್ಮಿ ಬೇಕು....ನಿಜವಾದ ಮಮ್ಮಿ ಬೇಕು....'

ಹೇಗೆ ಸಂತೈಸಬೇಕೋ, ಏನು ಉತ್ತರ ಕೊಡಬೇಕೋ, ಮದರ್ ಸುಪೀರಿಯರ್‌ಗೇ ತೋಚಿರಲಿಲ್ಲ. ಯಾಂತ್ರಿಕವಾಗಿ ನಕ್ಕಿದ್ದರು. ಆ ನಗೆ ಯಲ್ಲೂ ಏನೋ ಒಂದು ವಿಧದ ಅನುಕಂಪ ಅಡಗಿತ್ತು ; ಅವರ ಕಣ್ಣುಗಳಲ್ಲಿ ಯಾವುದೋ ವೇದನೆ.

ರಜೆ ಬಂದಿತು ಎಂದರೆ ಸರಿ, ಸ್ನೇಹಿತೆಯರೆಲ್ಲ ಓಡುತ್ತಿದ್ದರು ತಮ್ಮ ತಮ್ಮ ಮನೆಗಳಿಗೆ. ಅವರುಗಳ ಸಡಗರವೇ ಸಡಗರ ! ಹೌದು, ಅತ್ತೆಮನೆ ಯಿಂದ ತೌರುಮನೆಗೆ ತೆರಳುವ ಸಂಭ್ರಮ ಆ ಹೊತ್ತು !....ಎಲ್ಲರನ್ನೂ ಮಂಕಾಗಿ ನೋಡುತ್ತಾ ನಿಂತುಬಿಡುತ್ತಿದ್ದಳು ಅರುಣ. ತಾನೂ ಹಾಗೆಯೇ ಹೋಗುವ ಹಾಗಾಗಿದ್ದರೇ !

'ನಾವು ನಮ್ಮ ಮನೆಗೆ ಹೋಗುತ್ತಿದ್ದೇವೆ ! ನಮ್ಮ ಮನೆಗೆ ಹೋಗುತ್ತಿದ್ದೇವೆ !' ಸಂತೋಷದಿಂದ ಕುಪ್ಪಳಿಸುತ್ತಿದ್ದರು.

ನಮ್ಮ ಮ....ನೆ.... ! ಎಂತಹ ಮಧುರವಾದ ಶಬ್ದ ! ಪದ ! ಸಹಸ್ರಾರು ಸ್ವರ್ಗೀಯ ರಾಗಗಳು ಆ ಒಂದು ಶಬ್ದದಿಂದ ಪುಟಿದೆದ್ದು, ಹೃದಯ ನಾಡಿಯನ್ನು ಮೀಟುತ್ತಿರುವ ಅನುಭವ ! ಅವರುಗಳ....ಮ....ನೆ.... ಹೇಗಿರಬಹುದು ?

ಎಲ್ಲ ಹುಡುಗಿಯರೂ ಹೊರಟುಹೋದ ಮೇಲೆ ಕಾನ್ವೆಂಟ್‌ನಲ್ಲಿ ಒಬ್ಬಳೇ ಆದ ಅರುಣ ಬೇಸರ ತಡೆಯುದೆಯೋ, ಹೊತ್ತು ಕಳೆಯುದೆಯೋ, ಊಹಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಳು. ಇಷ್ಟುಹೊತ್ತಿಗೆ ಎಲ್ಲರೂ ತಮ್ಮ ತಮ್ಮ ಜಾಗಗಳಲ್ಲಿ ಇಳಿಯುತ್ತಿರಬೇಕು. ಸ್ಟೇಶನ್ನಿಗೆ ಯಾರು ಯಾರು ಬಂದಿರಬಹುದು ? ಮಮ್ಮಿಯೇ ಬಂದಿರುವಳೋ ? ಪಾಪ—ಮಮ್ಮಿಗೆ ಮನೆಯಲ್ಲಿ ನೂರೆಂಟು ಕೆಲಸ. ಅದರಲ್ಲೂ ಮಗಳು ಮನೆಗೆ ಬರುತ್ತಾಳೆ ಎಂದರೆ ....ಮಗಳಿಗೆ ಇಷ್ಟವಾದ ತಿಂಡಿತೀರ್ಥ ಎಲ್ಲ ಮಾಡುವುದರಲ್ಲಿ ಮುಳುಗಿರಬೇಕು....ಅರುಣಳ ಬಾಯಲ್ಲಿ ನೀರೂರುತ್ತಿತ್ತು. ತನಗೂ ಹಾಗೆಯೇ ತಿಂಡಿ ತೀರ್ಥ ಮಾಡಿಟ್ಟಿರುವ—ಮುದ್ದು ಮಾಡುವ, ಮಮ್ಮಿ ಇರಬಾರದಿತ್ತೆ ?

ರಜೆ ಮುಗಿದ ಮೇಲೆ ಹುಡುಗಿಯರು ತರುವ—ಅವರುಗಳಿಗೆ ಆಗಾಗ್ಗೆ ತೌರುಮನೆಯಿಂದ ಪಾರ್ಸಲ್ ಬರುವ, ಭಕ್ಷ್ಯಗಳನ್ನು ನೆನೆದು ನೆನೆದು, ಅರುಣ ಬಾಯಿ ಚಪ್ಪರಿಸುವುದರಲ್ಲಿ ಆಶ್ಚರ್ಯವೇನು ?

ತನ್ನ ಗೆಳತಿಯರು ಮನೆಗೆ ಕಾಲಿಟ್ಟ ತಕ್ಷಣ ಮಮ್ಮಿಯ ಆತುರದ ಕರೆ—'ಓ, ನನ್ನ ಡಾರ್ಲಿಂಗ್ ಬಂತು ! ನನ್ನ ಸ್ವೀಟೀ ಬಂತು ! ನನ್ನ ಪೆಟ್ ಬಂತು !' ಆ ಆಲಿಂಗನ, ಆ ಆಹ್ಲಾದಕರ ನಗು, ಆ ಪ್ರೇಮಮಯ ಮಾತುಕಥೆ, ಆಮೇಲಿನ ಎಡೆಬಿಡದ ಓಡಿಯಾಟ, ಇವೆಲ್ಲವನ್ನೂ ಕಲ್ಪಿಸಿಕೊಂಡು ಕಲ್ಪಿಸಿಕೊಂಡು, ಅರುಣಳ ಮನಸ್ಸು ಮುದುಡಿಹೋಗುತ್ತಿತ್ತು. ಮುರಿದುಮುರಿದು, ಮತ್ತೆ ಅದೇ ಜಾಡಿನಲ್ಲಿ ತೆವಳುತ್ತಿತ್ತು. ಈ ಹೊತ್ತು ಮಮ್ಮಿ ಎಣ್ಣೆನೀರಿನ ಸ್ನಾನ ಮಾಡಿಸುತ್ತಿರಬಹುದು....ಹೌದು !

'ಎಷ್ಟು ಬೇಡಾ ಅಂದ್ರೂ, ಮನೆಗೆ ಹೋದ ತಕ್ಷಣ oil-bath ಮಾಡಿಸ್ತಾರೆ ನಮಗೆ ಮಮ್ಮಿ ! ತಾನೇ ಖುದ್ದಾಗಿ ಎಣ್ಣೆ ಬಳಿದು, ಸೀಗೇ

ಪುಡಿ ಉಜ್ಜಿ, hot-hotvery very hot water ಹಾಕ್ತಾರೆ, ಮೆನ್ !'

ಸ್ನೇಹಿತೆಯರೆಲ್ಲರೂ ಹೆಮ್ಮೆಯಿಂದ ತಿಳಿಸಿದ್ದರು. ಆ oil-bath ವರ್ಣನೆಯೇ ಸುಮಾರು ಒಂದು ಗಂಟೆಕಾಲ ನಡೆದಿತ್ತು ! ಕಣ್ಣರಳಿಸಿ ಕೊಂಡು, ಬಾಯಿಬಿಟ್ಟುಕೊಂಡು, ಕೇಳಿದ್ದಳು ಅರುಣ. ಈವರೆಗೂ ಅವಳು ಕಂಡ ಸ್ನಾನವೆಲ್ಲಾ 'ಶಾಮ್‌ಪೂ ಬಾತ್' ಅಷ್ಟೇ.

ಅವರುಗಳು ಮನೆಯಿಂದ ತರುವ ಆ ಸೊಗಸಾದ ಆಟದ ಸಾಮಾನು ಗಳು, ಬೊಂಬೆ ಪುಸ್ತಕಗಳು, ಸುಂದರ ಫ್ರಾಕುಗಳು....ತುಂಬು ಬದುಕಿರ ಬೇಕಾದ ಸಮಯದಲ್ಲಿ ಒಳ್ಳೇ ಹೆಣದಂತೆ ಓಡಾಡುತ್ತಿದ್ದಳು—ಅರುಣ.

'ಮಮ್ಮಿ—ನಮ್ಮ ಮಮ್ಮಿ ಏನ್ಮಾಡ್ತಾರೆ ಗೊತ್ತಾ, ಅರುಣ? ತನ್ನ ಫ್ರೆಂಡ್ಸ್ ಮನೇಗೆಲ್ಲಾ ಕರ್ಕೊಂಡು ಹೋಗ್ತಾರೆ. 'ನೋಡಿದ್ರಾ ನನ್ನ ಮಗಳನ್ನ, ಎಷ್ಟೊಂದು ಉದ್ದಕ್ಕೆ ಬೆಳೆದುಬಿಟ್ಟಿದ್ದಾಳೆ !' ಅಂತ ನನ್ನನ್ನ show off ಮಾಡೋದಿಕ್ಕೆ !' ಸ್ನೇಹಿತೆಯರು ಜಂಬದಿಂದ ಹೇಳಿಕೊಳ್ಳು ತ್ತಿದ್ದರು—'ಆ ಆಂಟಿಗಳೆಲ್ಲ ನಮ್ಮನ್ನ ಮುದ್ದು ಮಾಡ್ತಾರೆ ; ಸಂಬಂಧಿಕ ರೆಲ್ಲ ಬರ್‍ತಾರೆ, ನಮ್ಮನ್ನ ಕರ್ಕೊಂಡು ಹೋಗ್ತಾರೆ ; ಊಟಕ್ಕೆ ಕರೆ ಯೋದು, ಪಿಕ್‌ನಿಕ್‌ಗೆ ಏರ್ಪಾಡು ಮಾಡೋದು—ಎಲ್ಲಾ ಗೊತ್ತೇ ಇದೆಯಲ್ಲಾ ? ಕೊನೆಕೊನೆಗಂತೂ ನನಗೆ ತಲೆನೋವು ಬಂದುಬಿಡತ್ತೆ ! ಯಾವಾಗಪ್ಪಾ ಅಲ್ಲಿಂದ ಬರ್‍ತೀವಿ—ಮತ್ತೆ ನಮ್ಮ ಬೋರ್ಡಿಂಗನ್ನ ಸೇರಿ ಕೋತೀವಿ ಎಂಬ ಆತುರ ಆರಂಭವಾಗಿಬಿಡತ್ತೆ !'....

ಆತುರ ! ತನಗಾಗಿದ್ದರೆ ಯಾವ ಆತುರವೂ ಇರುತ್ತಿರಲಿಲ್ಲ ! ನಿರ್ಯೋಚನೆಯಾಗಿ ಮನೆಯಲ್ಲೇ ಇದ್ದುಬಿಡುತ್ತಿದ್ದಳು !

ಮ....ನೆ !

ರಾತ್ರಿಯೆಲ್ಲಾ ನಿದ್ರೆಯಲ್ಲಿ ಒಂದೇ ಸಮನೆ ಬಡಬಡಿಸಿದಳು—'ಮನೆ ....ಮಮ್ಮಿ ! ಮಮ್ಮಿ....ಮನೆ ! ಮನೆ....ಮಮ್ಮಿ' ಎಂದು ! ಏನೇನೋ ಸ್ವಪ್ನಗಳು !

ಜೀಸಸ್‌ನಿಂದ ಅಪ್ಪಣೆ ಕೇಳಿ ತನ್ನ ಮಮ್ಮಿ ಇಳಿದು ಬಂದ ಹಾಗೆ, ತನ್ನನ್ನು ಅಪ್ಪಿ ಮುದ್ದಿಟ್ಟು, 'ಮನೆಗೆ' ಕರೆದುಕೊಂಡು ಹೋದ ಹಾಗೆ, ಅಲ್ಲಿ ಹೊತ್ತಿಗೊಂದು ತಿಂಡಿಯನ್ನು ಮಾಡಿಕೊಟ್ಟ ಹಾಗೆ, ಬಂದವರಿಗೆಲ್ಲ

'ನನ್ನ ಮಗುವನ್ನ ನೋಡಿ? ಎಷ್ಟು ಬೆಳೆದುಬಿಟ್ಟಿದ್ದಾಳೆ!' ಎಂದು ಪ್ರದರ್ಶನ ಮಾಡಿದ ಹಾಗೆ! ಸ್ನೇಹಿತೆಯರ ಮನೆಗೆಲ್ಲ ಕರೆದುಕೊಂಡು ಹೋದ ಹಾಗೆ, ದಿನಾ ಮೂರು ಹೊತ್ತೂ oil-bath ಮಾಡಿಸಿದ ಹಾಗೆ—ತಾನೇ ಖುದ್ದಾಗಿ ಎಣ್ಣೆ ತಿಕ್ಕಿ, ಸೀಗೇಪುಡಿ ಉಜ್ಜಿ....

ಹಿಂತಿರುಗಿ ಬರುವಾಗ ಒಂದು ಟ್ರಂಕಿನ ತುಂಬಾ ಮಮ್ಮಿ ತೆಗೆದು ಕೊಟ್ಟ ಸಾಮಾನುಗಳು! ಅಬ್ಬಾ, ಎಂಥಾ ಸೊಗಸಾದ ಫ್ರಾಕುಗಳು. ಏನು ಆಟದ ಸಾಮಾನುಗಳು, ಬೊಂಬೆಯ ಪುಸ್ತಕಗಳು! ಒಂದು ದೊಡ್ಡ ಬುಟ್ಟಿಯ ತುಂಬಾ ತಿಂಡಿ!

ತನ್ನ ಸ್ನೇಹಿತೆಯರು ಮನೆಯಿಂದ ತರುವ ಎಲ್ಲ ತರಹದ ಭಕ್ಷ್ಯಗಳೂ ಅವಕ್ಕೂ ಹೆಚ್ಚಿನ ತರಹವೂ ಅದರಲ್ಲಿ! ಅವರುಗಳೇ ಕಂಡರಿಯದ—ತಿಂದು ನೋಡದ ತಿಂಡಿಗಳು! ಅವರುಗಳು ತರುವುದಕ್ಕಿಂತ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ! ಅವರುಗಳೇ ಮೂಗಿನ ಮೇಲೆ ಬೆರಳಿಟ್ಟುಕೊಂಡು ಉದ್ಗರಿಸುವರು—'My men! What is all this'

ಆಗ ಇವಳು ಹೆಮ್ಮೆಯಿಂದ ನಕ್ಕು ವಿವರಿಸುತ್ತಾಳೆ—'See men, my mummy... '

ಧಡೀರನೆ ಎಚ್ಚರವಾಯಿತು! ಎದ್ದು ನೋಡುತ್ತಾಳೆ, ಬುಟ್ಟಿಯೂ ಇಲ್ಲ, ತಿಂಡಿಯೂ ಇಲ್ಲ, ಟ್ರಂಕೂ ಇಲ್ಲ, ಮಮ್ಮಿಯೂ ಇಲ್ಲ!

ಇನ್ನು....ಮನೆ!

ಹುಂ....ಎಲ್ಲಿ ಬಂತು ತನಗೆ ಮನೆ?

* * *

ಸ್ನೇಹಿತೆ ನಿರ್ಮಲಾನ ಬಲವಂತಕ್ಕೆ ಕಟ್ಟುಬಿದ್ದು, ಅವಳ ಮನೆಗೆ ಹೋಗಿ ಬಂದಿದ್ದಳು ಅರುಣ—ಒಂದು ಸಲ. ಅದೇ ಅವಳ ಕೊನೇ ರಜ. ಮತ್ತೆ ಯಾರು ಎಷ್ಟು ಕರೆದರೂ ಆಗ್ರಹಪಡಿಸಿದರೂ ಅಲ್ಲಾಡಲಿಲ್ಲ!

ಹೌದು—ಅಲ್ಲಿ, ಅವಳ ಮನೆಯಲ್ಲಿ, ನಿರ್ಮಲಾಗೆ ನಡೆಯುವಂಥ ಉಪಚಾರ, ಸಿಗುವ ಆದರ, ಎಲ್ಲಕ್ಕಿಂತ ಮಿಗಿಲಾಗಿ ಅವಳ ಮಮ್ಮಿ ಅವಳ ಬಗ್ಗೆ ತೋರುವ ಪ್ರೇಮ, ಇವು ಅರುಣಳನ್ನು ಅಸೂಯೆಯ ಕಡಲಲ್ಲಿ

ನೂಕಿತ್ತು. ಕಾನ್ವೆಂಟಿಗೆ ಈ ತಾಯಂದಿರು ಬಂದಾಗ, ಮಕ್ಕಳು ಅವರನ್ನು ಕಟ್ಟಿಕೊಂಡಾಗ, ಅರುಣ ಸಂಕಟದಿಂದ ಅಳುತ್ತಿದ್ದಳು—ಗುಟ್ಟಾಗಿ.

೨

ಬೋರ್ಡರ್ಸ್‌ಗಳಿಗೆಲ್ಲಾ (ಕಾನ್ವೆಂಟಿನಲ್ಲೇ ಇರುವ ವಿದ್ಯಾರ್ಥಿನಿಯರು) ಮನೆಯಿಂದ ಆಗಾಗ್ಗೆ ಪಾರ್ಸಲ್‌ಗಳು ಬರುತ್ತಿತ್ತು. ಆಗ ಅವರುಗಳ ಹೆಮ್ಮೆಯನ್ನು—ಸಂಭ್ರಮವನ್ನು ನೋಡಬೇಕು! ಅವರುಗಳನ್ನೇ, ಅದನ್ನೇ ನೋಡುತ್ತಾ ಅರುಣ ನಿಂತುಬಿಡುತ್ತಿದ್ದಳು. ತನಗೂ ಯಾರಾದರೂ ಕಳುಹಿಸಬಾರದೆ ?

ಹಿಂದೂ ಸ್ನೇಹಿತೆಯರ ಮೂಲಕ ಹಬ್ಬಹುಣ್ಣಿಮೆಗಳ ವಿಚಾರ ತಿಳಿಯುತ್ತಿತ್ತು, ಪದ್ಧತಿಗಳ ಅರಿವಾಗುತ್ತಿತ್ತು, ಕುತೂಹಲ ಕೆರಳುತ್ತಿತ್ತು. ಹುಟ್ಟಿನಲ್ಲಿ ಹಿಂದೂವಾದರೂ ಕ್ರಿಶ್ಚಿಯನ್ನರ ಬಾಳ್ವೆ ತಾನೆ ಅವಳದು?

"ಗೋಕುಲಾಷ್ಟಮಿ ಆಯಿತಂತೆ, ಅದಕ್ಕೇ ಮಮ್ಮಿ ಕಳಿಸಿದ್ದಾರೆ—ಈ ತಿಂಡಿ ಬುಟ್ಟೀನ" ಎಂದಾಗ ಭಾವಪರವಶಳಾಗಿ ನಿಲ್ಲುತ್ತಿದ್ದಳು.

ಗೋ...ಕು..ಲಾ..ಷ್ಟ..ಮಿ ! ಗೋ..ಕು..ಲಾ...ಷ್ಟ..ಮಿ ..

ಗೋಕುಲಾಷ್ಟಮಿ ಕೃಷ್ಣನು ಹುಟ್ಟಿದ ದಿನ ; ಹಿಂದೂಗಳಿಗೆ ಶ್ರೇಷ್ಠವಾದ ಹಬ್ಬ ! ತನ್ನ ಮಮ್ಮಿಯನ್ನು ಮಟ್ಟಿಗೆ ಜೀಸಸ್ ಕರೆಸಿಕೊಳ್ಳದಿದ್ದಲ್ಲಿ ....ಅವರುಗಳು ವರ್ಣಿಸುವಂತೆ ತಾನೂ ಈ ವೇಳೆಗೆ ಚಪ್ಪರ ಕಟ್ಟಿ, ಹೂ ಹಣ್ಣಿನಿಂದ ಅಲಂಕಾರ ಮಾಡಿ, ಆರತಿ ಮಾಡಿ, ಎಲ್ಲರನ್ನೂ ಅರಶಿನ ಕುಂಕುಮಕ್ಕೆ ಕರೆದು....ಸ್ನೇಹಿತೆಯರ ವಿವರಣೆಯನ್ನು ಮತ್ತೂ ಮತ್ತೂ ಕೇಳಿ ತಿಳಿದುಕೊಳ್ಳುತ್ತಿದ್ದಳು.

ದೀಪಾವಳಿಯ ಉಡುಗೊರೆಯನ್ನು ಹೆಮ್ಮೆಯಿಂದ ಸ್ನೇಹಿತೆಯರು ತೋರಿಸಿದಾಗ ಕರುಳು ಕಿತ್ತುಬರುತ್ತಿತ್ತು.

ತನಗೆ ದೀಪಾವಳಿ ಯಾವುದೋ, ಯುಗಾದಿ ಯಾವುದೋ, ಏನೂ ಗೊತ್ತಿಲ್ಲ ! ಕ್ರಿಸ್‌ಮಸ್ ಒಂದು ಚೆನ್ನಾಗಿ ಗೊತ್ತುಂಟು !

ಯುಗಾದಿಯ ದಿವಸ ಬೇವು-ಬೆಲ್ಲ ತಿನ್ನಲೇಬೇಕಂತೆ ! ಯಾಕೆ !

ಹೇಗಿರತ್ತೊ? ಸಂಕ್ರಾಂತಿಯಲ್ಲಿ ಎಳ್ಳು ಬೀರಬೇಕಂತೆ—ಮನೆಮನೆಗೂ ಹೋಗಿ! ಚಿಕ್ಕ ಮಕ್ಕಳು ಬೊಂಬೆ ಎತ್ತಿಕೊಂಡು ಹೋಗಬೇಕಂತೆ! ಈ ಎರಡು ಹಬ್ಬಕ್ಕೂ ಒಬ್ಬಟ್ಟೇ ಆಗಬೇಕಂತೆ! ಆ ಒಬ್ಬಟ್ಟು ಹೇಗಿರುವುದೋ —ನೋಡುವುದಕ್ಕೆ? ತಿನ್ನುವುದಕ್ಕೆ?

ಆ ಕೃಷ್ಣ ತುಂಬಾ ತುಂಟನಂತೆ! ಅವನ ತುಂಟತನದ ಬಗ್ಗೆಯೇ ಒಂದು ಪುಸ್ತಕ ಇದೆಯಂತೆ! ಸದಾ ಕರಿಯ ಹಾವಿನ ಮೇಲೆ ಡ್ಯಾನ್ಸ್ ಮಾಡ್ತಾ ಇರುತ್ತಾನಂತೆ! ಅಲ್ಲಾ, ಆ ಹಾವು ಕಚ್ಚುವುದಿಲ್ಲವೇ?

ಗಣಪತಿ ದೇವರಿಗೆ ಆನೆಗಿಂತ ದೊಡ್ಡ ಸೊಂಡಿಲು ಇದೆಯಂತೆ! ಮೊದಲು ಎಲ್ಲರ ಹಾಗೆಯೇ ಮುಖ ಇತ್ತಂತೆ! ಆಮೇಲೆ ಸೊಂಡಿಲು ಬಂತಂತೆ! ಗಣಪತಿ ಹಬ್ಬಕ್ಕೆ ಕರಿಗಡಬೇ ಆಗಬೇಕಂತೆ! ಇಲ್ಲದಿದ್ರೆ ಆ ಸೊಂಡಿಲು ದೇವರಿಗೆ ಸಿಟ್ಟು ಬಂದು, ಎಲ್ಲದಕ್ಕೂ ಅಡ್ಡಿ ಬರುತ್ತಾನಂತೆ! ಅಲ್ಲಾ, ಏನು ತಮಾಷೆ! ಇಲಿಯ ಮೇಲೆ ಸವಾರಿ ಮಾಡಿಕೊಂಡು ಬರ್ತಾನಂತೆ! ಅಂದು, ನೂರೆಂಟು ಮನೆಗಳಿಗೆ ಹೋಗಿ, ನಮಸ್ಕಾರ ಮಾಡಿ ಬರಬೇಕಂತೆ! ಈ ಗಣಪತಿಗೆ ಮದುವೆಯೇ ಆಗಿಲ್ಲವಂತೆ! ಅವನ ತಾಯಿ ಗೌರಮ್ಮನಂತೆ, ತುಂಬಾ ಒಳ್ಳೆಯವಳಂತೆ; ಹೌದು, ಆ ಫೋಟೋ ನೋಡಿದರೇನೇ ಗೊತ್ತಾಗತ್ತೆ

ಎಲ್ಲರನ್ನೂ-ನಮ್ಮೆಲ್ಲರನ್ನೂ ಹುಟ್ಟಿಸಿದವನು ಬ್ರಹ್ಮ ಅನ್ನೋವನು ಅಂತೆ! ಅವನಿಗೆ ನಾಲ್ಕು ತಲೆಯಂತೆ! ಅಬ್ಬಾ, ಸಾಕಾ? ಅಲ್ಲಾ, ಅದು ಹೇಗೆ ಹಲ್ಲು ಉಜ್ಜುತ್ತಾನೆ? ನೆಗಡಿ ಬಂದಾಗ ಏನು ಮಾಡುತ್ತಾನೆ? ಬ್ರಹ್ಮನ ಹೆಂಡತಿ ಸರಸ್ವತಿಯಂತೆ; ಸದಾ ಕೈಯಲ್ಲಿ ವೀಣೆ! ಕೈ ನೋಯು ವುದಿಲ್ಲವಾ? ಸದಾ ವೀಣೆ ಬಾರಿಸ್ತಾ ಇದ್ರೆ, ಮನೆ ಕೆಲಸಮಾಡುವವರು ಯಾರು?

ಎಲ್ಲರಿಗಿಂತ ದೊಡ್ಡ ದೇವರು ಮಹಾವಿಷ್ಣು! ಸದಾ ಮಲಗಿರುವುದೇ ಕೆಲಸ! ಅವನ ಹೆಂಡತಿಯೇ ಲಕ್ಷ್ಮಿ. ಹಾ! ಲಕ್ಷ್ಮಿ ಎಷ್ಟು ಸುಂದರವಾಗಿ ದ್ದಾಳೆ! ಅವಳು ನಿಂತಿರುವ ಭಂಗಿಯೇ ಸಾಕು! ಆದರೆ ...ಎಲ್ಲಾ ಸರಿ, ಆದರೆ....ಆಕೆ ಅಷ್ಟು ದೊಡ್ಡವಳು, ಆ ಪುಟ್ಟ ಕಮಲದ ಮೇಲೆ ನಿಂತಿ ದ್ದಾಳಲ್ಲ—ತಡೆಯುವುದೇ ಅವಳ ಭಾರ? ಕಮಲ ಹರಿದು ಹೋಗು

ವುದಿಲ್ಲವೇ? ಸ್ನೇಹಿತೆಯರಿಗೆ ಬೇಸರವಾಗುವವರೆಗೂ ಕೂರಿಸಿ ಕೇಳು ತ್ತಿದ್ದಳು—ಹಿಂದೂ ದೇವರ ಹಬ್ಬಗಳು, ಪುರಾಣ ಕಥೆಗಳ ವಿಚಾರ!

* * *

ಒಂದು ದಿನ ಕ್ಲಾಸಿನಲ್ಲಿ ಪಾಠ ನಡೆಯುತ್ತಿತ್ತು. ಇದ್ದಕ್ಕಿದ್ದಂತೆ ಮದರ್ ಲೂಸಿ—(ಅವರಿಗೆ ಅದೇನು ಬಂತೋ) ಹಿಂದೂ ದೇವರುಗಳನ್ನು ಬೈಯಲಾರಂಭಿಸಿದರು.

'ಸಾಕಪ್ಪಾ ಸಾಕು, ಅವರುಗಳ ಸಹವಾಸ! ಒಬ್ಬೊಬ್ಬ ದೇವರಿಗೂ ನೂರೆಂಟು ಕೈಗಳು, ನೂರೆಂಟು ತಲೆಗಳು! ಆ ನಿಮ್ಮ ಋಷಿಗಳೋ— ಆಹಾ, ಒಬ್ಬೊಬ್ಬರೂ ಒಂದು ರೋಮಿಯೋನೇ ಸರಿ! ಊರಲ್ಲಿರೋ ಹೆಣ್ಣುಗಳನ್ನೆಲ್ಲ ಎತ್ತಿಕೊಂಡು ಬರೋದು... ಪರಸ್ತ್ರೀಯರನ್ನು ಕೆಡಿಸೋದು –ಎದುರುಬಿದ್ದವರಿಗೆಲ್ಲ ಶಾಪಕೊಡೋದು! ಅವರ ತಪಸ್ಸೋ ಅವರೋ! ಇನ್ನು ನಿಮ್ಮ ಪ್ರಸಿದ್ಧ ದೇವರಾದ ಕೃಷ್ಣ! ಅವನೊಬ್ಬ ಶುದ್ಧ ಪೋಲಿ! ಅವನು ಆಡದ ಆಟ ಇಲ್ಲ, ಮಾಡದ ಕುಚೇಷ್ಟೆ ಇಲ್ಲ! ಆದರೂ ಅವನಿಗೆ ನೀವುಗಳು ಪೂಜೆ ಮಾಡಿದ್ದೂ ಮಾಡಿದ್ದೇ! ನಾನ್‌ಸೆನ್ಸ್!'

ಕ್ಲಾಸಿನಲ್ಲಿ ಕುಳಿತಿದ್ದ ಮಿಕ್ಕ ಜನಾಂಗದ ಹುಡುಗಿಯರೆಲ್ಲ ಗೊಳ್ಳೆಂದು ನಕ್ಕಿದ್ದರು. ಹಿಂದೂ ಹುಡುಗಿಯರ ಪಕ್ಕ ತಿರುಗಿ ವ್ಯಂಗ್ಯವಾಗಿ ನೋಡಿ ದ್ದರು. ಆದರೆ ಹಿಂದೂ ಹುಡುಗಿಯರು ತುಟಿಪಿಟಕ್ಕೆನ್ನಲಿಲ್ಲ. ತಮಗೆ ಇದು ಅನ್ವಯಿಸಲೇ ಇಲ್ಲವೇನೋ ಎಂಬಂತೆ ಗಪ್‌ಚಿಪ್ಪಾಗಿ ಕುಳಿತಿದ್ದವು—ಒಳ್ಳೇ ಕಲ್ಲುಗೊಂಬೆಗಳಂತೆ! ಪಾಪ, ಇನ್ನೇನು ಮಾಡಿಯಾವು? ಹೃದಯದಲ್ಲಿ ಕೋಪ ಸಿಡಿದೆದ್ದು ಉರಿಯುತ್ತಿತ್ತು!

'ನಿಜವೇ? ಛೇ ಕೃಷ್ಣ ಯಾಕೆ ಹಾಗೆ ಮಾಡಿದ?' ಅರುಣ ಒದ್ದಾಡಿ ದ್ದಳು—'ಮಮ್ಮಿ ಇದ್ದಿದ್ದರೆ ಹೇಳುತ್ತಿದ್ದಳು.'

ಅಲ್ಲಿದ್ದ ಆಂಗ್ಲೇಯ ವಿದ್ಯಾರ್ಥಿನಿಯರೆಲ್ಲಾ ಭಾರತೀಯ ವಿದ್ಯಾರ್ಥಿನಿ ಯರನ್ನು ತುಂಬ ಕೀಳಾಗಿ ಕಾಣುತ್ತಿದ್ದರು 'Poor girls-Heathens! Heathens..' ಎಂದು, ಅಲ್ಲಿಯ ಮದರ್ಸ್-ಸಿಸ್ಟರ್ಸ್‌ಗಳ ಜೊತೆಗೂ ಉದ್ಗರಿಸುತ್ತಿದ್ದರು ನಾವೆಲ್ಲಾ ಕ್ಯಾಥಲಿಕ್ಸ್ ಆಗಿಬಿಟ್ರೆ—ದೇವತೆಗಳಾಗಿ

ಬಿಡ್ತೀವೆ !' ಎನ್ನುವ ಭಾವನೆಯನ್ನು ಈ Poor Heathensನಲ್ಲಿ ಬರಿಸುತ್ತಿದ್ದರು.

ಆದರೆ ಅರುಣಳಿಗೆ ಮಾತ್ರ ಹಿಂದೂವಾಗಿಯೇ ಉಳಿಯುವುದಕ್ಕೆ ಇಷ್ಟ. ಅವಳಿಗೆ ಅದರಲ್ಲಿ ಯಾವುದೋ ಸೆಳೆತ. 'ಮಮ್ಮಿ ಇದ್ದಿದ್ರೆ, ಸುಮ್ಮನೆ ಇರ್ತಿದ್ರಾ ? ಅವರ ಹಿಂದೂ ಗಾಡ್ಸ್—'ಗಣಪತಿ, ಕೃಷ್ಣ, ಬ್ರಹ್ಮ, ವಿಷ್ಣು, ಲಕ್ಷ್ಮಿ, ಸರಸ್ವತಿ ಎಲ್ಲಾ ನನ್ನನ್ನ ಸುಮ್ಮನೆ ಬಿಡ್ತಾರಾ ? ನಾನು ಯಾವತ್ತೂ ಹಿಂದೂವಾಗೇ ಉಳಿತೀನಿ.. .' ಇದು ಅವಳ ನಿರ್ಧಾರ ಹಾಗೂ ಪ್ರಶ್ನೆ.

೩

'ಅರುಣ್, ನಿಂಗೊಂದು ಕಾಗದ ಬಂದಿದೆ !....' ಶಾಂತ ಒಂದೇ ಏಟಿಗೆ ಅಷ್ಟೊಂದು ಮಹಡಿಯ ಮೆಟ್ಟಲುಗಳನ್ನೂ ಹತ್ತಿಕೊಂಡು ಬಂದಳು.

ಆ ಪತ್ರ ಅರುಣಳ ಗಾರ್ಡಿಯನ್‌ನಿಂದ, ಎಂದವಳು ಊಹಿಸಿದ್ದಳು. ಅದು ಬಂದಂದು ಅರುಣ ಖುಷಿಯಾಗಿರುತ್ತಾಳೆ ಎಂಬುದೂ ಗೊತ್ತು. ಹಾಗಿರುವಲ್ಲಿ, ಅತ್ಯಂತ ಸ್ನೇಹಿತೆಯಾದ ಅವಳು ಹೀಗೆ ಕುಣಿಯುವುದು ಸ್ವಾಭಾವಿಕವೇ !

ಕವರನ್ನು ಒಡೆವ ಮುನ್ನ ಅದನ್ನು ಎರಡು ಮೂರು ಬಾರಿ ತಿರುಗಿಸಿ ನೋಡಿದಳು ಅರುಣ ; ತೂಕ ಮಾಡುವವಳಂತೆ ಎತ್ತಿ ಹಿಡಿದಳು.

'ವೈ ಮೆನ್—ಒಡೆದು ಓದುವುದಿಲ್ಲವೆ ?' ಶಾಂತ ಅಚ್ಚರಿಯಿಂದ ಕೇಳಿದಳು.

'ಒಡೆದು ಓದೋದಕ್ಕಿಂತ...' ಅರುಣ ನಿಧಾನವಾಗಿ ಹೇಳಿದರೂ, ಧ್ವನಿಯಲ್ಲಿ ಉದ್ವೇಗವಿತ್ತು—'ಹೀಗೇ ನೋಡ್ತಾ ನಿಲ್ಲೋದರಲ್ಲೇ ಆನಂದ! ಒಡೆದು ಓದಿದ ತಕ್ಷಣ ಆತುರವೆಲ್ಲ ಹೋಗಿಬಿಡತ್ತೆ—ಸಂತೋಷ ಕಮ್ಮಿಯಾಗತ್ತೆ.'

'ಪಾಪ !.. .' ಶಾಂತ ನೊಂದುಕೊಂಡಳು—'ಅವಳಿಗೆ ಬರೋದೇ ಇದೊಂದು ಕಾಗದ ; ಅದೂ ಏನು, ಯಾವಾಗಲಾದರೊಮ್ಮೆ. ಅದಕ್ಕೇ ಹೀಗೆ ಆಡ್ತಾಳೆ. ಈ ವಯಸ್ಸಿನಲ್ಲೇ ದಿಕ್ಕಿಲ್ಲದ ಪರದೇಶಿ—ಪಾಪ !'

ಪತ್ರವನ್ನು ಓದಿದ ಅರುಣಳ ಮುಖ ಅಗಲವಾಯಿತು ; ಕಣ್ಣುಗಳು ಆನಂದದಿಂದ ಮಿನುಗಿದವು.

'ಏನು ಸಮಾಚಾರ, ಮೆನ್ ?' ಶಾಂತ ತಡೆಯಲಾರದೆ ಮೆಲುದನಿಯಲ್ಲಿ ಕೇಳಿದಳು.

'ಎಲ್ಲಿ ನೋಡೋಣ—ಊಹಿಸು ?' ಅರುಣ ಅವಳೆಡೆ ತಿರುಗಿದಳು.

'ನಿನ್ನ ಗಾರ್ಡಿಯನ್ ನಿನ್ನ ಮದುವೇನ ಗೊತ್ತುಮಾಡಿದ್ದಾರೆ—ಹುಡುಗ ಅಮೇರಿಕಾದ ಪ್ರೆಸಿಡೆಂಟ್‌ನ ಮಗ. ಬೇಗ ಮದುವೆ ಮಾಡಿ ನಿಮ್ಮಿಬ್ಬರನ್ನೂ ಸೌತ್ ಪೋಲ್‌ಗೆ ಕಳಿಸ್ತಾರೆ, ಹನಿಮೂನ್‌ಗೆ....' ಶಾಂತ ಒಂದೇ ಉಸುರಿಗೆ ಒಳ್ಳೆ ಬುಡಬುಡಿಕೆಯವನಂತೆ ನುಡಿದಳು.

'ಹೌದು ಮೆನ್, ಅಮೇರಿಕಾದ ಪ್ರೆಸಿಡೆಂಟ್‌ನ ಮಗ ಎರಡೂ ಕೈಗಳನ್ನೂ ಚಾಚಿಕೊಂಡು ನಿಂತುಬಿಟ್ಟಿದ್ದಾನಂತೆ—ನನ್ನನ್ನೇ ಮದುವೆ ಆಗ್ಬೇಕೂಂತ !' ಅರುಣಳೂ ಜೋಡಿಸಿದಳು—'ನಾನೇನಾದ್ರೂ ಹೋಗಲಿಲ್ವೋ, ಸನ್ಯಾಸಿಯಾಗಿ ಇಂಡಿಯಾಗೇ ಬಂದುಬಿಡ್ತಾನಂತೆ ! ಗೊತ್ತೆ ?' ಈರ್ವರೂ ನಕ್ಕರು.

'ನನ್ನ ಕೇಳಿದ್ರೆ....' ಅರುಣ ಗೆಳತಿಯ ಬೆನ್ನುತಟ್ಟಿದಳು—'ನೀನು ಕಥೆ, ಕವನ ಬರೀಬಹುದು. ಒಳ್ಳೆ ಕಲ್ಪನಾಶಕ್ತಿ ಇದೆ ನಿಂಗೆ.'

'ಹೌದು, ನಂಗೂ ಅವೆಲ್ಲಾ ಇಷ್ಟ....' ಶಾಂತ ನಿಟ್ಟುಸಿರು ಬಿಟ್ಟಳು. 'ಆದರೆ ಈ ಲೆಖ್ಖ, ಜಾಮಿಟ್ರಿ, ಸೈನ್ಸ್, ಜಾಗ್ರಫಿ, ಇವುಗಳ ಮಧ್ಯೆ ಕಲ್ಪನಾಶಕ್ತಿ ಓಡಬೇಕಲ್ಲಾ ? ಅದಿರಲಿ—ನಿನ್ನ ಗಾರ್ಡಿಯನ್ ಏನು ಬರೆದಿದ್ದಾರೆ, ಏನು ವಿಶೇಷ—ತಿಳಿಸಲೇ ಇಲ್ಲವಲ್ಲಾ ?'

'ನನ್ನ ಗಾರ್ಡಿಯನ್ ಬರ್ತಾರಂತೆ.'

'ನಿಜವಾಗಿಯೂ !' ಶಾಂತಳ ಕಣ್ಣುಗಳು ಸಂತೋಷದಿಂದ ಹೊಳೆದವು. ಸ್ನೇಹಿತೆಯನ್ನು ಅಪ್ಪಿಕೊಂಡಳು. ಎಂತಹ ಸಂತೋಷಕರ ಸುದ್ದಿ !

'ಯಾವಾಗ ಬರ್ತಾರಂತೆ ? ಅಮೇರಿಕಾದಿಂದ ತಾನೆ ?'

'ಊ, ಇನ್ನೇನು ಈ ತಿಂಗಳೊಳಗೆ ಅನ್ನು.'

'ತುಂಬಾ ಸಂತೋಷ, ಮೆನ್ ; ಆದರೆ ಒಂದು—ನಮ್ಮನ್ನೆಲ್ಲಾ ಮರೀಬಾರದು—ಗೊತ್ತಾ ?'

ಅರುಣಳ ಗಾರ್ಡಿಯನ್ ಚಂದ್ರಶೇಖರ್ ಎನ್ನುವವರು. ಅವಳು ಅವರನ್ನು ಕರೆಯುತ್ತಿದ್ದುದು 'ಚಂದ್ರೂ ಅಂಕಲ್' ಎಂದು. ಅವರು ಅವಳ ಡ್ಯಾಡಿಯ ಬಾಲ್ಯಸ್ನೇಹಿತರು. ಹುಟ್ಟಿದಂದಿನಿಂದಲೂ ಬೆಳೆದು ಬಂದ ಗೆಳೆತನ ಅದು.

'ನಾವಿಬ್ಬರೂ ಒಟ್ಟಿಗೆ ಸ್ಕೂಲಿಗೆ ಹೋಗುತ್ತಿದ್ದೆವು; ಒಟ್ಟಿಗೆ ಒಬ್ಬರನ್ನೊಬ್ಬರು ಹೊಡೆಯುತ್ತಿದ್ದೆವು. ಕೊನೆಗೆ ನನ್ನ ಅಮ್ಮ ಇದ್ದುಕೊಂಡು—'ಯಾಕೋ ಆ ಪಕ್ಕದ ಮನೆ ರುಕ್ಕಮ್ಮನ ಮಗನ ರಾಶಿ ನಮ್ಮ ಹುಡುಗನಿಗೆ ಹೊಂದೋದಿಲ್ಲ ಅಂದ್ರೆ....' ಎಂದಂದು, 'ನನ್ನನ್ನ ಬೇರೆ ಊರಿಗೆ ಕಳುಹಿಸಿದಾಗಲೇ, ನಮ್ಮನ್ನ ಬೇರೆ ಮಾಡಿದಾಗಲೇ ನನಗೆ ಪಾಸಾಗಿದ್ದು.' ಬಾಲ್ಯದ ನೆನಪು ಮರುಕಳಿಸಿದಾಗಲೆಲ್ಲ, ಚೂರುಚೂರಾಗಿ ಪುಟ್ಟ ಅರುಣಳಿಗೆ ತಿಳಿಸಿದ್ದುಂಟು.

ಆ ಹೊತ್ತು ಅರುಣಳಿಗೆ ಎಲ್ಲಿಲ್ಲದ ಕುತೂಹಲ. ಸೀಮೆಂಟಿನಿಂದ ಅಂಟಿಸಿದ ಗೊಂಬೆಯಂತೆ ಎದುರಲ್ಲಿ ಕುಳಿತು ಒಂದು ಪ್ರಶ್ನೆ ಕೇಳುತ್ತಿದ್ದಳು. ಚಂದ್ರು ಅಂಕಲ್ ಆಗಿರುವ ಹೊತ್ತಿಗೆ ಬೇಸರವಿಲ್ಲದೆ ಉತ್ತರಿಸುತ್ತಿದ್ದರು.

'ನಮ್ಮಮ್ಮನಿಗೆ ನಿನ್ನ ಅಜ್ಜಿ—ಅದೇ ಪಕ್ಕದ ಮನೆ ರುಕ್ಕಮ್ಮ, ಅವರನ್ನು ಕಂಡರೆ ಅಷ್ಟಕ್ಕಷ್ಟೇ ಮಗೂ. ಕಾರಣ, ಒಂದು ದಿನ, ಒಂದು ದೊಡ್ಡ ಬಟ್ಟಲು ಪೂರ್ತಿ ಕಾಫಿಪುಡಿಯನ್ನು ಎರವಲು ತಗೊಂಡು ಹೋದರಂತೆ ರುಕ್ಕಮ್ಮ. ಎಷ್ಟೆಷ್ಟು ಜ್ಞಾಪಿಸಿದರೂ ಹಿಂದಿರುಗಿಸಲು ಮರೆತುಬಿಟ್ಟರಂತೆ! ಇನ್ನೊಂದು ದಿನ—'ಅರ್ಜೆಂಟಾಗಿ ಹಾಲು ಬೇಕು; ಬೀಗರು ಬಂದಿದ್ದಾರೆ; ಹಾಲಿನವ ಬಂದ ಕೂಡಲೆ ತಂದುಕೊಡ್ತೀನಿ'—ಎಂದು ಹೇಳಿ, ಸರಿಯಾಗಿ ಆರು ಲೋಟ ಕಾಫಿಗೆ ಆಗುವಷ್ಟು ಹಾಲನ್ನು ತಗೊಂಡು ಹೋದರಂತೆ—ಇದೇ ರುಕ್ಕಮ್ಮ. ಹಾಲಿನವ ಬಂದಾಯಿತು—ಹೋಗಾಯಿತು, ಆದರೆ ರುಕ್ಕಮ್ಮನ ಪತ್ತೆಯೇ ಇಲ್ಲ! ಅಲ್ಲಾ, ಬಂದ ಆ ಬೀಗರ ಜೊತೆಗೇ ಅವರೂ ಊರಿಗೆ ಹೊರಟುಬಿಡಬೇಕೆ? ಅಂದಿನಿಂದ ನನ್ನಮ್ಮನೂ ನಾಣಿ ಅಮ್ಮನೂ ಬೇರೆ ಬೇರೆ ರಸ್ತೇಲಿ ರಾಮಮಂದಿರಕ್ಕೆ! ಅಪ್ಪಿತಪ್ಪಿ ಒಂದೇ ರಸ್ತೇಲಿ ಹೋದರೂ ಬೇರೆ ಬೇರೆ ಫುಟ್‌ಪಾತ್‌ನಲ್ಲಿ! ಅಲ್ಲೂ ಅಷ್ಟೆ, ಒಬ್ಬರ ತೊಡೆಯ ಮೇಲೆ ಇನ್ನೊಬ್ಬರು ಕುಳಿತುಕೊಳ್ಳುತ್ತಿದ್ದವರು, ಈಗ ಪೂರ್ವ

ಪಶ್ಚಿಮದಲ್ಲಿ! ಹಾಗಿರುವಾಗ, ಅವರ ಮಕ್ಕಳು ಜೊತೆಗೂಡುವುದುಂಟೇ! ಅಂತೂ, ನಿಸ್ಸಜ್ಜಿಯ ಕಾಫಿಪುಡಿ--ಹಾಲಿನ ಸಾಹಸ ನನ್ನ ಪ್ರಯಾಣಕ್ಕೆ ನಾಂದಿಯಾಯಿತು...' ಚಂದ್ರೂ ಅಂಕಲ್ ಹೀಗೆ ಪುರಾಣವನ್ನೇ ಬಿಚ್ಚು ತ್ತಿದ್ದರು—ಒಮ್ಮೊಮ್ಮೆ

'ಮತ್ತೆ ನೀವೂ-ನನ್ನ ಡ್ಯಾಡಿ ಸ್ನೇಹಿತರಾದದ್ದು ಹೇಗೆ?'

'ಮತ್ತೆ ಸ್ನೇಹಿತರಾಗೋದಿಕ್ಕೆ ಅಲ್ಲಿ ಸ್ನೇಹ ಮುರಿದಿದ್ದರೆ ತಾನೆ, ಮಗು? ಬಳ್ಳಿ ಮುರಿದಿರಲಿಲ್ಲ—ಯಾವುದೋ ಒಣಕೊಂಬೆಯ ಛಾಯೆ ಬಿದ್ದಿತ್ತು ಅಷ್ಟೇ'

'ಅಂದರೆ?'

'ನಮ್ಮಮ್ಮನಿಗೆ ತಿಳಿಯದ ಹಾಗೆ ನಾನು ಯಾವತ್ತೂ ನಾಣಿಗೆ ಕಾಗದ ಹಾಕ್ತಿದ್ದೆ. ಅವನೂ ನನಗೆ ವಿಶದವಾಗಿ ತಮ್ಮ ಸ್ಕೂಲಿನ ಎರಡು ಜಡೆ ಚೂಡಾಮಣಿ, ಜುಮುಕಿ ಸೋಮನಾಯಕಿ, ಹೈಹೀಲ್ ಗುಂಡಮ್ಮ, ಮೇಕಪ್ ರಂಗಮ್ಮ, ಲೆಕ್ಚರರ್ ಮರಿಯಮ್ಮ, ಕಮ್ಯಾಂಡರ್-ಇನ್-ಚೀಫ್ ಕಮಲಮ್ಮ, ಇವರುಗಳ ವಿಷಯವನ್ನೆಲ್ಲಾ ತಿಳಿಸುತ್ತಿದ್ದ ಪಾಪ!.... ಅವರುಗಳನ್ನು ಗಮನಿಸೋದ್ರಲ್ಲಿ ನಾಣಿಗೆ ಓದೋಕ್ಕೆ ಪುರಸೊತ್ತೆಲ್ಲಿತ್ತು? ಆ ವರ್ಷನೂ ಫೇಲಾದ, ನಾ ಪಾಸಾದೆ. 'ನೋಡಿದ್ರಾ—ನಾ ಹೇಳಲಿಲ್ವೇ, ಆ ರುಕ್ಕು ಮಗನ ರಾಶಿ ಚೆನ್ನಾಗಿಲ್ಲಾಂತ? ನಮ್ಮ ಚಂದ್ರೂನ ಕಳಿಸಿ ಬಿಟ್ಟದ್ದು ಒಳ್ಳೇದೇ ಆಯ್ತು!' ವಠಾರಕ್ಕೆಲ್ಲಾ ಕೇಳಿಸೋ ಹಾಗೆ, ನಮ್ಮಮ್ಮ ಅಪ್ಪನ ಮುಂದೆ ಆಡಿ ತೋರಿಸಿದಳೂನ್ನು.'

'ಛೇ, ಈ ಸ್ಕೂಲೇ ನಮ್ಮ ಹುಡುಗನ ಜಾತಕಕ್ಕೆ ಕೂಡಿಬರೊಲ್ಲ! ಅದಕ್ಕೆ ಹೀಗೆಲ್ಲಾ ಆಗ್ತಿದೆ—' ಎಂದುಕೊಂಡ ನಾಣಿ ಅಜ್ಜಿ, ನಾಣಿಯನ್ನು ತಮ್ಮೂರಿಗೇ ಕರೆದುಕೊಂಡು ಹೋಗಿಬಿಟ್ರು. ಆ ಊರು—ನಾನಿದ್ದ ಊರು. ನಾಣಿ ಮತ್ತೆ ಸೇರಿದ ಸ್ಕೂಲು—ನಾನಿದ್ದ ಸ್ಕೂಲು ಹೀಗಾಗಿ, ನಮ್ಮ ಓಡಿಯಾಟ ಪುನಃ ಆರಂಭವಾಯಿತು....

'ಹೋಗಲಿ, ಆ ವರ್ಷವಾದರೂ ಡ್ಯಾಡಿ ಪಾಸಾದ್ರೋ?' ಅರುಣ ಕೇಳುತ್ತಿದ್ದಳು.

'ಫಸ್ಟ್‌ರ್‍ಯಾಂಕ್ ಬಂದ ಮಗೂ, ಇಡೀ ಸ್ಕೂಲಿಗೆ! ನಾವೆಲ್ಲ ಅವನನ್ನ

ಹೆಗಲ ಮೇಲೆ ಕೂರಿಸಿಕೊಂಡು, ಊರ ಪೂರ್ತಿ ಜೈ-ಜೈ ಮಾಡಿದ್ರೂ ಮಾಡಿದ್ದೇ!'

'ಹೌದಾ!....'

'ಊ ಮಗೂ! 'ಇವನೇ ಮುಂದಕ್ಕೆ ಮಂತ್ರಿ ಆಗ್ತಾನೆ....' ಅಂತೆಲ್ಲಾ ಭಾಷಣ ಬಿಗಿದ ನೆನಪು....ಆದರೆ...'

ಚಂದ್ರೂ ಅಂಕಲ್ ನಿಟ್ಟುಸಿರು ಬಿಟ್ಟು ನಿಲ್ಲುತ್ತಿದ್ದರು. ಏನಾದರೂ ಮುಂದುವರಿಸುತ್ತಿರಲಿಲ್ಲ ಮಾತನ್ನು! ವಿಚಿತ್ರ ಕುತೂಹಲದ ತೆರೆಗಳ ಮೇಲೆ ನಡೆದು ನೋಡುತ್ತಿದ್ದಳು ಅರುಣ—ಅವರತ್ತ. ಆದರೆ ಒಳ್ಳೆ ಕಬ್ಬಿಣದ ಸರಪಣಿಯಂತೆ ಬಿಗಿಯಾಗಿ ಎಳೆದು, ಒಂದಾಗಿದ್ದ ಆ ತುಟಿಗಳು ಬಡಪೆಟ್ಟಿಗೆ ತೆಗೆಯುತ್ತಿರಲಿಲ್ಲ!

'ಅಷ್ಟೇಯೇ ನನ್ನ ಡ್ಯಾಡಿಯ ಜೀವನಚರಿತ್ರೆ, ಅಂಕಲ್?' ಅರುಣ ಹಾಸ್ಯ ಕೂಡ ಮಾಡಿದ್ದಳು—'ಆಮೇಲೆ ಬದುಕಲೇ ಇಲ್ಲವೇ, ಮದುವೆ ಆಗಲೇ ಇಲ್ಲವೇ—ನಾ ಹುಟ್ಟಲೇ ಇಲ್ಲವೇ?'

ಚಂದ್ರೂ ಅಂಕಲ್‌ನ ಮೊಗದ ಮೇಲೆ ಯಾವುದೋ ನೋವು ಕಾಣಿಸಿಕೊಂಡಿತ್ತು. ಕಣ್ಣುಗಳಲ್ಲಿ ಏನೋ ಬೇಸರ ಕಂಡ ನೆನಪು!.... ಅಥವಾ, ಅರುಣಳ ಕಲ್ಪನೆಯೋ?

'ಯಾಕೆ ಅಂಕಲ್, ಏನಾಯ್ತು?' ಅರುಣ ಗಾಬರಿಯಿಂದ ಭುಜ ಅಲ್ಲಾಡಿಸಿದಾಗ, ತಕ್ಷಣ ಬೆಚ್ಚಿ ಚುರುಕಾದ ಅವರು—

'ನೋಡು ಅರುಣ, ಮುಂದಕ್ಕೆ ಹೇಳೋ ಅಂತಹುದು ಏನೂ ಇಲ್ಲ. ಚಿಕ್ಕಂದಿನಲ್ಲಿ ತುಂಬಾ ಸುಖಿಯಾಗಿದ್ದ ನಾಣಿ, ಆಮೇಲೆ....ಆಮೇಲೆ ·...ಆಮೇಲೆಯೂ ಅವನ ಭವಿಷ್ಯ ಆಶಾದಾಯಕವಾಗಿತ್ತೂನ್ನು. ಆದರೆ ಭವಿಷ್ಯ ನೀಲಾಕಾಶದ ಹಾಗೆ! ಒಂದು ಹೊತ್ತು ಬಲು ಶುಭ್ರ! ಮರು ಘಳಿಗೆಯೋ ಕಾರ್ಮುಗಿಲು—ಮಿಂಚು—ಸಿಡಿಲು—ಮಳೆ! ಯಾವುದೋ ಮಾಯೆಯಲ್ಲಿ ಕಾಮನಬಿಲ್ಲು! ಆದರೆ.. .ನಮ್ಮ ನಾಣಿಯ ಜೀವನದಲ್ಲಿ ಸಿಡಿದ ಸಿಡಿಲು, ಕಾಮನಬಿಲ್ಲಿಗೆ ಎಡೆಯೇ ಕೊಡಲಿಲ್ಲ—ಪಾಪ!....' ಎಂದು ಹೇಳಿ ಸುಮ್ಮನಾಗಿದ್ದರು.

ಅವರ ಈ ಮಾತು ಅರ್ಥವಾಗದ ಅರುಣ ಅವರನ್ನೇ ಪಿಳಿಪಿಳಿ

ಕಣ್ಣು ಬಿಟ್ಟುಕೊಂಡು ನೋಡಿದ್ದಳು. ಕೇವಲ ಹುಡುಗಿ ಅವಳು ; ತೀರ ಅಪ್ರಬುದ್ಧ ಮನಸ್ಸು ; ಈ ಎತ್ತರದ ಮಾತುಗಳು ಹೇಗೆ ತಾನೆ ಅರ್ಥವಾಗುವುವು ? ಆದರೆ ಮಸಕುಮಸಕಾಗಿ ಪ್ರಶ್ನೆಗಳು ತಲೆಯ ತುಂಬಾ ತೆವಳಿದ್ದವು. ಸ್ಪಷ್ಟ ಆಕಾರ ತಾಳಲಾರದ ಅವುಗಳ ಹಾವಳಿಯನ್ನು ತಡೆಯಲಾರದೆ ತತ್ತರಿಸಿದ್ದಳು.

ಹೃದಯ ಗುಹೆಯಲ್ಲಿ ಏನೋ ಶೂನ್ಯತೆ. ಆ ಶೂನ್ಯತೆ—ಈ ತೀಕ್ಷ್ಣತೆ, ಇವುಗಳ ನಡುವೆ ದ್ವೈತ್ಯಾಕಾರದ ಒಂದು ಸಮಸ್ಯೆ.... ಇಷ್ಟಾದರೂ ಅಂಕಲ್ ತನ್ನ ಮಮ್ಮಿಯ ಬಗ್ಗೆ ಒಂದು ಮಾತನ್ನೂ ಹೇಳಲಿಲ್ಲ .. ಯಾಕೆ ?

ಹೌದು ! ಡ್ಯಾಡಿಯ ವಿಷಯವಾಗಿ ಅಷ್ಟೊಂದು ಮಾತನಾಡಿದವರು, ಒಂದು ಸಣ್ಣ ವಾಕ್ಯವನ್ನು ತಿಳಿಸಬಹುದಿತ್ತು—ಮಮ್ಮಿಯ ವಿಷಯವಾಗಿ. ಆದರೂ....

ತನ್ನ ಡ್ಯಾಡಿಗೆ ಮದುವೆಯಾಗಿರುವ ವಿಷಯವೇ ಗೊತ್ತಿಲ್ಲವೇ ಅಂಕಲ್‌ಗೆ ? ಮತ್ತೆ ತಾನು ಹುಟ್ಟಿರುವ ವಿಷಯ ಗೊತ್ತುಂಟು ! ಆದರೂ —ತನ್ನ ಮಮ್ಮಿಯ ಗುರುತಿಲ್ಲವಾ ! ಛೇ, ಯಾರಾದರೂ ನಕ್ಕಾರು ! ಆದರೆ....

'ಆ ಮೇನಕೆಯ ಹಾಗೆ ನನ್ನ ಮಮ್ಮಿಯೂ ಒಬ್ಬ ಅಪ್ಸರೆ ! ಧಡಕ್ಕನೆ ಇಳಿದು ಬಂದು, ಡ್ಯಾಡಿಯನ್ನು ಮದುವೆ ಮಾಡಿಕೊಂಡು ಹೊರಟು ಹೋದರು, ನಾ ಹುಟ್ಟಿದ ಕೂಡಲೇ—ಇಂದ್ರಲೋಕಕ್ಕೆ !'

ಹಿಂದೂ ಸ್ನೇಹಿತೆಯರ ಬಾಯಿಂದ ಆಗಾಗ್ಗೆ ಕೇಳಿ ತಿಳಿದುಕೊಂಡಿದ್ದ ಶಾಕುಂತಲ ಕಥೆಯನ್ನು ನೆನೆದ ಅರುಣ ನಿರ್ಧರಿಸಿದ್ದಳು ಬಾಲ್ಯದಲ್ಲಿ—ಆದರೆ ದೊಡ್ಡವಳಾದಮೇಲೆ ?

*   *   *

ಶನಿವಾರ ಬಂದಿತೆಂದರೆ ಸರಿ, ಕಾನ್ವೆಂಟ್‌ನಲ್ಲಿನ ಬೋರ್ಡರ್ಸ್‌ಗಳಿಗೆಲ್ಲ ಮಜಾ ! ಗಾರ್ಡಿಯನ್ಸ್ ಊರಿನಲ್ಲೇ ಇದ್ದರೆ ಬಂದು ಕರೆದುಕೊಂಡು ಹೋಗುತ್ತಿದ್ದರು. ಇಲ್ಲದಿದ್ದವರು ಗುಂಪುಗೂಡಿ, ಸಿನಿಮಾಗೋ ಇಲ್ಲವೇ ಶಾಪಿಂಗ್‌ಗೋ ಹೊರಡುತ್ತಿದ್ದರು. ಆದರೆ ನಾರ್ಮಾ ಹೇಳಿದ ಹಾಗೆ—

'ಅಲ್ಲೂ, ದಾರಿಯುದ್ದಕ್ಕೂ ಮದರ್ಸ್-ಸಿಸ್ಟರ್ಸ್-ಮಿಸ್‌ಗಳು, ನಮ್ಮ ಬೆಂಗಾವಲಿಗೆ! ಏನು ಸಂತೋಷಪಡೋದು? ಜೊತೆಗೆ ಎಲ್ಲಿದ್ದರೂ ಏಳು ಗಂಟೆಯೊಳಗೆ ಹಾಜರಾಗಿರಬೇಕು ಬೇರೆ! ಇದೆಲ್ಲೀ ಕರ್ಮ, ಮೆನ್!'

ಚಂದ್ರೂ ಅಂಕಲ್ ಒಂದು ಸಲ ಅರುಣಳನ್ನು ಹಾಸ್ಯಮಾಡಿದ್ದರು: 'ಇಲ್ಲಿ ನೋಡು, ಚೈಲ್ಡ್? ಅರ್ಥವಾಯ್ತಾ, ಡಾರ್ಲಿಂಗ್? ಇಗೋ ಪೆಟ್—ಏನು ಡಿಯರ್? ಬೇಡ ಸ್ವೀಟ್....ಅಂತ, ಒಳ್ಳೆ ಬೆಣ್ಣೆಯ ಮಾತುಗಳಲ್ಲೇ ದಬಾಯಿಸ್ತಾರೆ ನಿಮ್ಮ ಮದರ್ಸ್—ಅಲ್ಲವೇನೆ?' ಎಂದು.

ಅರುಣ ಕೋಪಿಸಿಕೊಳ್ಳಲಿಲ್ಲ. ನಿಜವಾದ ಮಾತು ತಾನೆ? ಜೊತೆಗೆ ತನ್ನದೂ ಕೆಲವು ಟೀಕೆಗಳನ್ನು ಸೇರಿಸಿ ಬೇಸರ ತೋಡಿಕೊಂಡಿದ್ದಳು.

'ನೀವೇನೇ ಹೇಳಿ—ಈ ಕಾನ್ವೆಂಟ್ ಲೈಫ್ ತುಂಬಾ—ಅಸಾಧ್ಯ ಸ್ಟ್ರಿಕ್ಟ್, ಅಂಕಲ್! ನಮಗೆ—ಬೋರ್ಡರ್ಸ್‌ಗೂ ಸ್ವಲ್ಪ ಸಡಿಲ ಕೊಡಬೇಕು—ಅಲ್ವಾ? ಒಳಗಡೆ ಭದ್ರವಾಗಿದ್ದುಬಿಟ್ಟರೆ, ಒಳ್ಳೇ ಪೆಟ್ಟಿಗೇಲಿ ಇದ್ದಹಾಗೆ! ಹೊರಗಡೆ ಭೂಕಂಪ ಆದ್ರೂ ತಿಳಿಯೊಲ್ಲ!'

ಚಂದ್ರೂ ಅಂಕಲ್ ನಕ್ಕಿದ್ದರು.

'ನಿಮಗೆ ನಗು!' ಅರುಣ ರೇಗಿದ್ದಳು—'ನಮಗಿಲ್ಲಿ ಸಂಕಟ! ನಮಗೆ ಕಾನ್ವೆಂಟ್‌ಗೆ ಎಲ್ಲರೂ ಸೇರಿ ಏನು ಹೆಸರಿಟ್ಟಿದ್ದಾರೆ ಗೊತ್ತಾ?'

'ಏನೂಂತ?'

'Tower of London! ಅಂತ!'

'ಅಬ್ಬಬ್ಬಾ!' ಚಂದ್ರೂ ಅಂಕಲ್ ಲೊಚಗುಟ್ಟಿ ಕಾರು ನಿಲ್ಲಿಸಿದ್ದರು—'ಯಾತಕಮ್ಮಾ ಅಷ್ಟೊಂದು ದೊಡ್ಡ ನಾಮಕರಣ?'

'ಮತ್ತೆ—ಸುತ್ತಲೂ ಎತ್ತರದ ಮೂರು ಕಾಂಪೌಂಡ್ ಗೋಡೆಗಳು! ಅದರೊಳಗೆ ಈ ನಮ್ಮ ಬಿಲ್ಡಿಂಗು! ಏನಾದರೂ ಹೊರಗಿನ ಪ್ರಪಂಚವನ್ನ ನೋಡಬೇಕೆಂದರೆ, ಮೇಲಿನ ಮಹಡಿಯ ಮೇಲೆ ನಿಲ್ಲಬೇಕು—ಕಾಣಬೇಕು! ಆ ಮೇಲಿನ ಮಹಡೀನ ಹತ್ತೋದು ಎಂದರೆ ಸುಲಭದ ಮಾತೆ? ಹೆಜ್ಜೆಹೆಜ್ಜೆಗೂ ಅಡ್ಡಿ! ಅಂತೂ ಇಂತೂ ಹತ್ತಿ ಮುಗಿಸಿ—ಅಲ್ಲಿ ಹೋಗಿ ನಿಂತಾಗ, ಎಷ್ಟೊಂದು ಪ್ರಶ್ನೆಗಳು—ಮದರ್ಸ್‌ಗಳಿಂದ! ಕೆಳಗಿಳಿದಮೇಲೆ, ಅದೇನು ಲೆಕ್ಚರ್ಸ್‌ಗಳು ಸಿಸ್ಟರ್ಸ್‌ಗಳಿಂದ!'

ಅರುಣಳ ಈ ವಿವರಣೆಯನ್ನು ಕೇಳಿ ಚಂದ್ರೂ ಅಂಕಲ್ ನಕ್ಕು ಬಿಟ್ಟಿದ್ದರು.

'ಅದು ಸರಿ, ನಿಮ್ಮ Midnight Dinner (ನಡುರಾತ್ರಿ ಭೋಜನ) ಹೇಗೆ ನಡೆಯುತ್ತಿದೆ, ಮಗೂ ?' ಕೇಳಿದರು—ಇನ್ನೊಂದು ಸಲ ಹೀಗೇ ಜೊತೆಯಲ್ಲಿ ಹೋದಾಗ.

'ಓ ಫಸ್ಟ್‌ಕ್ಲಾಸಾಗಿ !' ಅರುಣ ಉತ್ಸಾಹದಿಂದ ವರ್ಣಿಸಿದಳು— 'ಕಡಲೇಕಾಯಿ, ಸೀಬೇಕಾಯಿ, ಮಾವಿನಕಾಯಿ, ಹುಣಿಸೇಕಾಯಿ, ಮಸಾಲೆದೋಸೆ, ವಡೆ, ಬೆಲ್ಲ, ಕೊಬ್ಬರಿಮಿಠಾಯಿ ಎಲ್ಲಾ....'

'ಸಾಕಾ ! ಒಳ್ಳೇ ಭಾರಿ ಔತಣವಾಯ್ತಲ್ಲಾ ! ಎಲ್ಲಿಂದ ತರಿಸಿದ್ದಿರಿ ಅಷ್ಟನ್ನೂ ? ಇಂದ್ರಭವನ್‌ನಿಂದಲೇ ?' ಬೇಕೆಂದು ಅಂಕಲ್‌ನ ಕೀಟಲೆ.

ಬೋರ್ಡರ್ಸ್‌ರ ಈ 'Midnight Feast' ಕೀಟಲೆಯು ಒಂದು ವಿಷಯವೇ ಆಗಿತ್ತು ಅವರಿಗೆ. ಬೋರ್ಡಿಂಗ್‌ನ ಊಟವನ್ನು ತಿಂದು ತಿಂದು ಬೇಸತ್ತಿದ್ದ ಬೋರ್ಡರ್ಸ್—ಅದರಲ್ಲೂ ಅದೇ ತಾನೆ ಮೊಟ್ಟಮೊದಲ ಬಾರಿಗೆ ಇಂಡಿಯಾಗೆ ಬಂದಿಳಿದಿದ್ದ ಯೂರೋಪಿಯನ್ಸ್ (ಯುದ್ಧದ ದೆಸೆಯಿಂದಾಗಿ) ಡೇಸ್ಕಾಲರ್ಸ್‌ಗೆ (ಮನೆಯಿಂದ ಬಂದು ಹೋಗಿ ಮಾಡುವ ವಿದ್ಯಾರ್ಥಿನಿಯರು) ಹಣ ಕೊಟ್ಟು ತರಿಸುತ್ತಿದ್ದರು—ತಾವು ಓದಿ, ಕೇಳಿದ್ದ ಕಡಲೆಕಾಯಿ—ಮಸಾಲೆದೋಸೆ ಎಲ್ಲವನ್ನೂ !

ರಾತ್ರಿ ಮದರ್ ಬಂದು—'ಎಲ್ಲರೂ ಇದ್ದಾರಾ ? ಮಲಗಿದ್ದಾರಾ ?' ಚೆಕ್ ಮಾಡಿ ಹೊರಟುಹೋದಮೇಲೆ ಗುಂಪುಗೂಡಿ ಕೂರುತ್ತಿದ್ದರು !

'Very nice ! Beautiful ! How wonderful !' ಎಂದು ಬಾಯಿ ಚಪ್ಪರಿಸುತ್ತಿದ್ದರು.

'ಏನೂ ಯೋಚನೆ ಮಾಡಬೇಡ ಮಗೂ, ಮುಂದಕ್ಕೆ ಎಲ್ಲಾ ಸರಿ ಹೋಗುತ್ತೆ.' ಕಾನ್ವೆಂಟ್ ಬಾಗಿಲಲ್ಲಿ ಇಳಿಯುತ್ತಿದ್ದಾಗ ಚಂದ್ರೂ ಅಂಕಲ್ ಅವಳ ಬೆನ್ನು ತಟ್ಟಿ ಸಮಾಧಾನ ಮಾಡಿದರು—'ಇದೊಂದು ತರಹದ ಜೀವನ ಮುಂದಕ್ಕೆ ಇನ್ನೊಂದು ತರಹದ ಜೀವನ. ಜೀವನವನ್ನು ಎದುರಿಸೋದಿಕ್ಕೆ ಎಲ್ಲಾ ತರಹದ ಅನುಭವಗಳೂ ಬೇಕು ನೋಡು ?'

* * *

ಒಂದು ದಿನ ಅರುಣನನ್ನು ಕೇಳಿದರು ಅಂಕಲ್ :

'ಈವತ್ತು ಎಲ್ಲಿಗೆ ಹೋಗೋಣ. '

'ಜೂಗೆ—ಅಂಕಲ್.'

'ಓ.ಕೆ.'

ಅವರು ಕಾರು ತಿರುಗಿಸುವುದರೊಳಗೆ ಅರುಣ ತನ್ನ ಮನಸ್ಸು ಬದಲಾಯಿಸುತ್ತಿದ್ದಳು.

'ಬೇಡ ಅಂಕಲ್, ಚಾಮುಂಡಬೆಟ್ಟಕ್ಕೆ ಹೋಗೋಣ.'

'ರೈಟ್.' ಜೂ ಕಡೆ ಹೊರಟಿದ್ದ ಕಾರು ಒಡನೆಯೇ ಚಾಮುಂಡಿ ಬೆಟ್ಟದ ಕಡೆ ತಿರುಗುತ್ತಿತ್ತು.

'ಚಾಮುಂಡಿಬೆಟ್ಟ ನಂಗೆ ಬೇಜಾರು, ಅಂಕಲ್ !...' ಅರುಣ ಗೊಣಗುತ್ತಿದ್ದಳು—'ನಂಗೆ ನೋಡಿ ನೋಡಿ ಬೇಜಾರಾಗಿಬಿಟ್ಟಿದೆ '

'ಬೇಡ ಬಿಡು ; ಕೆ.ಆರ್.ಎಸ್.ಗೆ ಹೋಗೋಣವೆ ?'

ಇಷ್ಟಾದರೂ ಚಂದ್ರೂ ಅಂಕಲ್‌ರವರ ಮುಖ ಸ್ವಲ್ಪವೂ ಮುದುರಿರ ಲಿಲ್ಲ ! ಅದೇ ಅರುಣಳಿಗೆ ಆಶ್ಚರ್ಯ ! ಬೇರೆ ಯಾರಾದರೂ ಆಗಿದ್ದಲ್ಲಿ ಅದೆಷ್ಟೊಂದು ದಬಾಯಿಸುತ್ತಿದ್ದರೋ !

'ಹೀಗೆ ಘಳಿಗೆಗೊಂದು ನಿರ್ಧಾರ ಮಾಡಿ ನನ್ನ ಪ್ರಾಣಾನ ತೆಗೆಯೋದಿಕ್ಕೆ ನಾನೇನು ಡ್ರೈವರ್ ಕೆಟ್ಟುಹೋದ್ನಾ ?' ಎಂದು ರೇಗದಿರು ತ್ತಿದ್ದರೇ ?

'ಹೀಗೆಲ್ಲ ಮಾಡಬಾರ್ದು ನೋಡು—ಸರಿಯಲ್ಲ. ನಿಮ್ಮ ಮದರ್ ಸುಪೀರಿಯರ್‌ಗೆ ಹೇಳ್ತೀನಿ—' ಎಂದು ಲೆಕ್ಚರ್ ಮೇಲೆ ಲೆಕ್ಚರ್ ಕೊಡದೇ ಇರುತ್ತಿದ್ದರೆ ?

ಪಾಪ ! ಮರುಮಾತಾಡದೆ ಕಾರನ್ನು ಅವಳು ಹೇಳಿದ ದಿಕ್ಕಿಗೆ ಓಡಿಸುತ್ತಿದ್ದರು ; ಅವಳು ಅಪೇಕ್ಷಿಸಿದ ಜಾಗಕ್ಕೆ ಕರೆದೊಯ್ಯುತ್ತಿದ್ದರು. 'ತುಂಬಾ ಒಳ್ಳೆಯ ಹುಡುಗಿ !' ಎಂದು ಎಲ್ಲರ ಬಾಯಿಂದಲೂ ಹೊಗಳಿಸಿ ಕೊಂಡು ಸುಸ್ತಾಗಿದ್ದ ಅರುಣ ತನ್ನ ಹೃದಯದಲ್ಲಿ ನೆರಳಾಡಿಸುತ್ತಿದ್ದ ವಿಫಲತೆಯನ್ನೆಲ್ಲಾ ಈ ಶನಿವಾರಗಳಂದು ಪ್ರದರ್ಶಿಸುತ್ತಿದ್ದಳು—ಈ ರೀತಿಗಳಲ್ಲಿ ! ಅವಳಿಗೇ ಅರಿವಾಗದಂತೆ !

ಎಲ್ಲವನ್ನೂ ಚಂದ್ರೂ ಅಂಕಲ್ ಭೂಮಿತಾಯಿ ಸಹನೆಯಿಂದ ಸ್ಥೈರಿಸು ತ್ತಿದ್ದರು ; ಒಲುಮೆಯು ಮಳೆಯನ್ನೇ ಸುರಿಸುತ್ತಿದ್ದರು. ಮೆಲುರೀತಿಯಲ್ಲಿ ಹಾದಿಗೆ ತರುತ್ತಿದ್ದರು. ಆಗ—ಅರುಣಾಳಿಗೇ ಅರಿವಾಗಿ, ತುಂಬ ನಾಚಿಕೆ ಯಾಗುತ್ತಿತ್ತು.

'ತುಂಬಾ ಸಾರಿ ಅಂಕಲ್, ಖಂಡಿತ ಇನ್ಮೇಲೆ ಹಾಗೆ ಮಾಡೋದಿಲ್ಲ.' ಕಾನ್ವೆಂಟ್ ಬಾಗಿಲ ಬಳಿ ನಿಂತು, ಅವಳು ಕ್ಷಮಾಪಣೆ ಕೇಳಿಕೊಂಡಾಗ, ಅವರ ಕಣ್ಣುಗಳು ಅನುತಾಪದ ಮಡುಗಳಾಗುತ್ತಿದ್ದವು.

ಪುಟ್ಟ ಹುಡುಗಿ—ಹುಟ್ಟುವಾಗಲೇ ಎಂತಹ ಹೊಡೆತ ! ಪಾಪ ಮಾಡಿದವರು ಯಾರೋ ? ಅನುಭವಿಸುವವರು ಯಾರೋ ? ಇದು ನ್ಯಾಯವೇ ? ಅಥವಾ, ಯಾರದಾದರೊಂದು ಶಾಪವೋ ?

'ನೀನು ತುಂಬಾ ಒಳ್ಳೆಯ ಹುಡುಗಿ, ಅರುಣ್....' ಗಲ್ಲವನ್ನು ಹಿಡಿದೆತ್ತಿ, ಆ ಮುಗ್ಧ ಮುಖಭಾವವನ್ನೇ ನಿಟ್ಟಿಸಿ ನೋಡುತ್ತಾ ಉಸುರು ತ್ತಿದ್ದರು—'ನಿಜವಾಗಿಯೂ ನೀನೊಂದು ಚಿನ್ನ ! ಈಗ ಮಟ್ಟಿಗೆ ನಿನ್ನ ಡ್ಯಾಡಿ ಇದ್ದಿದ್ದರೆ....'

ಧ್ವನಿ ಗದ್ಗದವಾಗುತ್ತಿತ್ತು. ತಕ್ಷಣ ಏನೇನೋ ಪ್ರಶ್ನೆಗಳು ಅರುಣಾಳ ಕೊರಳವರೆಗೂ ಬಂದು ನಿಲ್ಲುತ್ತಿದ್ದವು—ತನ್ನ ಮಮ್ಮಿಯ ಬಗ್ಗೆ. ಆದರೆ ನಡುವೆ ಯಾವುದೋ—ಎಂತಹುದೋ ಕಟ್ಟೆ !

ಅಂಕಲ್‌ಗೆ ತನ್ನ ಮಮ್ಮಿ ಕಂಡರೆ ಇಷ್ಟವಿರಲಿಲ್ಲವೇ ? ಇರಬೇಕು ! ಒಂದೇ ಒಂದು ಸಲ—ಹೇಗೋ ಧೈರ್ಯ ಮಾಡಿ ಅರುಣ ಕೇಳಿದ್ದಾಗ— 'ನನ್ನ ಮಮ್ಮಿ ಎಲ್ಲಿ, ಅಂಕಲ್ ?' ಎಂದು, ಚಂದ್ರೂ ಅಂಕಲ್‌ನ ಮುಖ ದಲ್ಲಿ ವಿಲಕ್ಷಣ ಬದಲಾವಣೆ ತೋರಿತ್ತು. ಅವಳ ಪಕ್ಕ ತಿರುಗಿ ಸಹ ನೋಡದೆ ಹೊರಟುಹೋಗಿದ್ದರು !

ಕಾರ್ ಸ್ಟಾರ್ಟ್ ಆದ ಶಬ್ದ ಆಗಿ, ಅದು ಹೊರಬಾಗಿಲಿನಾಚೆ ಹೊರಟುಹೋದಮೇಲೆಯೇ ಅವಳಿಗೆ ನೆನಪು ಬಂದದ್ದು—'ಅರೆ !.... ಮಾಮೂಲಿನಂತೆ ಅಂಕಲ್ ತನಗೆ ಟಾಟಾ ಕೂಡ ಹೇಳಲಿಲ್ಲ ?' ಎಂದು.

ತಕ್ಷಣ ಗಂಟಲಲ್ಲಿ ಏನೋ ಸಿಕ್ಕಿಕೊಂಡ ಹಾಗಾದ ಅರುಣ ಅಂದು ರಾತ್ರಿ ಪೂರಾ ಅಲ್ಲಿಯೇ ಇದ್ದುಬಿಡುತ್ತಿದ್ದಳೇನೋ....ಆ ಬಾಗಿಲಿಗೆ

ಹಾಗೇ ಒರಗಿಕೊಂಡು ! ...ಮದರ್ ಬಂದು ಎಚ್ಚರಿಸಿದ್ದರು. ಇಡೀ ರಾತ್ರಿ ಒಂದೇ ದುಃಸ್ವಪ್ನ ! ಇದ್ದ ಒಬ್ಬ ಆತ್ಮೀಯನನ್ನೂ ಕಳೆದುಕೊಂಡಂತೆ !....

ಮಿಕ್ಕ ಹುಡುಗಿಯರನ್ನೆಲ್ಲಾ ಬೇಕಾದಷ್ಟು ಜನ ಬಂದು ವಿಚಾರಿಸಿ ಕೊಂಡು ಹೋಗುತ್ತಿದ್ದರು; ಹೊರಗಡೆ ಕರೆದುಕೊಂಡು ಹೋಗಿ ತಿಂಡಿ ತಿನಸು ತಿನ್ನಿಸುವ ನೆಂಟರಿಷ್ಟರೇನು—ಪ್ರೆಸೆಂಟೇಶನ್ಸ್‌ಗಳನ್ನು ತೆಗೆದು ಕೊಂಡು ಬಂದು ಕೊಡುವ ಸ್ನೇಹಿತರೇನು—ಅವುಗಳನ್ನು ಪ್ರದರ್ಶಿಸುವ ಸ್ನೇಹಿತೆಯರ ಜಂಬವೇನು....

ಆದರೆ ಇವಳಿಗೆ....ಅರುಣಳಿಗಾಗಿ ಮಿಡಿಯುತ್ತಿದ್ದ ಜೀವ ಎಂದರೆ ಈ ಚಂದ್ರೂ ಅಂಕಲ್ ಒಬ್ಬರೇ. ಅವರೇ ಅವಳ ನೆಂಟರು, ಇಷ್ಟರು, ಸ್ನೇಹಿತರು, ಎಲ್ಲಾ....ಈಗ ಆ—ಇದ್ದೊಬ್ಬ ಆತ್ಮೀಯನನ್ನೂ ಕಳೆದು ಕೊಂಡಳೋ ? ಇಡೀ ರಾತ್ರಿ ದಿಕ್ಕಿಲ್ಲದೆ ಅಲೆದಾಡುತ್ತಿರುವ ಯಾತನೆ !

ಮುಂದಿನ ವಾರ ಚಂದ್ರೂ ಅಂಕಲ್ ಬಂದಿಳಿದಾಗ ಅರುಣ ಮುಖ ತೋರಿಸಲೂ ಹೆದರಿದ್ದಳು. ಆದರೆ ಅವರು ಎಂದಿನಂತಿದ್ದರು ! ನಗುನಗು ತ್ತಲೇ ಮಾತನಾಡಿಸಿದ್ದರು ! ತುಂಬುವಿಶ್ವಾಸದಿಂದಲೇ ವರ್ತಿಸಿದ್ದರು !

ಅರುಣಳ ಕಳವಳಗೊಂಡ ಹೃದಯವು ಶಾಂತವಾಯಿತು. ಆದರೆ ಮತ್ತೆ ಆ ತಪ್ಪು ತನ್ನಿಂದ ನಡೆಯದಂತೆ ಜಾಗ್ರತೆ ವಹಿಸಿದ್ದಳು.

ಶನಿವಾರ ಬಂದಿತೆಂದರೆ ಸರಿ, ಪುಟ್ಟ ಅರುಣಳಿಗೆ ಸುಗ್ಗಿ ! ದಿನಾ ಕ್ಯಾಲೆಂಡರ್ ನೋಡುತ್ತಿದ್ದಳು

'ವಾರಕ್ಕೆ ಏಳು ದಿವಸ ಹೆಚ್ಚು, ಮೋನ್ !' ಗೆಳತಿಯರೆದುರಿಗೆ ಗೊಣ ಗುತ್ತಿದ್ದಳು—'ಯಾರು ಇಟ್ಟರೋ ? ಮೂರೇ ದಿವಸ ಇಡಬಾರದಾಗಿತ್ತೆ ?'

'ಹೌದಮ್ಮಾ ಹೌದು !' ಗೆಳತಿಯರೂ ಹಾಸ್ಯಮಾಡುತ್ತಿದ್ದರು— 'ಆಗ ಒಂದೇ ದಿವಸ ಇರ್ತಿತ್ತು ಕ್ಲಾಸು. ಎರಡು ದಿವಸಕ್ಕೆಲ್ಲಾ ಹೊರಗೆ ಹೋಗುವ ಶನಿವಾರ—ಮೂರೇ ದಿವಸಕ್ಕೆ ಪ್ರಾರ್ಥನೆ ಮಾಡುವ ಭಾನು ವಾರ !'

ತುದಿಗಾಲ ಮೇಲೆ ನಿಂತು, ಕಾರಿನ ಶಬ್ದಕ್ಕಾಗಿಯೇ ಕಿವಿ ಅರಳಿಸಿ ನಿಂತಿರುವ ಅರುಣಳನ್ನು ದೂರದಿಂದಲೇ ಗುರುತಿಸಿದ ಚಂದ್ರೂ ಅಂಕಲ್ ಹೆಜ್ಜೆಹೆಜ್ಜೆಗೂ ಹಾರನ್ ಮಾಡುತ್ತಾ ಬರುತ್ತಿದ್ದರು—'ಬಂದೆ ಮಗೂ;

ಬಂದೆ ಮಗೂ; ಬಂದೆ ಮಗೂ....' ಎನ್ನುವಂತೆ. ಇಷ್ಟಾದರೂ ಅವರ ಮನೆಗೆ ಹೋಗಲು ಮಾತ್ರ ಅರುಣ ಇಷ್ಟಪಡುತ್ತಿರಲಿಲ್ಲ.

'ಅದು ಹೋಮ್ ಅಲ್ಲ, ಅಂಕಲ್; ನಾ ಬರೋಲ್ಲ.' ಮೊಂಡುತನದಿಂದ ತಲೆಯಲ್ಲಾಡಿಸಿದ್ದಳು.

'ಹೋಮ್ ಅಲ್ಲಾ!....' ಚಂದ್ರೂ ಅಂಕಲ್, ಪಾಪ, ಒಂದೇ ತಬ್ಬಿಬಾಗಿದ್ದರು.

ಹಣದ ರಾಶಿಯನ್ನು ಸುರಿಸಿ, ತಾನೇ ಖುದ್ದಾಗಿ ನಿಂತು, ಕಟ್ಟಿಸಿದಂತಹ ಮನೆ—ಅರಮನೆಯಂತಹ ಮನೆ! ಅರಮನೆಯ ಗಾರ್ಡನ್‌ನ್ನೂ ನಾಚಿಸುವಂತಹ ತೋಟ—ವಿವಿಧ ದೇಶಗಳಿಂದ ತರಿಸಿ ಹಾಕಿಸಿದ ಮರಗಿಡಗಳು! ಒಳಗಡೆ—ಸಾಲಾರ್ ಜಂಗ್ ಮ್ಯೂಸಿಯಂನಲ್ಲಿ ಇರಬೇಕಾದಂತಹ ಅದ್ಭುತ ಸಾಮಾನುಗಳು!

'ಏನಾಗಿದೆ ಕೇಡು—ನನ್ನ ಮನೆಗೆ?' ಎಂದು ಸ್ವಲ್ಪ ಸಿಟ್ಟಾಗಿಯೇ ಕೇಳಿದ್ದರು.

'ಏನೂ ಇಲ್ಲ—ಸೊಗಸಾಗಿದೆ.'

'ಮತ್ತೆ?'

'ಅಲ್ಲಿ ಎಲ್ಲಾ ಇದೆ ಅಂಕಲ್, ಆದರೆ....' ಅವಳ ಧ್ವನಿಯಲ್ಲಿ ಬೇಸರ ತಲೆದೋರಿತ್ತು—'ಆದರೆ ಅಲ್ಲಿ ಆಂಟೀನೇ ಇಲ್ಲ!'

ತಕ್ಷಣ ಚಂದ್ರೂ ಅಂಕಲ್‌ನ ಮುಖ ಕಳೆಗುಂದಿತ್ತು; ಅರ್ಥಮಾಡಿಕೊಂಡಿದ್ದರು. ನಿಜ....ಏನಿದ್ದರೇನು? ಮನೆಯಲ್ಲಿ ಹೆಣ್ಣು ಎಂಬ ಒಂದು ಜೀವ....ಅದರಲ್ಲೂ ಹೆಂಡತಿ ಎಂಬ ಒಂದು ಪ್ರಾಣಿ ಇರಬೇಕು. ಆಗಲೇ ಅದು ಹೋಮ್! ಜೀವವನ್ನೇ ಬಿಟ್ಟಷ್ಟು ನಿಟ್ಟುಸಿರು ಬಿಟ್ಟಿದ್ದರು.

'ಆಂಟಿ ಎಲ್ಲಿ, ಅಂಕಲ್?'

ಆವರ ಆ ಕಳೆಗುಂದಿದ್ದ ಮುಖವನ್ನೇ ನೆನೆದು–ನೆನೆದು ನಿದ್ರೆಗೆಟ್ಟಿದ್ದ ಅರುಣ ಮುಂದಿನ ಶನಿವಾರ ಧೈರ್ಯಮಾಡಿ ಪ್ರಶ್ನಿಸಿದ್ದಳು.

'ಸ್ವರ್ಗಕ್ಕೆ ಹೋಗಿದ್ದಾಳಮ್ಮಾ.'

'ಓ!' ತಕ್ಷಣ ಅರುಣ ತಣ್ಣಗಾಗಿ ಕುಳಿತುಬಿಟ್ಟಿದ್ದಳು

ಇದೇನೀ ತಮಾಷೆ? ಇತ್ತ ತನ್ನ ಮಮ್ಮಿಯೂ ಸ್ವರ್ಗಕ್ಕೆ ಹೋಗಿ

ಬಿಟ್ಟಿದ್ದಾರೆ....! ಅತ್ತ ಈ ಆಂಟಿಯೂ........ಮಾತನಾಡಿಕೊಂಡು ಹೀಗೆ ಮಾಡಿದರೋ ? ಜೊತೆಯಿರಲಿ ಎಂದು ಒಟ್ಟಿಗೆ ಹೊರಟರೋ ? ಜೀಸಸ್‌ಗೆ ಯಾಕೆ ಅವರಿಬ್ಬರ ಮೇಲೆಯೇ ಕಣ್ಣು ? ಗೀತಾ, ವರದಾ, ಮಾರ್ಗರೆಟ್, ಮೇರಿ, ರೇವತಿ, ಲೂಸಿ, ಬೆಟ್ಟಿ, ಇವರುಗಳ ಮಮ್ಮಿಗಳಿರಲಿಲ್ಲವೇ—ಕರೆದ ತಕ್ಷಣ ಹೋಗುವುದಕ್ಕೆ ?

'ಆಗಲಿ, ರಾತ್ರಿ ಪ್ರಾರ್ಥನೆ ಮಾಡುವಾಗ, ಮರೆಯದೆ ಕೇಳಬೇಕು ಜೀಸಸ್‌ನ್ನ ; ಮತ್ತು, ಆ ಮಮ್ಮಿಗಳನ್ನೆಲ್ಲಾ ಕರೆಸಿಕೊಂಡು, ಇವರಿಬ್ಬರನ್ನೂ ವಾಪಸು ಕಳಿಸು—ಸ್ವರ್ಗದಲ್ಲಿ ಇದ್ದದ್ದು ಸಾಕು ಎಂದು ಪ್ರಾರ್ಥನೆ ಮಾಡಬೇಕು—' ಎಂದುಕೊಂಡಳು.

'ಆಂಟಿಗೆ ತುಂಬಾ ಖಾಯಿಲೆಯಾಗಿತ್ತಮ್ಮಾ—' ಎಳೆ ಮನಸ್ಸಿನ ಗೊಂದಲವನ್ನು ಗುರುತಿಸಿದ ಚಂದ್ರೂ ಅಂಕಲ್ ತಿಳಿಸಿದ್ದರು—'ಅದಕ್ಕೇ ಹೋದಳು.'

'ಅಲ್ಲಿ ಈಗ ಓ.ಕೆ.ನಾ ?'

ಈ ಮುಗ್ಧ ಪ್ರಶ್ನೆಯನ್ನು ಕೇಳಿ ಅಂಕಲ್ ನಕ್ಕಿದ್ದರು—ಆ ನೋವಿನಲ್ಲೂ.

'ಎಷ್ಟು ಒಳ್ಳೆಯ ಅಂಕಲ್ ! ಅಂಥವರಿಗೇ ಈ ಜೀಸಸ್ ಹೀಗೆ ಮಾಡೋದು ! ಛೇ, ಆಂಟಿಯಾದರೂ ತಿಳಿದುಕೊಳ್ಳಬೇಕಿತ್ತು ! ಪಾಪ, ಈ ವಯಸ್ಸಿನಲ್ಲಿ ಹೀಗೆ ಒಬ್ಬರನ್ನೇ ಬಿಟ್ಟು ಹೋಗೋದೇ ? ಮುಖ್ಯವಾಗಿ ಈ ಮಮ್ಮಿಗಳಿಗೆ ಇನ್ನೊಬ್ಬರ ಯೋಚನೆಯಿಲ್ಲ !'

ಪುಟ್ಟ ಅರುಣಳ ಹೃದಯ ಅನುಕಂಪದಿಂದ ಮಿಡಿದಿತ್ತು. 'ಪಾಪ, ನಿಂಗೆ ಎಷ್ಟು ಕಷ್ಟ, ಅಂಕಲ್ ! ಸದಾ ಹೋಮ್‌ನಲ್ಲಿ ಯಾರೂ ಇರೋದಿಲ್ಲ !' ಎಂದು ಅನುತಾಪದಿಂದ ಅವರ ಕೈಯನ್ನು ಅಮುಕಿದ್ದಳು. 'ವರೀ ಮಾಡ್ಕೋಬೇಡ. ಇನ್ನು ಸ್ವಲ್ಪ ದಿವಸ, ನಾ ಬಂದು ನಿನ್ನನ್ನ ಎಲ್ಲ ನೋಡ್ಕೋತೀನಿ.'

'ಅಷ್ಟು ಹೊತ್ತಿಗೆ ನಾ ಮುದುಕ ಆಗ್ಬಿಟ್ಟಿರ್ತೀನಿ' ಚಂದ್ರೂ ಅಂಕಲ್ ನಕ್ಕಿದ್ದರು—'ನಂಗೆ ಈಗ ಅಭ್ಯಾಸ ಆಗಿಬಿಟ್ಟಿದೆ ಮಗೂ, ನಂದೇನೂ ಇಲ್ಲ—ಅನೂಪ್‌ದೇ ನಂಗೆ ಚಿಂತೆ....' ಒಂದು ಕ್ಷಣ ಗಂಟಲಲ್ಲಿ ಏನೊ ಸಿಕ್ಕಿ

ಹಾಕಿಕೊಂಡ ಹಾಗೆ ನಿಲ್ಲಿಸಿ, ಮುಂದುವರಿದಿದ್ದರು—'ಇನ್ನೂ ಚಿಕ್ಕವನು ನೋಡು ? ಪಾಪ, ಈ ವಯಸ್ಸಲ್ಲೇ ಹೀಗಾಯ್ತಲ್ಲಾ, ಎಂದು ತಡೆಯ ಲಾರೆ ಮಗು—ಒಂದೊಂದು ಸಲ ಹತ್ತಿಕೊಂಡು ಬರೋ ದುಃಖಾನ....'

'ನಾ ಅನೂಪ್‌ನನ್ನೂ ನೋಡಿಕೋತೇನೆ; ಚೆನ್ನಾಗಿ ನೋಡಿಕೋ ತೇನೆ, ಅಂಕಲ್—' ಅರುಣ ಭರವಸೆ ನೀಡಿದ್ದಳು

'ನನ್ನ ಕಂದ !' ಹೃದಯ ತುಂಬಿ ಬಂದ ಚಂದ್ರೂ ಅಂಕಲ್ ಅವಳ ಹಣೆಯ ಮೇಲೆ ಕೈಯಾಡಿಸಿ, ಉದ್ಗರಿಸಿದ್ದರು—'ನಿಂಗೆಲ್ಲಿ ಬಂತಮ್ಮಾ ಈ ದೊಡ್ಡ ಗುಣ—ಅವಳ ಹೊಟ್ಟೇಲಿ ಹುಟ್ಟಿಯೂ !'

ಮರುಘಳಿಗೆಯೇ ನಾಲಿಗೆಯನ್ನು ಕಡಿದಿದ್ದರು ; ಆದರೆ ಅನೂಪ್‌ನ ಯೋಚನೆಯಲ್ಲಿಯೇ ಮಗ್ನಳಾಗಿದ್ದ ಅರುಣಳ ಕಿವಿಗೆ ಈ ಉದ್ಗಾರ ಬಿದ್ದಿರ ಲಿಲ್ಲ. ಆಹಾ, ಅನೂಪ್‌ನ ಯಾತನೆ ಅರುಣಳಿಗೂ ಆ ಎಳೆವಯಸ್ಸಿನಲ್ಲೇ ಅರ್ಥವಾಗಿತ್ತು. ಕಾರಣ—ಈರ್ವರೂ ಒಂದೇ ದೋಣಿಯಲ್ಲಿ ತೇಲುತ್ತಿದ್ದ ವರು ತಾನೆ !....

'ಅನೂಪ್ ಕೂಡ ನನ್ನಂತೆ ತನ್ನ ಮಮ್ಮಿಗಾಗಿ ಒದ್ದಾಡುತ್ತಿರು ವನೇ ?' ಅವಳ ಎಳೆಹೃದಯ ಚಿಂತಿಸಿತ್ತು.

ಇರಬಹುದು; ಇರಬೇಕು ! ಇರಲಾರದು....ಕಾರಣ, ಅವನ ಮಮ್ಮಿ ತನ್ನ ಮಮ್ಮಿಯಂತೆ ಎಳೆ ಮನಸ್ಸಿನ ಕಲ್ಪನೆಯಲ್ಲ. ಸತ್ತು ಮರೆಯಾಗಿ ದ್ದರೂ ಜೀವಂತ ವ್ಯಕ್ತಿ ! ಆಕೆಯ ನೆನಪು ನೂರಾರು ಮಾತುಕಥೆಗಳಲ್ಲಿ, ಸಾವಿರಾರು ಪ್ರಸಂಗಗಳಲ್ಲಿ, ಅನೇಕಾನೇಕ ಭಾವಚಿತ್ರಗಳ ರೂಪದಲ್ಲಿ, ಅಚ್ಚಳಿಯದೆ ನಿಂತಿತ್ತು ಅನೂಪ್‌ನ ಮನೆಯಲ್ಲಿ !

ತಂದೆ–ಮಗನ ಹೃದಯದಲ್ಲಿ ! ಆದೇ ತನ್ನ ಮಮ್ಮಿ ?

ತುಸು ನೆನಪಿನ ಮಾತಿರಲಿ, ಒಂದಿಷ್ಟು ಛಾಯೆಯನ್ನು ಸಹ ಬೀರಿರ ಲಿಲ್ಲ ! ನೆರಳಿಲ್ಲದವಳಂತೆ, ನೆನಪಿಗೆ ಹೊರಗಾದವಳಂತೆ ಮರೆಯಾಗಿದ್ದಳು ! ದಿಕ್ಕುದೆಸೆಯಿಲ್ಲದವಳಂತೆ, ಯಾರಿಗೂ ಬೇಡವಾದವಳಂತೆ, ಕರಗಿಹೋಗಿ ದ್ದಳು.

ಇಲ್ಲ—ಬದುಕಿನ ಹೊರೆ ಹೊರಲು ಇಚ್ಛಿಸದೆ, ತನ್ನ ಜವಾಬ್ದಾರಿ

ಯನ್ನು ಅನ್ಯರ ಮೇಲೆ ಏರಿಸಿ, ತನ್ನನ್ನು ಬೀದಿಪಾಲಾಗಿ ಮಾಡಿ ಹೋದಳು....ಹಾಯಾಗಿ ಹೆವನ್‌ಗೆ !

ಕಣ್ಣಿಗೆ ಕಾಣದ—ಹಿಂದೆಂದೂ ನೋಡದ—ಮುಂದೆಂದೂ ಸಿಗದ ಆ ಜೀವದ ಮೇಲೆ ಅರುಣ ಕುಪಿತಳಾಗಿದ್ದಳು.

ಅನೂಪ್ ಬಗ್ಗೆ ಅಕಾರಣ ಮತ್ಸರದಿಂದ ಕುದಿದಿದ್ದಳು. ಸಾಲದ್ದಕ್ಕೆ ಅನೂಪ್‌ಗೆ ಅವನ ಡ್ಯಾಡಿಯಿದ್ದರು. ತನಗೆ ? ತನಗೆ ?

ಡ್ಯಾಡಿಯೂ ಇಲ್ಲ...ಮಮ್ಮಿ ಮೊದಲೇ ಇಲ್ಲ....ಇಲ್ಲ....ಇಲ್ಲ....

೫

ಅರುಣಳ ತಂದೆ ಸಾಯುವುದಕ್ಕೆ ಮುಂಚೆಯೇ ತನ್ನ ಪ್ರಾಣಸ್ನೇಹಿತನಾದ ಚಂದ್ರೂ ಅಂಕಲ್‌ನ್ನು ಮಗಳ ಗಾರ್ಡಿಯನ್ನಾಗಿ ನೇಮಿಸಿ ಹೋಗಿದ್ದರು. ಪ್ರತಿಯೊಂದನ್ನೂ ಬರೆದು, ಬಲು ಶಿಸ್ತಿನಿಂದ ಎಲ್ಲವನ್ನೂ ಏರ್ಪಾಡು ಮಾಡಿಟ್ಟುಹೋಗಿದ್ದ ಅವರಿಗೆ ಮಗಳು ಕೊಟ್ಟ ಬಿರುದು—'ಏಲ್ ಡ್ಯಾಡ' ಎಂದು.

'ನಿಜ, ನಾಣಿ ಎಂದೂ ಹಾಗೇನೇ ; ಬಲು ಶಿಸ್ತು, ಕಟ್ಟುನಿಟ್ಟು ! ಬದುಕಿದ್ದಾಗಲೂ ಅಷ್ಟೇ, ಅವನೊಬ್ಬ ದೊಡ್ಡ ಆದರ್ಶವಾದಿ....' ಎಂದು ಚಂದ್ರೂ ಅಂಕಲ್ ನಕ್ಕು ಹೇಳುತ್ತಿದ್ದರು.

ಚಂದ್ರೂ ಅಂಕಲ್‌ಗೆ ಈ ಗಾರ್ಡಿಯನ್ ಕೆಲಸ ಬಹಳ ಪ್ರಿಯ ವಾಗಿತ್ತು—ಅವರದೂ ಮುರಿದ ಸಂಸಾರ. ಹೆಂಡತಿ ಮನೆ ಬೆಳಗುವ ವಯಸ್ಸಿನಲ್ಲಿ ತೀರಿಹೋಗಿದ್ದಳು.

ಮಗ ಬೆಳೆದು ಅಮೇರಿಕಾಗೆ ಹೊರಟುಹೋದ—ವ್ಯಾಸಂಗಕ್ಕೆ. ಯಾವ ಕೆಟ್ಟ ಚಟವೂ ಇಲ್ಲದ ಚಂದ್ರೂ ಅಂಕಲ್ ಹೀಗೆ ಒಬ್ಬರೇ ಆದಾಗ ಏನು ಮಾಡಬೇಕು ?

ತಮ್ಮ ನಾಣಿಯ ಮಗಳ ಮೇಲೆ ಮತ್ತೂ ಗಮನ ಕೊಡಲು ಆರಂಭಿಸಿದರು. 'ಹೆಣ್ಣುಮಕ್ಕಳಿಲ್ಲವಲ್ಲ—' ಎಂಬ ಕೊರಗಿದ್ದ ಚಂದ್ರೂ ಅಂಕಲ್‌ರವರ ಪಾಲಿಗೆ ಅರುಣಳೇ ಹೆತ್ತ ಮಗಳಂತಾದಳು. ಅವಳ 'ಏಲ್

ಡ್ಯಾಡಿ' ಇನ್ನೂ ಒಂದು ಬರೆದಿಟ್ಟು ಹೋಗಿದ್ದರು—'ಮುಂದೆ ಅರುಣ ಮದುವೆಯ ವಯಸ್ಸಿಗೆ ಬಂದಾಗ, ನಮ್ಮ ಚಂದ್ರೂವಿನ ಮಗ ಅನೂಪ್‌ನನ್ನೇ ಅವಳು ಮದುವೆಯಾಗಬೇಕು' ಎಂದು.

ಆ ಕಟ್ಟಳೆ ಚಂದ್ರೂ ಅಂಕಲ್‌ಗೇನೋ ತುಂಬಾ ಪ್ರಿಯವಾಗಿತ್ತು. ಅರುಣ ಶ್ರೀಮಂತ ಬಾಲೆ ಎಂದಲ್ಲ. ಒಂದು ವೇಳೆ ನಿರ್ಗತಿಕಳಾಗಿದ್ದರೂ, ಹಿಂದುಮುಂದು ನೋಡದೆ ಅವಳನ್ನು ತಮ್ಮ ಮನೆಯ ಲಕ್ಷ್ಮಿಯಾಗಿ ಬರ ಮಾಡಿಕೊಳ್ಳುತ್ತಿದ್ದರು. ಕಾರಣ....ಹಲವಾರು ಇದ್ದವು....ಎಲ್ಲಕ್ಕೂ ಎತ್ತರವಾದ ವಿಶಿಷ್ಟವಾದ ಕಾರಣವೊಂದು ಅವರನ್ನು ಅರುಣಳ ಬಳಿ ಸೆಳೆದಿತ್ತು.

ಆ ಹುಡುಗಿಯನ್ನು ನೋಡಿದಾಗಲೆಲ್ಲ....ಅದರ ಮಾತುಕಥೆಗಳನ್ನು ಕೇಳಿದಾಗಲೆಲ್ಲ....ಯಾವುಯಾವುದೋ ಮಧುರ ನೆನಪುಗಳು....ಅವಳು ಹೀಗೆಯೇ ಆಡುತ್ತಿದ್ದಳಲ್ಲವೆ ? ಇಂತೆಯೇ ಮಾತನಾಡುತ್ತಿದ್ದಳಲ್ಲವೇ ?—ಈ ಅರುಣಳ ಝುಣಝುಣ ನಗುವಂತೂ ಅದೇ ! ಅವಳದೇ !

ಆಶ್ಚರ್ಯ ! ಒಂದು ದಿನ ಈ ಹುಡುಗಿ ಅವಳನ್ನು ಕಾಣಲಿಲ್ಲ—ಹತ್ತಿರ ಕೂರಲಿಲ್ಲ ! ಆದರೂ ಅದು ಹೇಗೆ ಅವಳ ಆ ಮಾಧುರ್ಯವೆಲ್ಲ ಇವಳಲ್ಲಿ ವ್ಯಾಪಿಸಿ ಐಕ್ಯವಾಗಿದೆ ! ಸದ್ಯ, ಅವಳಂತಾಗದಿದ್ದರೆ ಸಾಕು ! ಹಾಗಾಗಲು ಬಿಡಬಾರದು ! ಅದೇ ತಾನೇ ನಾಣಿಯ ಬೇಡಿಕೆ ?

* * *

ಅನೂಪ್ ಮತ್ತು ಅರುಣ ಇಬ್ಬರೂ ಬಾಲ್ಯದಲ್ಲಿ ಗೆಳೆಯರಾಗಿದ್ದರು. ಇಬ್ಬರೂ ಒಬ್ಬರನ್ನೊಬ್ಬರು ಮೆಚ್ಚಿಕೊಂಡಂತಿತ್ತು. ಯಾವುದರಲ್ಲಿ ಯಾರು ಕಡಿಮೆ—ಉದಾಸೀನತೆ ತೋರಲು ? ಅರುಣಳ ಕಣ್ಣುಗಳಲ್ಲಿ ಅನೂಪ್ ಒಂದು ಪುಟ್ಟ ಹೀರೋವೆ ಆಗಿಬಿಟ್ಟಿದ್ದ ! ಕಾರಣ, ಅವನು ಮರಗಳನ್ನು ಬಲು ಸೊಗಸಾಗಿ ಹತ್ತುತ್ತಿದ್ದ ! ಒಂದೇ ನಿಮಿಷದಲ್ಲಿ—ಕೋತಿಗಿಂತ ಬೇಗ—ಬೇಗಬೇಗನೇ ಹತ್ತಿಬಿಡುತ್ತಿದ್ದ ! ಸ್ವಲ್ಪವೂ ಅಂಜಿಕೆಯಿಲ್ಲದೇ, ಎತ್ತರೆತ್ತರದ ಕಾಂಡಗಳವರೆಗೂ ಹೋಗುತ್ತಿದ್ದ ; ಅಳಿಲುಗಳೇ ಹೋಗಿರಲಾರವು, ಅಷ್ಟೊಂದು ಎತ್ತರದವರೆಗೂ ! ತುಟ್ಟತುದಿಯ ಮೇಲೆ ಕೂರುತ್ತಿದ್ದ—ನಿಲ್ಲುತ್ತಿದ್ದ - ಕುಣಿಯುತ್ತಿದ್ದ ! ರೆಂಬೆಗಳಿಂದ ರೆಂಬೆಗಳಿಗೆ ಹಾರುತ್ತಿದ್ದ ! ಎಲ್ಲೀ....ಎಲ್ಲರಿಗೂ ಇದು ಸಾಧ್ಯವೇ, ನೋಡೋಣ ? ಎವರೆಸ್ಟ್

ಶಿಖರವನ್ನು ಹತ್ತಿದ ಹೀರೋವನ್ನು ನೋಡುವಂತೆ ಅರುಣ ತಲೆಯೆತ್ತಿ ದಿಟ್ಟಿಸುತ್ತಿದ್ದಳು ; ಚಪ್ಪಾಳೆ ತಟ್ಟುತ್ತಿದ್ದಳು.

'ಜೈ ಜೈ ಜೈ !' ಎಂದು ಅಕ್ಕಪಕ್ಕದವರಿಗೆಲ್ಲಾ ಕೇಳಿಬರುವಂತೆ ಜಯಕಾರ ಮಾಡುತ್ತಿದ್ದಳು.

ಸ್ಪೇಸ್‌ಷಿಪ್‌ನಲ್ಲಿ ಹೋಗಿ ಬಂದವನ ಬಗ್ಗೆ ಕೂಡ ಯಾರಿಗೂ ಇಷ್ಟೊಂದು ಗೌರವ–ಅಭಿಮಾನ ಇರಲಿಕ್ಕಿಲ್ಲ !

ಕಾನ್ವೆಂಟ್ ಬೋರ್ಡಿಂಗ್‌ನಲ್ಲಿ ಸಿಗದ, ಅಂಕಲ್ ಕೊಡದ, ಹುಣಿಸೆ ಕಾಯಿ, ನೆಲ್ಲಿಕಾಯಿ, ಸೀಬೇಕಾಯಿ, ಬೇಲದ ಹಣ್ಣು, ಹಲಸಿನ ಹಣ್ಣು ಇವನ್ನೆಲ್ಲಾ ಮರೆಯದೆ ಎಲ್ಲಿಂದಲೋ ಅವಳಿಗೆ ಕಿತ್ತು ತಂದುಕೊಡುತ್ತಿದ್ದ.

ಅರುಣ ಅಂಕಲ್ ಮನೆಗೆ ಬರುವಂದು ಅವನ ಜೇಬುಗಳ ತುಂಬಾ ಇದುವೇ. ಗಂಟೆಗಟ್ಟಲೆ ಕೂತು ಕಥೆ ಹೇಳುತ್ತಿದ್ದನು—ಧಡೀರನೆ ಕಪ್ಪೆ ರಾಜಕುಮಾರನಾದ ಕಥೆ, ರಾಜಕುಮಾರ ಆನೆಯಾದ ಕಥೆ, ಮೊಸಳೆ–ಕೋತಿಯ ಕಥೆ, ಕಾಗೆ–ನರಿಯ ಕಥೆ, ರಾಜಕುಮಾರಿಯುನ್ನು ರಾಕ್ಷಸ ಎತ್ತಿಕೊಂಡು ಹೋದ ಕಥೆ, ಮಂತ್ರವಾದಿಯ ಕಥೆ—ಇಷ್ಟಲ್ಲದೆ ಕಂಬ ದಿಂದ ನರಸಿಂಹ ಬಂದ ಕಥೆ, ಶ್ರೀನಿವಾಸ ಕಲ್ಯಾಣದ ಕಥೆ, ಇತ್ಯಾದಿ.... ಇನ್ನೂ ಏನೇನೋ ಕಥೆಗಳು !

ಸಾಕೆ ಬುದ್ಧಿ ? ಇಷ್ಟೇ ಅಲ್ಲ—ಅನೂಪ್ ಕಾಗದದ ದೋಣಿ ಗಳನ್ನು ಬಹಳ ಚೆನ್ನಾಗಿ ಮಾಡುತ್ತಿದ್ದ ! ಹಿಂದೂ ಮಹಾಸಾಗರದಲ್ಲಿ ಬಿಡುವ ನಾವಿಗನಂತೆ, ಬಹು ಮುತುವರ್ಜಿಯಿಂದ, ಬಲು ಕುಶಲತೆಯಿಂದ, ಮಳೆ ಬಂದು ನಿಂತಿದ್ದ ಕೆಮ್ಮಣ್ಣು ನೀರಿನಲ್ಲಿ ನಡೆಸುತ್ತಿದ್ದನು.

'ಇದು ಲಂಡನ್, ಇದು ವಾಷಿಂಗ್‌ಟನ್, ಇದು ಕೈರೋ, ಇದು ನಾರ್ವೆ, ಇದು ಪ್ಯಾರಿಸ್, ಇದು ಸೌತ್‌ಪೋಲ್....' ಎಂದವನು ವಿವರಿಸು ತ್ತಿದ್ದರೆ ಅರುಣ ನಿಬ್ಬೆರಗಾಗಿ ಅವನನ್ನೇ ನೋಡುತ್ತಾ ನಿಲ್ಲುತ್ತಿದ್ದಳು.

'ಅರೆ ! ಬಡಪೆಟ್ಟಿಗೆ ನನ್ನ ತಲೆಗೆ ಹತ್ತದ ಭೂಗೋಳ ಇವನ ನಾಲಿ ಗೆಯ ತುದಿಯ ಮೇಲೆಯೇ ಇದೆ !' ಎಂದು. 'ಎಷ್ಟು ಬುದ್ಧಿವಂತನಪ್ಪಾ, ಈ ಅನೂಪ್ !'

ಪಾಪ, ಅರುಣಳಿಗೇನು ಗೊತ್ತಿತ್ತು ಆಗ—ಲಂಡನ್ನಿನ ಪಕ್ಕದಲ್ಲಿ

ವಾಷಿಂಗ್‌ಟನ್ ಇಲ್ಲ—ಸೌತ್ ಪೋಲ್‌ಗೂ ಪ್ಯಾರಿಸ್‌ಗೂ ಬಲು ದೂರ, ಎಂಬುದು ? ಕೈರೋ ಅಂತೂ ಆಚೆಯೇ !

'ಊ, ಹೊಡೆಯೋ ಬುರುಡೇನ—ಹೊಡೆಯೋ ! ಇದರಲ್ಲೆಲ್ಲ ನಿನ್ನ ಬುದ್ಧಿ ಓಡತ್ತೆ ! ರ್‍ಯಾಸ್ಕಲ್ !' ಚಂದ್ರೂ ಅಂಕಲ್ ಹುಸಿಕೋಪ ತೋರುತ್ತಿದ್ದರು.

ಒಳಗೊಳಗೇ ಸಂತೋಷ, ಈ ಜೋಡಿಯನ್ನು ಕಂಡು ! ಇದೇ ಸ್ನೇಹ ಮತ್ತೂ ಚಿಗುರಿ ಪಲ್ಲವಿಸಿದರೆ ? ತನ್ನ ಬರಡುಬಾಳಿನ ತುಂಬ ಬಳ್ಳಿಯಾಗಿ ಹೂ ಬಿಟ್ಟರೆ ? ಅಂದು—ಹೃದಯದಲ್ಲಿ ನೆರಳಾಡುತ್ತಿದ್ದ ಕೊರಗೊಂದು ಪರಿಪೂರ್ಣತೆಯನ್ನು ಕಾಣುವುದು !

'ಆ ದಿನ ಬೇಗ ಬರಬಾರದೆ ? ಬೇಗ ಇವೆರಡೂ ಬೆಳೆಯಬಾರದೆ ?' ಹಾರೈಸುತ್ತಿದ್ದರು.

'ಇಲ್ಲಿ ಬಾಮ್ಮ, ಇಲ್ಲಿ....' ಒಂದು ಬಾರಿ ಪುಟ್ಟ ಅರುಣಳನ್ನು ಹತ್ತಿರ ಕರೆದು ಕೇಳಿದ್ದರು ಚಂದ್ರೂ ಅಂಕಲ್—'ನಮ್ಮ ಅನೂಪ್‌ನನ್ನು ಮದುವೆ ಆಗ್ತೀಯಾಮ್ಮಾ, ಅರುಣ್ ?'

'ನಾನೀಗಲೇ ಮದುವೆ ಆಗಲ್ಲ, ಅಂಕಲ್—' ಹಠಾತ್ತನೆ ಆವರಿಸಿದ್ದ ಎಲ್ಲಿಲ್ಲದ ಗಾಂಭೀರ್ಯದಿಂದ ಅರುಣ ಉತ್ತರಿಸಿದ್ದಳು—'ನಾನಿನ್ನೂ ತುಂಬಾ ಚಿಕ್ಕವಳು.'

'ದೊಡ್ಡವಳಾದಮೇಲೆ ?'

'ಓಹೋ !' ಸಂತೋಷದಿಂದ ತಲೆಯಲ್ಲಾಡಿಸಿದ್ದಳು—'ಖಂಡಿತ ಆಗ್ತೀನಿ ಅಂಕಲ್, ನೀವು ಬೇಡ-ಬೇಡ ಅಂತ ಹೇಳಿದ್ರೂ ಆಗ್ತೀನಿ....'

'ಯಾಕೆ ?' ತಲೆ ನೇವರಿಸಿ ಕೇಳಿದ್ದರು.

'ಅನೂಪ್ ಗಾಳಿಪಟ ಚೆನ್ನಾಗಿ ಬಿಡ್ತಾನೆ, ಅಂಕಲ್. ಅಲ್ಲದೆ, ಅವನೇ ಮನೇಲಿ ಕೂತು ಮಾಡ್ತಾನೆ ! ಊಂ ಅಂಕಲ್ ! ಗಾಳಿಪಟಾನ ಮಾಡೋಕ್ಕೆ, ಕಾಗದದ ದೋಣೀನ ಮಾಡೋಕೆ, ಕಿರೀಟನ ಮಾಡೋಕ್ಕೆ—ನಮ್ಮ ಅನೂಪ್‌ಗೆ ಎಷ್ಟು ಚೆನ್ನಾಗಿ ಬರತ್ತೇಂತ !'

ಚಂದ್ರೂ ಅಂಕಲ್‌ಗೆ ನಗು ತಡೆಯಲಾಗಲಿಲ್ಲ, ಜೋರಾಗಿ ನಕ್ಕುಬಿಟ್ಟಿದ್ದರು. ಕೆಂಪಗೆ ಮುಖ ಮಾಡಿಕೊಂಡ ಅರುಣ ಓಡಿಹೋಗಿದ್ದಳು—

ತನ್ನ ಅನೂಪ್ ಹತ್ತಿರ....ಅಂಕಲ್ ಮೇಲೆ ಚಾಡಿ ಹೇಳಲು. ಅನೂಪ್ ಸಹ ಜೋರಾಗಿ ನಕ್ಕುಬಿಟ್ಟಿದ್ದ.

ಒಂದೊಂದು ಸಲ ಅನೂಪ್ ರೆಡ್ ಇಂಡಿಯನ್ ಡ್ರೆಸ್ ಹಾಕಿಕೊಂಡು ಬರುತ್ತಿದ್ದ. ಒಳ್ಳೇ ಅನುಭವಸ್ಥನಂತೆ ಬಾಣಕ್ಕೆ ಬಿಲ್ಲೇರಿಸಿ, ಸೀಬೆ ಕಾಯಿಯನ್ನು ಕೆಡವುತ್ತಿದ್ದ—ಅರುಣಳ ಕಾಲುಗಳ ಬಳಿ.

'ಥೂ ! ಈ ಡ್ರೆಸ್ ಸ್ವಲ್ಪಾನೂ ಚೆನ್ನಾಗಿಲ್ಲ ! ಶ್ರೀರಾಮಚಂದ್ರನ ಹಾಗೆ ಮಾಡಿಕೊಂಡು ಬಾರೋ—' ಅರುಣ ಕೇಳಿಕೊಳ್ಳುತ್ತಿದ್ದಳು—'ಪಟದಲ್ಲಿ ಇರೋ ಹಾಗೆ....'

'ರಬಿಷ್ ! ಎಲ್ಲಾ ಬಿಟ್ಟು ಶ್ರೀರಾಮಚಂದ್ರನ ಹಾಗೆಯೇ !' ಮುಖ ಸುಂಡರಿಸುತ್ತಿದ್ದ.

ಈ ಪುರಾಣ ವ್ಯಕ್ತಿಗಳೆಂದರೆ ಅವನಿಗೆ ಏನೋ ಜಿಗುಪ್ಸೆ ! ಅವಳಿಗೆ ಅಷ್ಟೊ ಅಷ್ಟು ಆಸಕ್ತಿ ! Cowboy ಆಟವನ್ನು ಆಡಿದಾಗಲೆಲ್ಲ ಅವಳು ಅವನನ್ನು ಬೇಡಿಕೊಳ್ಳುತ್ತಿದ್ದಳು.

'ಒಂದೇ ಒಂದು ಸಲ ಶ್ರೀಕೃಷ್ಣನ ಹಾಗೆ ಆಡೋ—ಬೆಣ್ಣೆ ಕದ್ದು, ಹಾಲು ಚೆಲ್ಲಿ, ಕೊಳಲೂದಿ ! ' ಸದ್ಯ, ಅವನೇ ಆಡುವವನು ? ಬಿಷಪ್ ಕಾಟನ್ ಬಾಯ್ಸ್ ಸ್ಕೂಲಿನಲ್ಲಿ ಓದುತ್ತಿದ್ದ ಹುಡುಗ—ಅವನು ! ಎಲ್ಲರಿಗಿಂತ ಹೆಚ್ಚು ಯೂರೋಪಿಯನ್ !

* * *

ಅನೂಪ್ ಅಮೇರಿಕಾಗೆ ಹೊರಟು ನಿಂತಾಗ ಅರುಣಳಿಗೆ ವಿಪರೀತ ದುಃಖವಾಗಿತ್ತು. ಇನ್ನುಮೇಲಿಂದ ಯಾರ ಜೊತೆ ಆಟವಾಡುವುದು ? ಅಂಕಲ್ ಮನೆ-ಮತ್ತೆ ಬಿಕೋ ! ಅವನನ್ನೇ ಹಿಡಿದುಕೊಂಡು ಅತ್ತಿದ್ದಳು.

'ನಾನು ಬೇಗ ಬಂದುಬಿಡ್ತೀನಿ, ಅರುಣ—' ಅನೂಪ್ ಸಮಾಧಾನ ಹೇಳಿದ್ದ—'ಆಮೇಲೆ....'

ನಾಲಿಗೆ ಕಚ್ಚಿ, ಮಾತು ಮುಗಿಸದೆ ಸುಮ್ಮನಾಗಿದ್ದ. ಗಂಟಲವರೆಗೂ ಬಂದಿದ್ದ ಭಾವನೆಗಳ ವ್ಯಕ್ತರೂಪವನ್ನು ವಿವೇಕ ತಡೆದಿತ್ತು. ಕಿರುವಯಸ್ಸಿನಲ್ಲೇ ವಿದೇಶಕ್ಕೆ ಹೊರಟುನಿಂತಿದ್ದರೂ ಪ್ರಾಪಂಚಿಕ ವಿಚಾರಗಳನ್ನು ಅರಿಯುವ ಮನಮಟ್ಟ ಈಗ ಬಂದಿತ್ತು.

ಆದರೆ ಅರುಣಳಿಗೋ ? ಇನ್ನೂ ಮಗು ! ವಯಸ್ಸಿಗನುಗುಣವಾಗಿ ತಿಳಿವಳಿಕೆ ಇನ್ನೂ ಬಂದಿರಲಿಲ್ಲ. ಕಾರಣ ವಾತಾವರಣದ್ದೋ ? ಕಾನ್ವೆಂಟಿನ ಕಟ್ಟುನಿಟ್ಟಿನ ಸೆರೆಮನೆ ವಾತಾವರಣದಿಂದಾಗಿ ಮನಸ್ಸು ಸಾಕಷ್ಟು ಬಲಿತಿಲ್ಲವೋ ?

'ನನ್ನನ್ನ ಖಂಡಿತ ಮರೀಬಾರದ್ದು, ಗೊತ್ತಾ ? ಸದಾ–ದಿನಕ್ಕೊಂದು ನೂರು ಬಾರಿಯಾದರೂ ನನ್ನನ್ನ ಜ್ಞಾಪಿಸಿಕೋಬೇಕು—'

ಕೆನ್ನೆ ಸವರಿ ಬೀಳ್ಕೊಟ್ಟಿದ್ದನು. ಅವನು ಹೊರಟುಹೋದ ಕೆಲವರ್ಷ ಚಂದ್ರೂ ಅಂಕಲ್‌ರವರ ಪಾಲಿಗೆ ಭೀಕರ ನರಕವಾಸ ! ಮೊದಲೇ ಸರಿ, ಒಂಟಿ ಜೀವ—ಈಗ ಇದ್ದದ್ದೂ ಮರುಭೂಮಿ ! ಕೂತಲ್ಲಿ, ಹಳೆಯ ನೆನಪುಗಳ ಕಾಟ—ಅವಳು ಇದ್ದಾಗ ಹೇಗಿತ್ತು, ಎಲ್ಲಾ....ನಿಂತಲ್ಲಿ, ಮುಂದಿನ ಘಟನೆಗಳ ಭಯ—ಅವನು ಅಲ್ಲಿ ಹೇಗಿರುವನೋ, ಹೇಗಾಗುತ್ತಾನೋ, ಎಂದು....ಅಂತಹ ದುರ್ಭರ ಪರಿಸ್ಥಿತಿಯಲ್ಲಿ ತನ್ನ ಒಲವನ್ನು ತೋರಿಸಿ, ಅವನನ್ನು ಒಂದು ಮನುಷ್ಯನನ್ನಾಗಿ ಮಾಡಿದ್ದಳು ಅರುಣ.

'ನೀನು ಒಂದು ಚಿನ್ನ, ಮಗೂ ! ಸದ್ಯ, ಅವಳ ಹಾಗಲ್ಲ ! ಅವಳಿಗೆ ಪ್ರೇಮ, ಕರುಣೆ, ಯಾವುದೂ ಗೊತ್ತಿರಲಿಲ್ಲ. ನೀನೂ ಎಲ್ಲಿ ಅದೇ ದಾರಿ ಹಿಡಿಯುವೆಯೋ, ಎಂದು ನಾಣಿ ಭಯಪಟ್ಟಿದ್ದ. ಸದ್ಯ, ದೇವರು ದೊಡ್ಡವನು ! ಅವನ ಕೊನೆಯ ಪ್ರಾರ್ಥನೆಯನ್ನು ನೆರವೇರಿಸಿದ !'

ಏನಾಯಿತೋ ಏನೋ, ಒಂದು ದಿನ ಅರುಣಳ ಕೈಗಳನ್ನು ಭದ್ರವಾಗಿ ಹಿಡಿದುಕೊಂಡು ಉದ್ಗರಿಸಿದ್ದರು. ಏನೂ ಅರ್ಥವಾಗದ ಅರುಣ ಮಿಕಿ ಮಿಕಿ ನೋಡಿದ್ದಳು.

'ಅವಳು—ಅವಳು !' ಎಂದರೆ ಯಾರು ? ಏನು ಮಾಡಿದಳು ?

* * *

ನಾಲ್ಕೈದು ವರ್ಷಗಳು ಹೇಗೋ ಕಳೆದವು. ಆಮೇಲೆ ಚಂದ್ರೂ ಅಂಕಲ್‌ಗೆ ಮನಸ್ಸು ತಡೆಯಲಾಗಲಿಲ್ಲ. ಮಗನ ಹಂಬಲ ಮೇರೆಮೀರಿ ಹರಿಯಿತು. ಸಹಜ ತಾನೆ ? ಹೆಂಡತಿ ಸತ್ತುಹೋದಂದಿನಿಂದ ತಾನೇ ಅವನಿಗೆ ತಾಯಿಯಾಗಿ—ತಂದೆಯಾಗಿ ಬೆಳೆಸಿದವರು !

'ಎಷ್ಟು ದಿನ ಹೀಗೆ ಇರೋದು ? ನನ್ನ ಕೈಯಲ್ಲಾಗಲ್ಲ, ಮಗು,

ನಾನವನನ್ನ ನೋಡಲೇಬೇಕು !' ಎಂದವರೇ ಹೊರಟೇಬಿಟ್ಟರು.

ಅಂದು ಅರುಣಾಳ ದುಃಖ ಹೇಳತೀರದು. ಚಂದ್ರೂ ಅಂಕಲ್ ಹೊರಟುಹೋದಮೇಲೆ ಶೂನ್ಯತೆ ಮತ್ತೂ ವ್ಯಾಪಿಸಿತು. ಹೃದಯದಲ್ಲಿನ ನರಳಾಟವೆಲ್ಲ ಮೇಲೆ ಬಂದು ನರಳಾಡಿಸಿದವು. ಈಗ ಹೊರಗೆ ಹೋಗುವ ಶನಿವಾರ ಬಂದರೂ ಒಂದೇ—ಬಾರದಿದ್ದರೂ ಒಂದೇ ! ತನ್ನನ್ನು ಬಂದು ನೋಡಲು—ಮಾತನಾಡಿಸಲು—ಹೊರಗೆ ಕರೆದುಕೊಂಡು ಹೋಗಲು—ಯಾರಾದರೂ ಇದ್ದರೆ ತಾನೆ ?

'ಎಲ್ಲಾ ಬಿಟ್ಟು ಅಂಕಲ್ ಯಾಕೆ ಈಗ ಹೋಗಬೇಕಿತ್ತು-ಅಮೇರಿಕಾಗೆ ?' ದೂರದಲ್ಲಿದ್ದ ಆ ಅಂಕಲ್ ಮೇಲೆ ಆಗ್ರಹ ತೋರುತ್ತಿದ್ದಳು—'ಏನು ?—ಅನೂಪ್ ಏನು, ಎಲ್ಲಾದ್ರೂ ಓಡಿಹೋಗ್ತಾ ಇದ್ದನಾ ಏನು ? ಕಳಿಸಿಬಿಡೋದು—ಆಮೇಲೆ ಎಳೆಮಗು ಹಾಗೆ ಒದ್ದಾಡೋದು ! ಉಹು -ಚಂದ್ರೂ ಅಂಕಲ್ ಇಲ್ಲೇ ಇರಬೇಕಿತ್ತು—ನನ್ನ ಹತ್ತಿರ !'

ಅಮೇರಿಕಾದಿಂದ ಆಗಾಗ ಕಾಗದಗಳೇನೋ ಬರುತ್ತಿದ್ದವು. ಆದರೆ ಯಾವುದರಲ್ಲೂ ವಾಪಸ್ಸು ಬರುವ ವಿಷಯವನ್ನೇ ಬರೆಯುತ್ತಿರಲಿಲ್ಲ. ಅದೇಕೋ ? ಈ ಅಮೇರಿಕಾ ಅಷ್ಟು ಚೆನ್ನಾಗಿದೆಯೇ ?

'ಅಲ್ಲಿಯೇ ಇದ್ದುಬಿಡುತ್ತಾರೋ ?' ಭಯಪಟ್ಟಿದ್ದಳು—'ಆಮೇಲೆ ನನ್ನ ಗತಿ ? ಅಂಕಲ್ ಸಹ ನನ್ನನ್ನು ಮರೆತರೆ, ನನಗಿನ್ನಾರು ?'

'ನಾನೂ ಅಲ್ಲಿಗೇ ಬರುತ್ತೀನಿ ; ನನ್ನನ್ನ ಕರೆಸಿಕೊಳ್ಳಿ' ಎಂದು ಬರೆಯಬೇಕೆನಿಸುತ್ತಿತ್ತು—ಆದರೆ ಬರೆಯುತ್ತಿರಲಿಲ್ಲ. ಕೇಳುತ್ತಲೂ ಇರಲಿಲ್ಲ—'ಯಾವಾಗ ಬರುತ್ತೀರಿ ?' ಎಂದು.

ಬಿಗುಮಾನ ಎನ್ನುವುದು ಒಂದು ಇದೆಯಲ್ಲಾ ?

ದಿನ ಕಳೆದಂತೆ ಹಿಂದಿನ ಮಧುರ ದಿನಗಳ ನೆನಪು ಹಿಂದೆ ಹಿಂದಕ್ಕೆ ಹೋಗುತ್ತಾ ಬಂದವು ಪಾಪ, ಅವಳ ಬಾಳಿನ ತಿಮಿರದಲ್ಲಿ ಅವೇ ಬೆಳದಿಂಗಳಾಗಿತ್ತು ! ಈಗ ಅವುಗಳೂ ಕಾಲಗರ್ಭದಲ್ಲಿ ಐಕ್ಯವಾಗಿ ಮರೆಯಾಗಬೇಕೆ ? ಬರೀ ನೆನಪುಗಳಲ್ಲಿ ಸವಿ ಕಂಡು ತೃಪ್ತಿಯಾಗುವ ವಯಸ್ಸಲ್ಲ ಇದು ! ಆವರಿಸಿರುವ ನೆನಪನ್ನು ಹಿಂದಕ್ಕೆ ತಳ್ಳಿ, ತನ್ನ ಹಾದಿಯನ್ನು ಕಂಡುಕೊಳ್ಳುವ ವ್ಯಕ್ತಿತ್ವ ಬಂದಿಲ್ಲ ಇನ್ನೂ !

ಮತ್ತೆ ?

ಇಂತಹ ಕರಾಳ ಮನಃಸ್ಥಿತಿಯಲ್ಲಿ ಇರುವ ಸಮಯದಲ್ಲಿ ಚಂದ್ರೂ ಅಂಕಲ್‌ನ ಕಾಗದ ಬಂದಿತು. ಒಕ್ಕಣೆ ತೀರ ಅನಿರೀಕ್ಷಿತ—

'ಮಗೂ,

'ನಿನ್ನನ್ನ ನೋಡಿ ತುಂಬಾ ವರ್ಷಗಳಾದವು. ದೂರ ಇದ್ದರೂ ಸದಾ ನಿನ್ನದೇ ಯೋಚನೆ. ಆದರೆ ಕಾರಣಾಂತರಗಳಿಂದ ಮುಂಚೆಯೇ ಹೊರಡ ಲಾಗಲಿಲ್ಲ. ಈಗ ಹೊರಟಿದ್ದೇನೆ. ತಿಂಗಳ ಕೊನೆಯಲ್ಲಿ ನಿನ್ನನ್ನ ಕಾಣುವೆ' ಇತ್ಯಾದಿ....

ಅರುಣ ರೆಕ್ಕೆ ಬಂದವಳಂತೆ ಹಾರಿದಳು. 'ಎಲ್ಲಿ ಸ್ವೀಟ್ಸ್, ಮೆನ್ ?' ಸ್ನೇಹಿತೆಯರೆಲ್ಲ ಬಂದು ಸುತ್ತುಗಟ್ಟಿದರು.

## ೬

ಅರುಣಳ ಗಾರ್ಡಿಯನ್ ಅಮೇರಿಕಾದಿಂದ ಬರುತ್ತಿರುವ ಸುದ್ದಿ ಹರಡಿತೋ ಇಲ್ಲವೋ, ಕಾನ್ವೆಂಟ್‌ನಲ್ಲಿ ಅರುಣಳ ಸ್ಥಾನ ಮೇಲೆ ಏರಿತು. ಅದರಲ್ಲೂ ಭಾರತೀಯ ವಿದ್ಯಾರ್ಥಿನಿಯರ ಮಧ್ಯದಲ್ಲಿ! ಅವರಿಗೇ ತಿಳಿಯದಂತೆ ಅವರು ಅವಳನ್ನು ಗೌರವ ಭಾವದಿಂದ ನೋಡಲಾರಂಭಿಸಿದರು. ಕಾರಣ ಇಷ್ಟೇ —ಇಂಡಿಯಾ ಆಗಿನ್ನೂ ದಾಸ್ಯಶೃಂಖಲೆಯಲ್ಲಿದ್ದ ಕಾಲ, ಅಮೇರಿಕಾ-ಇಂಗ್ಲೆಂಡ್ ಎಂದರೆ ಸ್ವರ್ಗ ಎಂದೆನ್ನುವ ಭಾವನೆ! ಅದರಲ್ಲೂ ಲಂಡನ್ನಿನ ಮಾತು ಬಂದರೆ ಸರಿ—'ನಮ್ಮ ಚಕ್ರವರ್ತಿ ಇರುವ ಸ್ಥಳವಲ್ಲವೇ ?'— ಅಂತೆಯೇ ಅದು ವೈಕುಂಠದ ಸಮಾನ! ಉಸಿರು ಬಿಗಿಹಿಡಿದು, ಲಂಡನ್ನಿನ ಸಂದಿಗೊಂದಿಗಳ ವರ್ಣನೆಯನ್ನು ಸಹ ಕೇಳುತ್ತಿದ್ದರು.

'ಹುಟ್ಟಿದರೆ ಅಲ್ಲಿ ಹುಟ್ಟಬೇಕು !' ಒಬ್ಬರಿಗೊಬ್ಬರು ಹೇಳಿಕೊಳ್ಳು ತ್ತಿದ್ದರು—'ಇಲ್ಲಿ ಹುಟ್ಟಿ ನಮ್ಮ ಬಾಳೆಲ್ಲ ವ್ಯರ್ಥವಾಯಿತು !'

ಹೀಗೆ—ಕಾನ್ವೆಂಟಿಗೆ ಓದಲು ಬರುವ ಭಾರತೀಯ ವಿದ್ಯಾರ್ಥಿನಿ ಯರ ವರ್ತನೆ ಬಹಳ ತಮಾಷೆಯಾಗಿಯೇ ಇತ್ತು.

ಮೊಟ್ಟಮೊದಲು ಕಾಲಿಟ್ಟಾಗ—ಆರಂಭದಲ್ಲಿಯೇ ಭಯ. ಆದರೆ

ಹೊಂದಿಕೊಂಡಮೇಲೆ ತನುಮನದ ತುಂಬಾ ಕಾನ್ವೆಂಟು-ಕಾನ್ವೆಂಟು !

'ಕಾನ್ವೆಂಟ್ ಸಮಾನ ಇಲ್ಲ, ಮಿಕ್ಕ ಶಾಲೆಗಳೆಲ್ಲ ಇದರ ಮುಂದೆ ತುಚ್ಛ ! ಓದಿದರೆ ಕಾನ್ವೆಂಟಿನಲ್ಲೇ ಓದಬೇಕು ; ಆಗಲೇ ಬಾಳು ಸಾರ್ಥಕ ! ಕಾನ್ವೆಂಟ್ ಮೆಟ್ಟಿಲನ್ನು ತುಳಿಯುವುದಕ್ಕೆ ಸಹ ಕೇಳಿಕೊಂಡು ಬಂದಿರ ಬೇಕು' ಎಂಬ ಮನೋಭಾವನೆ ಹೊಸದಾಗಿ ಬಂದಿರುವವರಲ್ಲಿ ಬಲವಾಗಿ ಬೇರೂರಿ, ಅಹಂಭಾವ ಮೂಡಿಸುತ್ತಿತ್ತು.

ಕಾನ್ವೆಂಟಿಗೆ ಸೇರಿದ ತಕ್ಷಣ ಮನೆಯಲ್ಲಿಯ ಅಮ್ಮ-ಅಪ್ಪ ಎಲ್ಲ ಮಮ್ಮಿ-ಡ್ಯಾಡಿ ಆಗಿಬಿಡುತ್ತಿದ್ದರು. ಸರಿ—ಗೊತ್ತೇ ಇದೆಯಲ್ಲಾ, ತಾತ-ಅಜ್ಜಿಗಳು ಗ್ರ್ಯಾಂಡ್‌ಪಾ-ಗ್ರ್ಯಾಂಡ್‌ಮಾ.

ಮುಕ್ಕಾಲು ಮಮ್ಮಿಗಳಿಗೇನೋ ಹೀಗೆ ಕರೆಸಿಕೊಳ್ಳೋದಿಕ್ಕೆ ಇಷ್ಟ —ಸಮಾಜದಲ್ಲಿ ತಮ್ಮ ಸ್ಥಾನ ಏರಿತು, ಎಂಬ ಭಾವನೆ !

'ಅಮ್ಮ ಎಂದು ಕರೆಯೋದಿಕ್ಕೆ ಬದಲಾಗಿ ಮಮ್ಮಿ ಎಂದು ಕರೆ ಯುತ್ತಿದ್ದಾಳೆ—' ಎದುರು ಮನೆ ರಂಗಮ್ಮನ ಊಹೆ—'ಚಿಕ್ಕವಯಸ್ಸಿನಲ್ಲಿ ಬಾಯಿ ತಪ್ಪಿರಬೇಕು ; ಅದು ಬೆಳೆದುಕೊಂಡು ಬಂದಿರಬೇಕು....'

'ಛೇ, ಛೇ, ಮಮ್ಮಿ ಎನ್ನೋದು ಸೀಮೆ ಭಾಷೆ ಕಣ್ರೀ. ಸೀಮೆ ಯವರು ತಮ್ಮ ತಾಯಂದಿರನ್ನ ಕರೆಯೋದೇ ಹಾಗೆ ನಮ್ಮ ಮಗಳು ಮೂರುಹೊತ್ತೂ ಅವರ ಜೊತೇಲೇ ಇರ್ತಾಳೆ, ನೋಡಿ ? ಅದಕ್ಕೇ....' ಹೊಸದಾಗಿ ಮಮ್ಮಿ ಆದ ಹಿಂದಿನ ಅಮ್ಮ ತಮ್ಮ ಅಡಿಗೆ ಕೆಲಸವನ್ನೂ ಮರೆತು ವಿವರಿಸುತ್ತಿದ್ದರು—ಹೆಮ್ಮೆಯಿಂದ.

ಇನ್ನು ಗ್ರ್ಯಾನಿ—ಅಜ್ಜಿ ಕಕ್ಕಾಬಿಕ್ಕಿಯೇ ! 'ಏನೇ ಇದು—ಪುಣ್ಯದ ಹೆಸರಲ್ಲ, ಹಿರಿಯರ ನಾಮ ಅಲ್ಲ ! ನನ್ನನ್ನ ಯಾಕೆ ಹೀಗೆ ಕರೀತಿವೆ, ಏನೇನನ್ನೋ !' ತಮ್ಮ ಪಾಡಿಗೆ ತಾವು ಗೊಣಗಾಟ.

ಪಾಪ, ಮದುವೆಗೆ ನಿಂತಿರೋ ಮೊಮ್ಮಗಳಿಗೆ ಹೀಗೆ ಮೊಣಕಾಲಿನ ವರೆಗೂ ಲಂಗವನ್ನು ಹಾಕಿ ಬೀದೀಲಿ ಕಳುಹಿಸೋದೇ ಅವರಿಗೆ ಊರೆಲ್ಲ ಅಸಮಾಧಾನ ! ಆದರೆ ಮಗ—ಮೂರು ಹೊತ್ತೂ ಆ ಸೀಮೆಯವರ ಕೈಲಿ ಕೆಲಸ ಮಾಡುವವ, ಕೇಳಬೇಕಲ್ಲ ?

* * *

'ಅರೆರೆ ! ಅದೆಷ್ಟೊಂದು ಬೆಳೆದುಬಿಟ್ಟಿದ್ದೀಯಾ ! My God !' ಅರುಣಳನ್ನೇ ಎವೆಯಿಕ್ಕದೆ ನೋಡುತ್ತಾ ನಿಂತರು—ಚಂದ್ರೂ ಅಂಕಲ್—'ನನ್ನ ಪುಟ್ಟ ಅರುಣಳೇ ನೀನು !'

'ಮತ್ತೆ, ನನ್ನನ್ನು ಇಷ್ಟು ವರ್ಷ ಬಿಟ್ಟು ಹೋದರೆ ನಾನೇನು ಮಾಡಿಯೇನು ಹೇಳಿ, ಅಂಕಲ್ ?' ಅರುಣ ತುಂಟನಗೆಯಿಂದ ಉತ್ತರಿಸಿದಳು—'ನೀವು ಹಿಂತಿರುಗಿ ಬರುವವರೆಗೂ ತಲೆಬಗ್ಗಿಸಿಕೊಂಡು ನಿಂತಿರಬೇಕಿತ್ತೆ ?'

'ಹಳೇ ಪುಂಡ ಅರುಣಳೇ ನೀನು—ಸದ್ಯ !' ಚಂದ್ರೂ ಅಂಕಲ್ ನಕ್ಕರು—'ಅದೂ ಬದಲಾಯಿಸಿ ಬಿಟ್ಟಿದ್ದರೆ ಗೋವಿಂದ ! ನನಗೆ ತಲೆಯೆತ್ತಿ ನೋಡಲೂ ಹೆದರಿಕೆಯಾಗುತ್ತಿತ್ತು.'

'ಅದು ಸರಿ ಅಂಕಲ್, ನೀವು ಅದು ಹೇಗೆ ಚಿಕ್ಕವರಾದ್ರಿ ?' ಅರುಣ ಅಚ್ಚರಿಯಿಂದ ಕೇಳಿದಳು—'ಏನಾದ್ರೂ ಅಮೇರಿಕಾಗೆ ಹೋಗಿ ವಯಸ್ಸು ಕಮ್ಮಿಯಾಯ್ತೋ, ಇಲ್ಲ—ಔಷಧಿ, ರಸಾಯನ ಎಲ್ಲಾ ನೂರೆಂಟು ಮಾಡ್ತಿದಾರಲ್ಲ, ಅದನ್ನ ತೆಗೆದುಕೊಂಡಿರೋ ?'

'ಛೇ, ನನಗೂ ಅದಕ್ಕೂ ದೂರ. ಆ ಊರಿನ ಹವಾ ಹಾಗಿದೆ ಯಮ್ಮಾ—ಚಿಕ್ಕವನಾಗಿಬಿಟ್ಟೆ. ಜೊತೆಗೆ ನನ್ನ ಮಗನ ಸೇವೆ....

'ಆಂಟಿ ಯಾರನ್ನೂ ಅಲ್ಲಿಂದ ಕರೆದುಕೊಂಡು ಬಂದಿಲ್ಲ ತಾನೆ ?' ಹುಸಿ ಆತಂಕದಿಂದ ಪ್ರಶ್ನಿಸಿದಳು.

'ಕರಕೊಂಡು ಬರದೆ !' ಚಂದ್ರೂ ಅಂಕಲ್ ಉತ್ಸಾಹಿತರಾದರು—ಸರಿಯಾಗಿ ಒಂದು ಡಜನ್ ಆಂಟಿಗಳನ್ನ ಹೊತ್ತುಕೊಂಡು ಬಂದಿದ್ದೀನಿ ! ಅದೂ ಏನು, ಬೇರೆ ಬೇರೆ ಜನಾಂಗದವರನ್ನು !' ಬೆರಳೆಣಿಸಿದರು—'ನೀಗ್ರೋ-ಹಾ, ಬ್ಯೂಟಿ ! ಮಂಗೋಲಿಯನ್-ಮನಮೋಹಕ ! ಅಲ್ಲದೆ ಎಸ್ಕಿಮೋ—ಅಮ್ಮಮ್ಮಾ, ಸ್ವರ್ಗೀಯ ಸುಂದರಿ ! ಚೈನೀಸ್....'

'ಸಾಕಾ ?' ಅರುಣ ಮೂಗಿನ ಮೇಲೆ ಬೆರಳಿಟ್ಟುಕೊಂಡಳು—'ಎಲ್ಲೋ, ಈಗ ನಿಮ್ಮ ಆ ಜನಾನಾ ?'

'ವಾಪಸ್ಸು ಹೋಗೋ ಪ್ಯಾಸೇಜ್‌ಗಾಗಿ ಅಲೆದಾಡ್ತಿವೆ. '

'ಇಷ್ಟು ಬೇಗ ನಿರಾಶೆಯಾ ಅವುಗಳಿಗೆ—ನಮ್ಮ ಈ ಇಂಡಿಯನ್

ಫ್ರೆಂಡ್ಸ್ ಬಗ್ಗೆ !' ಅರುಣ ಅನುತಾಪದ ಸೋಗುಹಾಕಿದಳು—'ಡೈವೋರ್ಸ್‌ನ ಕೊಡಬೇಡಿ, ಅಂಕಲ್. ಎಲ್ಲಾ ಕೊಬ್ಬಿವೆ. ಅವುಗಳ ಜಂಬ ಇಳಿಸ್ಬೇಕು–ನಿಮ್ಮ ಬಂಗಲೆಗೆ ಎಲ್ಲಾನೂ ಅಟ್ಟಿ ತನ್ನಿ. ಅನ್ನ–ನೀರು ಏನೂ ಕೊಡದೆ ನಾಲ್ಕು ದಿನ ಕೂಡಿಹಾಕಿದರೆ ತಾನೇತಾನಾಗಿ ಬುದ್ಧಿ ಬರತ್ತೆ.'

'ಕೆಟ್ಟ ಹುಡುಗಿ !' ಚಂದ್ರೂ ಅಂಕಲ್ ಹುಸಿಕೋಪದಿಂದ ಕೆನ್ನೆಗಳ ಮೇಲೆ ಹೊಡೆದರು. 'ಹೀಗೆಲ್ಲಾ ದೊಡ್ಡವರನ್ನ ಹಾಸ್ಯಮಾಡೋದನ್ನ ಎಲ್ಲಿ ಕಲಿತೆ ನೀನು ? ಮೊದಲೆಲ್ಲ ಹೀಗಿರಲಿಲ್ಲಾ ? ತಾಳು, ಮದರ್ ಸುಪೀರಿಯರ್‌ಗೆ ಹೇಳ್ತೀನಿ.'

ಅರುಣ ಕಿಲಕಿಲನೆ ನಕ್ಕಳು. ಚಂದ್ರೂ ಅಂಕಲ್ ಊರಿಗೆ ಬಂದದ್ದೇ ಬಂದದ್ದು, ಅರುಣಳನ್ನು ಕವಿದಿದ್ದ ಮಂಕು ತಾನೇತಾನಾಗಿ ಇಳಿಮುಖವಾಯಿತು. ಅವಳ ಗೆಲುವನ್ನು ಕಂಡ ಮದರ್ ಸುಪೀರಿಯರ್ ಅಂದುಕೊಂಡರು—'ಸದ್ಯ ಗಾರ್ಡಿಯನ್ ಹಿಂತಿರುಗಿದರಲ್ಲಾ ! ಇನ್ನು ಯೋಚನೆಯಿಲ್ಲ—ಅರುಣ ಸರಿಹೋಗ್ತಾಳೆ.'

ಚಂದ್ರೂ ಅಂಕಲ್ ಅರುಣಳಿಗೆ ಅಮೇರಿಕಾದಿಂದ ನಮೂನೆಯ ಸಾಮಾನುಗಳನ್ನು ತಂದಿದ್ದರು. ಕಳೆದ ಕೆಲವು ವರ್ಷಗಳ ಬಿರುಕನ್ನೆಲ್ಲ ಒಟ್ಟಿಗೆ ಸರಿಮಾಡುವವರಂತೆ ಲೆಖ್ಖವಿಲ್ಲದಷ್ಟು ಸುತ್ತಿಸಿದರು. ಅನೂಪ್ ಬಗ್ಗೆ ಕಥೆಕಥೆಯಾಗಿ ಹೇಳಿದರು.

'ಅಲ್ಲೂ ಅಷ್ಟೇ, ಇಲ್ಲಿನಂತೆ ಅಲ್ಲೂ ಓದಿನಲ್ಲಿ ಅವನೇ ಮುಂದು ! ಎಲ್ಲದರಲ್ಲೂ ಬಲು ಜಾಣ ! ಎಲ್ಲರಿಗೂ ಅವನನ್ನು ಕಂಡರೆ ಬಲು ಇಷ್ಟ ! ಹುಡುಗಿಯರಂತೂ....ಇತ್ಯಾದಿ.'

'ಹೌದು, ಚಿಕ್ಕಂದಿನಿಂದಲೂ ಅಷ್ಟೇ, ಅನೂಪ್ ಓದಿನಲ್ಲಿ ಜಾಣ !' ಅರುಣ ಕೂಡ ಹೆಮ್ಮೆ ತೋರಿದಳು—'ಆಗಲೂ ಅಷ್ಟೇ, ಹೀಗೇ ಇಡೀ ಕ್ಲಾಸಿಗೇ ಫಸ್ಟ್ ಬರ್ತಿದ್ದ—ಅಲ್ಲವೇ ?'

'ಈ ಮಾತನ್ನು ಮರೆಯದೇ ಅನೂಪ್‌ಗೆ ಬರೆಯಬೇಕು—ನನ್ನ ಮುಂದಿನ ಕಾಗದದಲ್ಲಿ—' ಚಂದ್ರೂ ಅಂಕಲ್ ನಿರ್ಧರಿಸಿದರು. 'ಅವನಿಗೆ ಬಹಳ ಸಂತೋಷವಾಗಿಬಿಡತ್ತೆ.'

ಅವರ ಮನಸ್ಸು ಈಗ ನೆಮ್ಮದಿಯ ನೆಲೆಯಾಗಿತ್ತು. ಇತ್ತ

ಅರುಣ ಚಿನ್ನ—ಅತ್ತ ಅನೂಪ್ ವಜ್ರ ! ವಜ್ರಕ್ಕೆ ಚಿನ್ನದ ಕಟ್ಟು ಕಟ್ಟಿದಾಗಲೇ ತಾನೆ, ವಜ್ರಕ್ಕೂ ಹೊಳಪು ಬರುವುದು ?—ಚಿನ್ನ ಸಾರ್ಥಕತೆ ಪಡೆಯುವುದು ?

ನಾಣಿ ಯಾಕೆ ತಾನೆ ಈ ಹುಡುಗಿಯ ಬಗ್ಗೆ ಅಷ್ಟೊಂದು ಯೋಚನೆ ಪಟ್ಟನೋ ? ಆದರೆ ತಾನು ಅವನಿಗೆ ಆಶ್ವಾಸನೆ ಕೊಟ್ಟಿದ್ದೆನಲ್ಲವೇ ? ವಾಗ್ದಾನ ಮಾಡಿದ್ದೆನಲ್ಲವೇ ?

'ಇಂದು ಆ ಆಶ್ವಾಸನೆ ನಿಜವಾಯ್ತು. ನನ್ನ ವಾಗ್ದಾನ ನೆರವೇರಿತು' ಹೆಮ್ಮೆಯಿಂದ ಅರುಣಳ ಪಕ್ಕ ತಿರುಗಿದರು ಚಂದ್ರೂ ಅಂಕಲ್—'ನಾಣಿ, ಇನ್ನು ನೀನು ನಿಶ್ಚಿಂತೆಯಾಗಿರು. ನಿನ್ನ ಆತ್ಮಕ್ಕೆ ಶಾಂತಿ ದೊರಕಲಿ !'

ಅವರ ಕಣ್ಣಂಚಿನಿಂದ ಹನಿ ತೊಟಕಿತು. ಅರುಣಳಿಗೆ ಕಾಣದಂತೆ ಒರೆಸಿಕೊಂಡರು.

* * *

ಅರುಣ ಇದ್ದ ಬೋರ್ಡಿಂಗ್‌ನಲ್ಲಿ ಯೂರೋಪಿನ ಎಲ್ಲ ದೇಶಗಳ ಹುಡುಗಿಯರೂ ಬಂದು ಸೇರಿಕೊಂಡಿದ್ದರು. ಕಾರಣ—ಮಹಾಯುದ್ಧ !

'ನಾವೇನು ಕಡಿಮೆ ?' ಎಂಬಂತೆ, ಚೀಣಿಯ ಹುಡುಗಿಯರಿಬ್ಬರೂ ಬಂದು ಸೇರಿಕೊಂಡರು—ಇವರುಗಳ ಜೊತೆಗೆ !

ಆಗ ಚೀಣ ಮಿತ್ರರಾಷ್ಟ್ರ ತಾನೆ ? ಅಮೇರಿಕಾದ ಜೊತೆ ಸೇರಿ, ಜಪಾನಿನ ವಿರುದ್ಧ ಹೋರಾಡುತ್ತಿದ್ದ ದೇಶ. ಅಲ್ಲಿನ ಅಭದ್ರತಾ ಸ್ಥಿತಿಗೆ ಭಯಗೊಂಡ ಅನೇಕ ಶ್ರೀಮಂತರು ಅವಸರವಸರವಾಗಿ ತಮ್ಮ ತಮ್ಮ ಕುಟುಂಬಗಳ ಸಮೇತ ವಿಮಾನವನ್ನೇರಿ ಇಂಡಿಯಾದಲ್ಲಿ ಆಶ್ರಯ ಪಡೆದಿದ್ದರು. ಅವರುಗಳಿಗೆಲ್ಲ ಕಲ್ಕತ್ತಾವೇ ಕೇಂದ್ರ.

ಓಡಿಬಂದ ಇಂತಹ ಕುಟುಂಬವೊಂದರ ಮಕ್ಕಳು—ಎನನ್ ಮತ್ತು ಶೈಲ. ಅವರುಗಳ ನಿಜವಾದ ಹೆಸರು ಬೇರೆ ಏನೋ ಇತ್ತು. ಚೀಣೀಯ ಹೆಸರಾದ್ದರಿಂದ ಹುಡುಗಿಯರಿಗೆ ಅದನ್ನು ಉಚ್ಚಾರ ಮಾಡುವುದಕ್ಕಾಗುತ್ತಿರಲಿಲ್ಲ, ಆ ಹೆಸರುಗಳನ್ನು ಪ್ರಕಟಪಡಿಸಲು ಈ ಹುಡುಗಿಯರೂ ಸಿದ್ಧರಿರಲಿಲ್ಲ ! ಎಲ್ಲರೂ ಹಾಸ್ಯ ಮಾಡಿಬಿಟ್ಟರೆ ? ಅಷ್ಟೊಂದು ವಿಚಿತ್ರವಾದ ಹೆಸರುಗಳು !

ಮರೆತು ಮೊದಲ ದಿನ ಕೆಲವೇ ಹುಡುಗಿಯರಿಗೆ ತಿಳಿಸಿದಾಗ— 'ವೈ ! ನಿಮ್ಮ ದೇಶದಷ್ಟೇ ದೊಡ್ಡದು, ಮೆನ್ !' ಎಂದು ಉದ್ಗರಿಸಿದ್ದರು.

ಆಗ ಆ ಚೀಣೀ ಹುಡುಗಿಯರ ಮುಖ ಕೆಂಪಗಾಗಿತ್ತು—ಅಸಾಧ್ಯ ಕೆಂಪಗಾಗಿತ್ತು !

'ಹುಶ್—ಈ ಚೀಣೀಯರಿಗೆ ಹಾಸ್ಯ ಮಾಡಿದರೆ ಇಷ್ಟ ಆಗಲ್ಲ— ಹುಷಾರ್ !' ಚೀಣಾದಲ್ಲಿ ಸ್ವಲ್ಪ ದಿನ ಇದ್ದು ಬಂದಿದ್ದ ಮದರ್ ಮೇರಿ ಎಚ್ಚರಿಸಿದ್ದರು.

ಚೀಣಾದಲ್ಲಿ ಮದರ್ ಮೇರಿ ಇದ್ದ ಕಾನ್ವೆಂಟಿನಲ್ಲೇ ಈ ಎರಡು ಹುಡುಗಿಯರೂ ಇದ್ದರಂತೆ. ಕಲ್ಕತ್ತಾಗೆ ಬಂದ ತಕ್ಷಣ ಹುಡುಗಿಯರ ತಂದೆ ಪತ್ರಿಕೆಯಲ್ಲಿ ಹಾಕಿಸಿದ್ದರು—

'ಹೀಗೆ ನಮ್ಮ ಮಕ್ಕಳು ಬಂದಿವೆ ; ಒಳ್ಳೇ ಕಾನ್ವೆಂಟ್ ಬೋರ್ಡಿಂಗ್ ನಲ್ಲಿ ಬಿಡಬೇಕೆಂದಿದ್ದೇವೆ. ತಿಳಿಸುವುದು—' ಎಂದು.

ಅದನ್ನು ಓದಿದ ತಕ್ಷಣ ಮದರ್ ಮೇರಿಗೆ ಪರಿಚಯ ಹತ್ತಿತು. ಒಡನೆಯೇ ಕಾಗದ ಬರೆದು ಹಾಕಿದರು. ಮರುವಿಮಾನದಲ್ಲೇ ಬಂದಿಳಿದರು ಹುಡುಗಿಯರು ಮತ್ತು ತಂದೆ.

ಮೊದಮೊದಲು ಕಾನ್ವೆಂಟ್ ವಿದ್ಯಾರ್ಥಿನಿಯರಿಗೆಲ್ಲವೂ ಒಂದೇ ಕುತೂಹಲ ! ಚೀಣೀ.... ಹುಡುಗಿಯರೇ ! ಎಂದೂ ನೋಡಿರಲಿಲ್ಲ ! ಗೆಳೆತನ ವಂತೂ ಸ್ವಪ್ನದಲ್ಲಿ ಸಹ ಆಗಿರಲಿಲ್ಲ. ಹೇಗಿರುತ್ತಾರೋ ಏನೋ—ಎಂಬ ಕುತೂಹಲ !

'ಅವರುಗಳಿಗೆ ಮೂಗೇ ಇರೋದಿಲ್ವಂತೆ—ನಿಜವಾ, ಮದರ್ ?'

'ಕಣ್ಣು ಸಾಸಿವೆಕಾಳಿನಷ್ಟೇ—ಅಂತೆ ?'

'ಕಾಲು ಕೈಗೂಸಿನ ಕಾಲಿಗಿಂತ ಚಿಕ್ಕದಂತೆ ?'

'ಮಕ್ಕಳೇ-ಅವರೂ ನಮ್ಮ ಹಾಗೆ ಜೀಸಸ್‌ನ ಮಕ್ಕಳು !' ಕೊನೆಗೆ ಮದರ್ ಮೇರಿ ಗದರಿಸಿಕೊಳ್ಳಬೇಕಾಯಿತು—'ಹಾಗೆಲ್ಲ ಮಾತನಾಡ ಬಾರದು !'

'ನಿಜ ನಿಜ ! ನಾಳೆ ಎಲ್ಲರಂತೆ ಏಸುವಿನ ರಾಜ್ಯಕ್ಕೆ ಹೋಗುವವರು ! ಪಾಪ, ಎಲ್ಲಾ ಹಳದಿ ಕುರಿಗಳು !'

ಹಿಂದೂ ವಿದ್ಯಾರ್ಥಿನಿಯರು ಪಿಸುಗುಟ್ಟಿದರು. ಆಗ ಮಿಕ್ಕ ಹುಡುಗಿಯರಿಗೆಲ್ಲ ಕೋಪ ಬಂದಿತು. ತರಗತಿ ಕೆಲ ಹೊತ್ತು ಇಬ್ಭಾಗವಾಯಿತು. ಆ ಚೀಣಿ ಹುಡುಗಿಯರು ಬಂದ ಕೂಡಲೇ ಒಂದಾಯಿತು. ಪಾಪ—ಅವರುಗಳು ಬಂದಂದು ನೋಡಬೇಕು ! ಒಳ್ಳೇ ಕಾಡುಮನುಷ್ಯನನ್ನು ನೋಡುವಂತೆ ಎಲ್ಲರೂ ನೆರೆದು ದಿಟ್ಟಿಸಿದರು—ಆ ಇಬ್ಬರು ಹುಡುಗಿಯರನ್ನೇ !

'ನಿಮ್ಮ ಮ್ಯಾನರ್ಸ್ ಎಲ್ಲಿ, ಮಕ್ಕಳೇ ?' ಮದರ್ ಲೂಯಿಸ್ ಬುಸುಗುಟ್ಟಿದಾಗಲೇ ಎಲ್ಲರಿಗೂ ಎಚ್ಚರ !

ಆದರೆ ಆ ಚೀಣಿ ಹುಡುಗಿಯರಿಗೆ ಇದರಿಂದ ಬೇಸರವಾದ ಹಾಗೆ ಕಾಣಲಿಲ್ಲ. ನಗುನಗುತ್ತಲೇ ಎಲ್ಲರತ್ತ ನೋಡಿದರು—

'ನಮಗಿದೆಲ್ಲಾ ನೂ ಅಭ್ಯಾಸವಾಗಿಬಿಟ್ಟಿದೆ. ಹೋದಹೋದ ಕಡೆಯಲ್ಲೆಲ್ಲಾ ನಮಗಿದೇ ಸ್ವಾಗತ !' ಅವರಿಬ್ಬರಲ್ಲಿ ಕಿರಿಯವಳಾದ ಶೈಲಾ ಸಾರಿದಳು—'ಆದರೆ ನಾವು ಚೀಣೀಯರು—ಭಂಡಜನ ! ನಮ್ಮ ಮನಸ್ಸಿಗೆ ಬೇಡವಾದದ್ದು ಹೋಗುವುದೇ ಇಲ್ಲ ! ಇಷ್ಟಕ್ಕೆಲ್ಲಾ ನೊಂದು ಕೈ ಕಟ್ಟಿ ಕೂತರಾಯಿತೆ ? ಒದರಿಕೊಂಡು ಮುನ್ನುಗ್ಗಬೇಕು ! ನಮಗೆ ಬೇಕಾದದ್ದನ್ನ ಪಡೆಯಬೇಕು ! ಅದೇ ಬದುಕುವ ದಾರಿ !'

ನಿಜ—ಭಂಡರೇ ಅವರುಗಳು ! ನರನರಗಳಲ್ಲಿಯೂ ನರಿಬುದ್ಧಿ !—ಬೇಕಾದರೆ ಚಾಣಕ್ಯನನ್ನೂ ಮಾರಿಕೊಂಡು ಬಂದುಬಿಡುತ್ತಿದ್ದರು—ಅಷ್ಟೊಂದು ಚಾತುರ್ಯ ! ನಗುನಗುತ್ತಲೇ ಕೈಕೊಡುತ್ತಿದ್ದರು !

ಯಾವದೇ ಮದರ್‌ನ 'ಸ್ವೀಟೀ–ಚೈಲ್ಡ್–ಮೈಗರ್ಲ್–ಡಿಯರಿ–ಡಾರ್ಲಿಂಗೂ ಅವರ ಮೇಲೆ ಪ್ರಭಾವ ಬೀರುತ್ತಿರಲಿಲ್ಲ ! ಕೊನೆಗೆ ಮದರುಗಳೇ ಸುಸ್ತುಹೊಡೆದುಬಿಟ್ಟರು—ಈ ಚೀಣೀ ವಿದ್ಯಾರ್ಥಿನಿಯರನ್ನ ಕಂಡು !

'ನೀವು ಯಾವ ಜಾತಿ ?' ಬಂದ ದಿನವೇ ಎಲ್ಲರೂ ಸುತ್ತುಗಟ್ಟಿ ಕೇಳಿದರು—ಅವರುಗಳನ್ನು.

'ನಮಗೆ ಜಾತಿಯೇ ಇಲ್ಲ—' ಅವರುಗಳು ಸರಾಗವಾಗಿ ಉತ್ತರ ಕೊಟ್ಟರು.

'ಏನು ಹಾಗೆಂದರೆ ?' ಎಲ್ಲರೂ ಕಕ್ಕಾಬಿಕ್ಕಿಯಾದರು. ಅಲ್ಲಿ ನೆರೆದಿದ್ದವರಿಗೆಲ್ಲ ಜಾತಿ ಇತ್ತು. ಮುಕ್ಕಾಲುವಾಸಿ ಕ್ರಿಶ್ಚಿಯನ್, ಕೆಲವರು ಹಿಂದೂ,

ಎಲ್ಲೋ ಎಣಿಸಿದಂತೆ ಮುಸ್ಲಿಂ.

‘ನಮ್ಮ ತಂದೆ ಕೆಥೊಲಿಕ್ ಜಾತಿ ಸ್ವೀಕರಿಸಿದರು—’ ಪಟಪಟ ಮಾತನಾಡುತ್ತಿದ್ದ ಕಿರಿಯುವಳು ಒದರಿದಳು—‘ಅವರಿಗೆ ಆ ಜಾತಿ ಇಷ್ಟವಾಯ್ತು. ನಮ್ಮ ತಾಯಿ ಕನ್‌ಫ್ಯೂಸಿಯಸ್‌ನ ಶಿಷ್ಯಳು, ನಮ್ಮಣ್ಣ ಬೌದ್ಧ ಮತಕ್ಕೆ ಸೇರಿಬಿಟ್ಟ, ದೊಡ್ಡಕ್ಕ ಕಲ್ಕತ್ತಾಗೆ ಬಂದ ತಕ್ಷಣ ಬ್ರಹ್ಮಸಮಾಜದಲ್ಲಿ ಒಂದಾಗಿಬಿಟ್ಟಳು ! ಇನ್ನು ನಾವು....ನಾವು ಏನೂ ಯೋಚಿಸಿಲ್ಲ. ನಮ್ಮ ಮನಸ್ಸಿಗೆ ಸರಿ ಎಂದು ತೋರಿದ ಜಾತಿಗೆ ಸೇರ್ತೀವಿ.’

‘ಇದೊಳ್ಳೇ ವಿಚಿತ್ರ !’ ಕಾನ್ವೆಂಟಿನ ಹುಡುಗಿಯರು ಮುಖ ಮುಖ ನೋಡಿಕೊಂಡರು—‘ಎಲ್ಲೂ ಕೇಳಿರಲಿಲ್ಲ !’

ಎಂಥವರಿಗೂ ದಿಗ್ಭ್ರಮೆಯಾಗುವಂತಹ ಉತ್ತರವಲ್ಲವೇ ಇದು ?

‘ಮುಸ್ಲಿಂ ಆಗಿಬಿಡಿ ಬದಲಾವಣೆಗೆ ! ಆಗ ಗುಂಪು–ನಿಮ್ಮ ಸಂಸಾರದ ಗುಂಪು ಸರಿಹೋಗತ್ತೆ—’ ಅರುಣ ಸಲಹೆ ಮಾಡಿದಳು.

‘ನಮ್ಮ ತಂದೆ ಕೆಥೋಲಿಕ್ ಆದ ತಕ್ಷಣ ನಮಗೆ ಈ ಎನನ್–ಶೈಲಾ ಹೆಸರಿಟ್ಟರು....’ ಶೈಲಾ ನಕ್ಕು ಮುಂದುವರಿಸಿ ತಿಳಿಸಿದಳು—‘ನಮ್ಮ ತಾಯಿಗೆ ಒಪ್ಪಿಗೆ ಆಗಲಿಲ್ಲ. ಅವಳು ತನ್ನ ಆ ಹಳೇ ಹೆಸರಿನಲ್ಲೇ ನಮ್ಮನ್ನ ಕರೀತಾಳೆ. ಓಗೊಡೋದಿಕ್ಕೇ ಮರೆತು ಹೋಗತ್ತೆ ನಮಗೆ! ಮತ್ತು ಪ್ರತಿ ಕಾಗದದಲ್ಲೂ ಕನ್‌ಫ್ಯೂಸಿಯಸ್ ವಿಚಾರ ಬರೆಯುತ್ತಾಳೆ. ಬರೀ ಸ್ಪೋರ್ಟ್ಸ್ ವಿಷಯವಾಗಿ ಬರೀತಿದ್ದ ಅಣ್ಣನ ಕಾಗದದ ಭರ್ತಿ ಈಗೀಗ ಬರೀ ಬುದ್ಧನ ತತ್ವಗಳು—ಬುದ್ಧನ ಕಥೆಗಳು ! ಬರೀ ಸಿನೀಮಾ ವಿಷಯ ಬರೀತಿದ್ದ ಅಕ್ಕನ ಕಾಗದದಲ್ಲೂ ಈಗೆಲ್ಲಾ ಬ್ರಹ್ಮಸಮಾಜದ ಬಗ್ಗೆ ಕವನಗಳು—ಅಲ್ಲಿ ಕೊಟ್ಟ ಭಾಷಣದ ಅಚ್ಚು....ಸಾಕಪ್ಪಾ ಸಾಕು ಈ ಜಾತಿ ಸಹವಾಸ ! ನಾವು ಹೀಗೇ ಜಾತಿ ಇಲ್ಲದೇನೇ ಆಜನ್ಮ ಪೂರ್ತಿ ಇದ್ದು ಬಿಡಬೇಕೆಂದಿದ್ದೇವೆ.’—ಶೈಲಾ ಸಾರಿದಳು.

ಮದರ್ಸ್‌ಗಳು ಕೂಡ ನಕ್ಕರು–ಅವರುಗಳ ಈ ಪೇಚಾಟವನ್ನು ಕೇಳಿ ! ಜಪಾನ್ ದೇಶ ಸೋತಂದು ಈ ಚೀಣೀ ಹುಡುಗಿಯರ ಸಂಭ್ರಮವೇ ಸಂಭ್ರಮ !

‘ಲೆಖ್ಖವಿಲ್ಲದಷ್ಟು ವರ್ಷಗಳಿಂದ ನಾವಿಬ್ಬರೆ—ನಮ್ಮ ಚೀಣಾ ಒಂದೇ

ಈ ಜಪಾನಿನ ವಿರುದ್ಧ ಹೋರಾಡ್ತಿದೇವೆ. ಇದೀಗ ಅಮೇರಿಕಾ ನಮ್ಮ ಸಹಾಯಕ್ಕೆ ಬಂದಿತು ಅಷ್ಟೇ !' ಘೋಷಿಸಿದರು—'ನಿಜವಾದ ವಿಜಯ ನಮ್ಮದೇ ! ನಿಜವಾದ ವಿಜಯ ನಮ್ಮದೇ !'

ಚೀಣಾದ ಬಾವುಟವನ್ನು ಹಿಡಿದುಕೊಂಡು ಕಾನ್ವೆಂಟ್ ಪೂರ್ತಿ ಆ ಈರ್ವರು ಹುಡುಗಿಯರೂ ಮೆರವಣಿಗೆ ಮಾಡಿದರು. ಅಂದು ಕಲ್ಕತ್ತಾದಲ್ಲಿ ಅವರ ಜನಾಂಗವೆಲ್ಲ ಬಹಳ ಸಡಗರದಿಂದ ಈ ವಿಜಯೋತ್ಸವವನ್ನು ಆಚರಿಸಿತಂತೆ ! ಅಲ್ಲಿಂದ ಬಂದ ಒಂದು ಫೋಟೋವನ್ನು ಈ ಹುಡುಗಿಯರು ಪ್ರದರ್ಶಿಸಿದ್ದೂ ಪ್ರದರ್ಶಿಸಿದ್ದೇ !

'ಇನ್ನೇನು, ನಾವೂ ನಮ್ಮ ಹೋಮ್‌ಗೆ ಹೊರಟುಬಿಡ್ತೀವಿ, ಮೆನ್!' ಅರುಣಳ ಬಳಿ ಆ ಹುಡುಗಿಯರೀರ್ವರೂ ಜಂಬ ಕೊಚ್ಚಿಕೊಂಡರು— 'ಬಂದು ನೋಡು ನಮ್ಮ ದೇಶಾನ—ಎಷ್ಟು ದೊಡ್ಡದಾಗಿದೆ ಗೊತ್ತಾ ? ಬೇಕಾದ್ರೆ ನಿಮ್ಮನ್ನೆಲ್ಲಾ ತಿಂದುಬಿಡಬಹುದು—ಹಾಗಿದೆ !'

'ಹೋ....ಮ್ !' ಅರುಣ ಅತೀವ ವೇದನೆಯಿಂದ ಮೋಜಿಗೊರಗಿದಳು—'ಹೋಮ್ !'

'ನಿರಾಶ್ರಿತರಾಗಿ ಓಡಿಬಂದ ಅವರುಗಳಿಗೆ ಸಹ ಇದೆ ಹೋಮ್ ! ತಡೆಯದೆ ಚಂದ್ರೂ ಅಂಕಲ್‌ನ ಎದುರಿನಲ್ಲಿ ಅತ್ತುಬಿಟ್ಟಳು—ಬೀದಿಯಲ್ಲಿ ಬಿಕ್ಕೆ ಬೇಡ್ತಿರೋ ಆ ಚಿಂದಿಬಟ್ಟೆ ಮಗೂಗೆ ಸಹ ಇದೆ ! ಅದೇ ನಂಗೆ ? ನ-ಂ-ಗೆ?....ನನ್ನ ಮಮ್ಮೀನೋ, ಆಂಟೀನೋ, ಯಾರಾದರೊಬ್ಬರು ಬದುಕಿದ್ದಿದ್ದರೆ, ನನಗೀ ಸ್ಥಿತಿ ಬರ್‍ತಿತ್ತಾ ? ಎಲ್ಲರೂ ಹೋಗಿ ಹೋಗಿ ಆ ಸ್ವರ್ಗದಲ್ಲಿ ಕೂತುಬಿಟ್ಟಿದ್ದಾರೆ !'

ತಕ್ಷಣ ಡ್ರೈವ್ ಮಾಡುವುದನ್ನು ನಿಲ್ಲಿಸಿ, ಚಂದ್ರೂ ಅಂಕಲ್ ಅವಳನ್ನೇ ನೋಡುತ್ತಾ ಕೂತುಬಿಟ್ಟಿದ್ದರು. ಯಾವುದೋ ಪ್ರಬಲ ಹೋರಾಟ ಅವರ ಮನಸ್ಸಿನಲ್ಲೂ ನಡೆದು, ಮುಖದ ಮೇಲೆ ಒಡೆದುಕೊಂಡಿತು.

'ಸಾರಿ ಅಂಕಲ್—ನಾನು ಹಾಗೆಲ್ಲ ಆಡಬಾರದಿತ್ತು ! ಯಾಕೋ ಗೊತ್ತಿಲ್ಲ, ಸಂಕಟ ಹತ್ತಿಕೊಂಡು ಬಂದುಬಿಡ್ತು'—ಕಾನ್ವೆಂಟ್ ಬಾಗಿಲಿನಲ್ಲಿ ಅರುಣ ಕ್ಷಮಾಪಣೆ ಕೇಳಿಕೊಂಡಾಗ—'ಮುಂದಿನ ಶನಿವಾರ ಒಬ್ಬ ಒಳ್ಳೆ ಆಂಟಿ ಹತ್ರ ಕರಕೊಂಡು ಹೋಗ್ತೀನಿ. ಬರ್‍ತೀಯಾಮ್ಮಾ ?' ಕೇಳಿದ್ದರು.

ಯಾವ ಕಾರಣದಿಂದಲೋ ಏನೋ, ಅವರ ಗಂಟಲು ನಡುಗುತ್ತಿತ್ತು.

'ನಿಜ ಮಗು, ನೀ ಹೇಳೋದು....' ನಿಧಾನವಾಗಿ ಹೇಳಿದ್ದರು— 'ಹೆಣ್ಣುಮಕ್ಕಳಿಗೆ ಹೆಂಗಸರ ಜೊತೆ ಬೇಕು! ಅದೂ ಒಂದು ವಯಸ್ಸಿಗೆ ಬಂದಮೇಲೆ! ಏನೇ ಮಾಡಿದರೂ ನಮ್ಮ ಕೈಯಲ್ಲಿ ಬೇರೆ ಆ ಸ್ಥಾನಾನ ತುಂಬೋದಿಕ್ಕೆ ಆಗೋದಿಲ್ಲ. ಬೇರೆ ಹೆಂಗಸಿನ ಕೈಲೂ ಸಾಧ್ಯ ಇಲ್ಲ ಅನ್ನು; ಆದರೆ ಆಕೆ ಸ್ನೇಹ ನೀಡಬಲ್ಲಳು. ಆ ಸ್ನೇಹದಿಂದಾಗಿ ನಿನ್ನ ಒಂಟಿತನ ಮಾಯವಾಗಬಹುದು.'

ಇದೇ ಮಾತನ್ನೇ ಚಂದ್ರೂ ಅಂಕಲ್ ಮದರ್ ಸುಪೀರಿಯರ್‌ಗೂ ತಿಳಿಸಿ, ಅಪ್ಪಣೆ ಪಡೆದರು—ತಮ್ಮ ಆಂಟಿಯ ಮನೆಗೆ ಕರೆದೊಯ್ಯಲು. ಮುಂದಿನ ಶನಿವಾರ ಬೇಗನೆಯೇ ಓಡಿಬಂದಿತು. ಎಲ್ಲರಿಗಿಂತ ಮೊದಲು ಅರುಣ ಸಿದ್ಧವಾಗಿ ನಿಂತಿದ್ದಳು. ಹಿಂದೆಂದೂ ಅನುಭವಿಸದ ಅಪೂರ್ವ ಸಂತಸ-ಸಂಭ್ರಮ ಮನಸ್ಸಿನ ತುಂಬಾ! ಹಕ್ಕಿಯಂತೆ ಕುಣಿಯುತ್ತಾ ಕಾರಿನಲ್ಲಿ ಕೂತಳು.

'ಇಷ್ಟು ದಿವಸ ಸುಮ್ಮನೆ ಇದ್ದದ್ದೇ ತಪ್ಪಾಯ್ತೇನೋ? ಈ ಕೆಲಸ ವನ್ನು ಮೊದಲೇ ಮಾಡಬೇಕಿತ್ತೇನೋ?' ಚಂದ್ರೂ ಅಂಕಲ್ ಅಂದು ಕೊಂಡರು—'ಹುಂ—ಯಾವುದಕ್ಕೂ ಕಾಲ ಕೂಡಿಬರಬೇಕಲ್ಲಾ?'

೭

'ಆ ಆಂಟಿಯ ಹೆಸರೇನು, ಅಂಕಲ್?' ಎಂದು ನಡುದಾರಿಯಲ್ಲಿ ಅರುಣಳ ಪ್ರಶ್ನೆ.

'ಇಂದು.'

'ಇ....ಂ....ದು!' ಅರುಣ ಭಾವಪರವಶಳಾಗಿ ಸೀಟಿಗೊರಗಿದಳು— 'ಇಂದು! ಎಂತಹ ಮುದ್ದಾದ ಹೆಸರು! ಅಂಕಲ್?....' ಏನೋ ಹೊಳೆ ದವಳಂತೆ ಪ್ರಶ್ನಿಸಿದಳು—'ಅದು ಚಂದ್ರನ ಹೆಸರು—ಅಲ್ಲವಾ?'

'ಅಂದರೆ...ಆಕೆ ನೋಡೋದಿಕ್ಕೆ ಚಂದ್ರನಷ್ಟೇ ಸುಂದರವಾಗಿದ್ದಿರ ಬೇಕು....ಅಲ್ಲಾ?'

'ಇದ್ದಳು....ಒಂದಾನೊಂದು ಕಾಲದಲ್ಲಿ; ಈಗ...ಹೀಗೇ ಮನಸ್ಸಿಗೆ ಏನೇನೋ ನೋವಾಗಿ, ಕಷ್ಟ ಅನುಭವಿಸಿ....ಊರಿಗೂ ಮುಂಚೆ ಮುದುಕಿಯಂತಾಗಿದ್ದಾಳೆ—' ಚಂದ್ರೂ ಅಂಕಲ್ ತೂಕಮಾಡಿ–ತೂಕಮಾಡಿ, ಹೇಳಿದಂತಿತ್ತು ಉತ್ತರ!

'ಓ!....' ಅರುಣಳ ಗರಿಗೆದರಿದ್ದ ಮನಸ್ಸು ಸ್ವಲ್ಪ ಮುದುರಿತು— 'ನಾನೇನೇನೋ ಕನಸು ಕಟ್ಟಿಕೊಂಡಿದ್ದೆನಲ್ಲ. 'ತುಂಬಾ ಚಿಕ್ಕವಳು ಈ ಆಂಟಿ–ತುಂಬಾ ಸುಂದರವಾಗಿದ್ದಾಳೆ–ತುಂಬಾ ಓದಿದ್ದಾಳೆ....' ಅಂತೆಲ್ಲಾ! ಏನಂಕಲ್?....'

'ನೀನೂ ನಾಣಿಯ ಹಾಗೆಯೇ!' ಚಂದ್ರೂ ಅಂಕಲ್ ನಕ್ಕರು— 'ಎದ್ದು ಕೂರುವುದಕ್ಕಿಲ್ಲ—ಆಗಲೇ ಆಕಾಶ ಮುಟ್ಟುವಂತಹ ಕನಸುಗಳು! ಹಿಂದುಗಡೆಯೇ ನಿರಾಶೆ! ಆ ನಿರಾಶೆಯಲ್ಲಿ ಏನು ಮಾಡಿಕೊಂಡುಬಿಟ್ಟ ನೋಡು—ಸರಿಯೇ?'

'ಏನು ಮಾಡಿಕೊಂಡುಬಿಟ್ಟರು, ಅಂಕಲ್?' ಅರುಣ ತಕ್ಷಣ ಅತೀವ ಕುತೂಹಲದಿಂದ ತಿರುಗಿದಳು—'ಅದೇನು ನೀವು ಹೇಳೋದು?'

ಆದರೆ ಚಂದ್ರೂ ಅಂಕಲ್ ಒಮ್ಮೆಲೇ ಹುಷಾರಾದರು. 'ಏ....ಏನಿಲ್ಲ. ಏನಾಗಿತ್ತು ಅವನಿಗೆ ಧಾಡಿ, ಏನಾದ್ರೂ ಮಾಡಿಕೊಳ್ಳೋದಿಕ್ಕೆ!' ಎಂದು ಗದರಿದರು—'ಅಲ್ಲಿ ನೋಡು ಆ ಜಿಂಕೇನಾ? ಒಳ್ಳೇ ಮಾಯಾಮೃಗದ ಹಾಗಿದೆ ಅಲ್ಲಾ!'

'ಊಂ....' ಎಂದಳು ಅರುಣ—ಯಾಂತ್ರಿಕವಾಗಿ.

'ಅರೆ. ಓಡೇಬಿಡ್ತು ನಮ್ಮನ್ನು ಕಂಡು! ಭಯ ಪಾಪ, ಎಲ್ಲಿ ಗುಂಡು ಹೊಡೀತೀವೋ ಅಂತ! ಸದ್ಯ–ಬಂದೂಕು ತಂದಿದ್ರೆ ತಾನೆ?' ಹೀಗೆ ಮಾತು ಬದಲಾಯಿಸಿದರು.

* * *

ಕಾರು ನಿಂತ ಶಬ್ದ ಆಯಿತೋ ಇಲ್ಲವೋ, ಹೂಂ ಕೇಳುತ್ತಿದ್ದ ಆಕೆ ತಲೆಯೆತ್ತಿ ನೋಡಿದಳು. ಚಂದ್ರೂ ಅಂಕಲ್ ಅನ್ನು ಕಂಡು ನಗು ಸುಳಿಯಿತು ಮುಖದ ಮೇಲೆ. ಅರುಣಳತ್ತ ದೃಷ್ಟಿ ಹೊರಳಿದಾಗ—ಕಲ್ಲಿಗಿಂತ ಕಲ್ಲಿನಂತೆ ನಿಂತುಬಿಟ್ಟಳು—ಅವಳನ್ನೇ ನೋಡುತ್ತಾ!

'ಪೂಜೆಯ ಹೊತ್ತು, ಕರಡಿಗಳಂತೆ ಮಧ್ಯೆ ನುಗ್ಗಿಬಿಟ್ಟೆವು....' ಗೇಟನ್ನು ತೆಗೆದ ಚಂದ್ರೂ ಅಂಕಲ್ ಒಳಗೆ ಹೆಜ್ಜೆಯಿಟ್ಟರು—ಅರುಣಳ ಕೈ ಹಿಡಿದುಕೊಂಡು 'ಕ್ಷಮಿಸು, ಇಂದೂ....'

ಆಕೆಯ ಕಣ್ಣುಗಳು ಅರುಣಳ ಮುಖವನ್ನು ಬಿಡಲೇ ಇಲ್ಲ! ಅರುಣ ಳಿಗೆ ಒಂದು ತರಹವಾಯಿತು. ಅಂಕಲ್ ಪಕ್ಕ ನೋಡಿದಳು.

'ಮಗು ಬೆದರಿಕೊಳ್ಳುತ್ತೆ ಅಷ್ಟೆ, ಹೀಗೆ ನೋಡಿದರೆ—' ಚಂದ್ರೂ ಅಂಕಲ್ ಹುಸಿಕೋಪ ತೋರಿದರು—'ಬರುವಾಗಲೇ, ಯಾವ ಕರಡಿ ಹತ್ರ ತರ್ತಿದೀನೋ, ಯಾವ ಹುಲೀನ ತೋರಿಸ್ತೀನೋ, ಅಂತ ಅಂಜಿ ಕೊಂಡಿತ್ತು. ನೀನೂ ಹೀಗೆ ಮಾಡಿದ್ರೆ....'

ಅವಳು ನಕ್ಕಳು.

'ಯಾರು—ಅರುಣಳಾ?' ಕೇಳಿದಳು.

ಅವಳ ಧ್ವನಿ ಒಳ್ಳೆ ಬೆಳ್ಳಿಯ ಗಂಟೆಯಂತಿತ್ತು. 'ಅರುಣ' ಎಂದು ಆಕೆ ಹೇಳಿದ ರೀತಿ—ಆ ಭಾವ! ಆ ಧ್ವನಿ!

'ನನ್ನ ಹೆಸರು ಇಷ್ಟೊಂದು ಸುಂದರವಾಗಿದೆಯೆ! ನಂಗೆ ಗೊತ್ತೇ ಇರಲಿಲ್ಲ?' ಅರುಣ ನಿಬ್ಬೆರಗಾಗಿ ನಿಂತಳು. ಮುದುಕಿಯಾಗಿದ್ದರೂ ಏನು ಚೆಲುವೆ!

'ಇಲ್ಲಿ ಬಾ, ಮಗು?' ಹೂಬುಟ್ಟಿಯನ್ನು ಕೆಳಗಿಟ್ಟು, ಹತ್ತಿರ ಬಂದು, ಮೊಳಕಾಲೂರಿ, ಅರುಣಳ ಗಲ್ಲವನ್ನು ಹಿಡಿದೆತ್ತಿ ನಿಟ್ಟಿಸಿ ನೋಡಿದಳು. ಯಾವುದೋ ಒಂದು ತೆರನಾದ ಗಾಂಭೀರ್ಯ ವಾತಾವರಣದಲ್ಲಿ ಹರಿಯಿತು!

'ಹೌದು, ಚಂದ್ರೂ ಹೇಳಿದ್ದು ನಿಜ! ತುಂಬಾ ಚೆನ್ನಾಗಿದ್ದಾಳೆ' ತನಗೆ ತಾನೇ ಹೇಳಿಕೊಂಡಳು—'ಸಧ್ಯ, ತನ್ನ ತಾಯಿಯಂತಾಗದಿದ್ರೆ ಸಾಕು.'

ಅರುಣ ಚಳಿ ಬಂದವಳಂತೆ ನಡುಗಿದಳು. ಇದೇನು ಮಾತು! ಛೇ, ತಾನಿಲ್ಲಿಗೆ ಬರಬಾರದಿತ್ತು! ಈ ಆಂಟಿ ಯಾಕೆ ಹೀಗೆ ಮಾತನಾಡುತ್ತಾರೆ? ಅದೂ ಎಂದೋ ಸತ್ತ ತನ್ನ ತಾಯಿಯ ಬಗ್ಗೆ? ಪಾಪ—ತನ್ನ ಮಮ್ಮಿ ...ಹೀಗೆಲ್ಲಾ ಮಾತನಾಡಬಹುದೇ?

'ಇಂದೂ!' ಚಂದ್ರೂ ಅಂಕಲ್‌ನ ಧ್ವನಿ ಗಡುಸಾಗಿತ್ತು—'ಅದು ಇನ್ನೂ ಎಳೇ ಮಗು! ಏನೇನೂ ಗೊತ್ತಿಲ್ಲ—ಅದರ ಮುಂದಾ ಈ

ಮಾತು ! ಅಲ್ಲದೆ. ಅವಳದೇನೂ ತಪ್ಪಿಲ್ಲ ; ಮರೆತುಬಿಟ್ಟೆಯಾ?'

ಅರುಣಳ ಕೈಹಿಡಿದವರೇ ದರದರ ಎಂದು ಎಳೆದುಕೊಂಡು ಹಿಂತಿರುಗಿಯೇ ಬಿಟ್ಟರು ಕಾರಿನ ಬಳಿ !

'ಅಯ್ಯೋ ಬೇಡ! ಬೇಡ!' ಆಕೆಯ ಹೃದಯವೆಲ್ಲಾ ಆ ಕೂಗಿನಲ್ಲಿ ಬಂದಂತಿತ್ತು—'ನಿಲ್ಲಿ!'

ಏನಾಯಿತೋ, ಚಂದ್ರೂ ಅಂಕಲ್ ಒಂದು ಕ್ಷಣ ನಿಂತರು ; ಆದರೆ ಅವರ ಮುಖಭಾವ ಸಡಿಲವಾಗಲಿಲ್ಲ.

'ಬಾ ಅಂಕಲ್, ಹೋಗೋಣ....ನಂಗೆ....ನಂಗೆ....' ಅರುಣ ಬಹು ಪ್ರಯಾಸದಿಂದ ಅಳು ನುಂಗಿಕೊಂಡಳು—'ಈ ಆಂಟಿ ಇಷ್ಟ ಆಗಲಿಲ್ಲ.'

'ಹಾಂ!' ಸಿಡಿಲು ಬಡಿದವಳಂತೆ ಆಕೆ ನಿಂತಳು.

ಎಲ್ಲಿ ತತ್ತರಿಸಿ ಕೆಳಗೆ ಬೀಳುವಳೋ, ಎಂದು ಭಯವಾಯಿತು. ಓಡಿ ಹೋಗಿ ಅಂಕಲ್ ಹಿಡಿದುಕೊಂಡರು. ಅರುಣಳ ಪಕ್ಕ ತಿರುಗಿ ನೋಡಿದ ಆಕೆಯ ಕಣ್ಣುಗಳಲ್ಲಿ ದೈನ್ಯತೆ ತುಂಬಿತ್ತು.

'ಹಾಗೆಲ್ಲ ಮಾತನಾಡಬಾರದು, ಮಗು—' ಎಂದು ಚಂದ್ರು ಅಂಕಲ್ ಮೆದುವಾಗಿ ತಿದ್ದಿದರು—'ಈಕೆ ನಿನ್ನ ಮಮ್ಮಿಯ ತಂಗಿ ; ಸ್ವಂತ ಆಂಟಿ. ಚಿಕ್ಕಂದಿನಲ್ಲಿ ನಾನೂ ನಾಣೀನೂ ಹೇಗೆ ಇದ್ದೆವೋ, ಹಾಗೆ ಈ ಇಂದುವೂ ನಿನ್ನ ಮಮ್ಮಿಯೂ ಇದ್ದರು. ಅದಕ್ಕೇ ನಿನ್ಮೇಲೆ ಅಷ್ಟೊಂದು ಆಸೆ! ನಿನ್ನನ್ನ ನೋಡಬೇಕು-ನೋಡಬೇಕು ಅಂತ ಎಷ್ಟೊಂದು ತವಕಿಸಿದರು ಗೊತ್ತೆ? ಹಾಗಿರುವಾಗ ನೀ ಹೀಗೆ ಹೇಳಬಹುದೆ? ಎಲ್ಲಿ ಕಲಿತೆ, ಅರುಣ— ಹೀಗೆ ಮುಖ ಮುರಿಯೋ ಹಾಗೆ ಮಾತಾಡೋದಿಕ್ಕೆ? ಈ ರೀತಿ ಬೆಳೆಸಿದವನು ಅಂತ ನನ್ಮೇಲೆ ತಾನೆ ಬರತ್ತೆ ತಪ್ಪು? ಛೇ, ನಂಗೆ ಅವಮಾನ!'

ಅರುಣ ಅವಮಾನದಿಂದ ತಲೆ ತಗ್ಗಿಸಿಬಿಟ್ಟಳು. ಇಲ್ಲ—ಎಂದೂ ಅವಳು ಒರಟಾಗಿ ಮಾತನಾಡಿದವಳೇ ಅಲ್ಲ! ಮತ್ತೆ—ಇಂದೇಕೆ ಹೀಗೆ ಮಾತಾಡಿದಳು? ಹೌದು—ಆಕೆ ತನ್ನ ಮಮ್ಮಿಯ ಬಗ್ಗೆ ಆಡಿದ ಮಾತೇ ಇಷ್ಟೆಲ್ಲ ಅವಾಂತರಕ್ಕೆ ಪೀಠಿಕೆ.

ಮಮ್ಮಿಯ ತಂಗಿಯೇ ಇರಬಹುದು ನಿಜ, ಆದರೂ ಹೀಗೆಲ್ಲ ಮಗಳ ಮುಂದೆ ತಾಯಿಯನ್ನು ಅನ್ನಬಹುದೇ? ಸರಿಯೆ? ಛೇ, ಈಕೆ ದೊಡ್ಡವ

ಳಾಗಿರುವುದು ದಂಡ ! ತನ್ನ ತಾಯಿ ಮಾಡಿದ ತಪ್ಪಾದರೂ ಏನು ? ಉಹು —ಈ ಆಂಟಿಯ ಸಹವಾಸ ಸಾಕು ! ಬೇಗ ಕಾನ್ವೆಂಟಿಗೆ ಹಿಂತಿರುಗಬೇಕು ! ಅರುಣ ಕಾರಿನ ಬಳಿ ಓಡಿದಳು.

'ಅರುಣ ?' ಹಿಂದೆಯೇ ಧಾವಿಸಿ ಬಂದ ಆಕೆ ಅರುಣಳ ಕೈ ಹಿಡಿದು ಬೇಡಿಕೊಂಡಳು—'ನನ್ನನ್ನ ಕ್ಷಮಿಸು, ಮಗು.'

ಆಕೆಯ ಕಣ್ಣುಗಳಿಂದ ನೀರು ಬಳಬಳನೆ ಹರಿಯುತ್ತಿತ್ತು. ಅರುಣಳಿಗೆ ನೋಡಲಾಗಲಿಲ್ಲ. ತನಗೇ ಅರಿಯದಂತೆ ಆಕೆಯ ಎದೆಯಲ್ಲಿ ತಲೆ ಹುದುಗಿಸಿ ಕೊಂಡಳು. ಆಕೆಯ ಕರಗಳೆರಡೂ ಇವಳ ಬೆನ್ನಿನ ಮೇಲಾಡಿದವು; ಕೂದಲೊಳಗೆ ನುಸುಳಿ ನೇವರಿಸಿತು—ಮೃದುವಾಗಿ....

ಹಿರಿಯ ಹೆಣ್ಣು ಜೀವದ ಮಮತೆ-ಸ್ವರ್ಗ ! ಹಿಂದೆಂದೂ ಅನುಭವಿಸದ ಸಮಾಧಾನ-ಶಾಂತಿ, ಪುಟ್ಟ ಅರುಣಳ ಹೃದಯದಲ್ಲಿ ನೆರೆದಿತು. ಕಾಲ ಸ್ತಬ್ಧವಾದಂತೆ ತೋರಿತು.

* * *

ಹೀಗೆ ಆಕಸ್ಮಿಕವಾಗಿ ಆದ ಸ್ನೇಹ ಬೆಳೆಯಿತು. ಅಂಕಲ್ ಜೊತೆ ಆಗಾಗ ಆಂಟಿಯ ಮನೆಗೆ ಹೋಗಿಬರುತ್ತಿದ್ದ ಅರುಣ ಕೊನೆಕೊನೆಗೆ ಪ್ರತಿ ಶನಿವಾರವನ್ನೂ ಅಲ್ಲೇ ಕಳೆಯಲಾರಂಭಿಸಿದಳು.

'ಸರಿಹೋಯ್ತು ! ಇನ್ನು ಯಾಕಮ್ಮಾ ಬೇಕು ನಾ ನಿಂಗೆ-ಹೇಳು ? ಇನ್ನುಮುಂದೆ, ಈ ಬಡ ಅಂಕಲ್ ಜ್ಞಾಪಕ ನಿಂಗೆ ಇರುತ್ತೋ ಇಲ್ಲವೋ?' ಕೀಟಲೆ ಮಾಡುತ್ತಿದ್ದರು—ಚಂದ್ರೂ ಅಂಕಲ್. ಆದರೆ ಅರುಣಳ ಈ ವರ್ತನೆ ಯಿಂದ ಸ್ವಲ್ಪವೂ ಬೇಜಾರುಪಟ್ಟುಕೊಳ್ಳಲಿಲ್ಲ.

'ಸಾರಿ, ಅಂಕಲ್' ಅರುಣಳಿಗೆ ಒಂದು ತರಹವಾಗಿ ಕ್ಷಮಾಪಣೆ ಕೇಳಿ ಕೊಂಡಾಗ, 'ಛೇ, ಇದರಲ್ಲಿ 'ಸಾರಿ' ಏನು ಬಂತು, ಮಗೂ? ಎಷ್ಟಾದ್ರೂ ನಾನು ಗಂಡಸು. ಹೊರಗೆ ಸುತ್ತಿಸಬಲ್ಲೆ—ಬೇಕಾದ ಸಾಮಾನನ್ನ ತೆಗೆದು ಕೊಡಬಲ್ಲೆ. ಆದರೆ ತಾಯಿಯ ಸ್ಥಾನದಲ್ಲಿ ನಿಂತು, ನಿನ್ನ ಸುಖದುಃಖವನ್ನ ವಿಚಾರಿಸಲಾರೆ ; ನಿನ್ನ ಮನಸ್ಸನ್ನು ಅರ್ಥಮಾಡಿಕೊಳ್ಳಲಾರೆ. ಹಿರಿಯ ಹೆಂಗಸಿನ ಸಂಗವನ್ನು ಅಪೇಕ್ಷಿಸೋ ವಯಸ್ಸು ಇದು, ಅರುಣ. ಎಲ್ಲಾ ಸ್ವಾಭಾವಿಕವಾಗಿಯೇ ನಡೆದಿದೆ—' ಎಂದು ಸಮಾಧಾನ ಮಾಡಿದರು.

ಇಂದೂ ಆಂಟಿ ತುಂಬಾ ಒಳ್ಳೆಯವಳು, ಶಾಂತ ಸ್ವಭಾವ; ಹೆಚ್ಚು ಮಾತಿಲ್ಲ. ಎಲ್ಲೂ ಹೊರಗೆ ಹೋಗಿ ಬರುವ, ಅವರಿವರನ್ನು ಸೇರಿಸಿ ಕೊಳ್ಳುವ ಅನಾವಶ್ಯಕವಾಗಿ ಹರಟೆಹೊಡೆಯುವ, ಪ್ರಕೃತಿಯವಳದಲ್ಲ. ತಾನಾಯಿತು–ತನ್ನ ಮನೆಯಾಯಿತು, ಹಾಯಾಗಿದ್ದಳು.

ಮನೆ ಚಿಕ್ಕದು ; ಆದರೆ ಬಹಳ ಅನುಕೂಲವಾಗಿತ್ತು. ರಸಿಕತೆ ಪ್ರತಿ ಯೊಂದರಲ್ಲೂ ಎತ್ತಿಕಾಣುವಂತೆ ಇಡಲ್ಪಟ್ಟಿತ್ತು.

'ಎಷ್ಟು ನೀಟಾಗಿಟ್ಟಿದ್ದೀರಿ ಆಂಟಿ, ನಿಮ್ಮ ಮನೆಯನ್ನ!' ಮೊದಲ ದಿನ ಅರುಣ ಉದ್ಗರಿಸಿದಾಗ ಆಕೆ ನಕ್ಕಿದ್ದರು—'ಏನು ಮಹಾ ! ಒಂದು ದಿನ ಇಟ್ಟರೆ ಸಾಕು, ಇಡೀ ಜೀವಮಾನ ಹಾಗೇ ಇದ್ದುಕೊಳ್ಳುತ್ತೆ. ಮನೇಲಿ ಮಕ್ಕಳುಮರಿಯಿದ್ದಾರಾ, ಮೂರು ನಿಮಿಷಕ್ಕೂ ಕೆದಕಿಹಾಕೋದಿಕ್ಕೆ ?'

ಹೌದು—ಆ ಮನೆಯಲ್ಲಿ ಬೇರೆ ಯಾರೂ ಇರಲಿಲ್ಲ ! ಚಕಿತಳಾದ ಅರುಣ ಪರೀಕ್ಷಾತ್ಮಕ ದೃಷ್ಟಿಯಿಂದ ಎಲ್ಲೆಡೆಯೂ ತಿರುಗಿ ಬಂದಿದ್ದಳು—ಕೋಣೆಗಳಲ್ಲಿ, ಚಿಕ್ಕ ಕೈತೋಟದಲ್ಲಿ, ಎಲ್ಲಾ.

ಊಹು, ಕೆಲಸಕ್ಕಿದ್ದ ಒಕ್ಕಲುಗಿತ್ತಿಯ ವಿನಹ ಬೇರೆ ಯಾರೂ ಇರಲಿಲ್ಲ ಆ ಮನೆಯಲ್ಲಿ ! ಅಕ್ಕಪಕ್ಕದಲ್ಲೂ ಬಯಲು ! ಭಯವಾಗುವುದಿಲ್ಲವೇ ?—ಅಕಸ್ಮಾತ್ ಯಾರಾದರೂ ದರೋಡೆಗಾರರು ಬಂದರೆ ?

'ಸದ್ಯ—ನನ್ನ ಹತ್ರ ಏನಿದೆ ಅಂತ ಬರ್‍ತಾರೆ ದರೋಡೆಗಾರರು !' ಇಂದೂ ಆಂಟಿ ನಕ್ಕಿದ್ದರು—'ಚಿನ್ನವೇ, ಬೆಳ್ಳಿಯೋ, ವಜ್ರವೇ ? ಬರಿಯ ಗಾಜಿನ ಸಾಮಾನು ! ಇಲ್ಲ ರೂಪವೋ....' ತುಟಿ ಕಚ್ಚಿದ್ದರು. 'ಇಲ್ಲಿ ನೋಡು, ಅರುಣ?' ಕ್ಷಣ ಬಿಟ್ಟು ಹುಡುಗಿಯ ಹತ್ತಿರ ಸಾರಿದಾಗ ಇಂದೂ ಆಂಟಿಯ ಧ್ವನಿ ಗಂಭೀರವಾಗಿತ್ತು—'ಈ ಭಯ ಮತ್ತು ದುರಾಶೆಗಳು ಎರಡನ್ನೂ ಬಿಟ್ಟುಬಿಡ್ಬೇಕು ನೋಡು ; ಅವೇ ಎಲ್ಲಾ ಅನಾಹುತಕ್ಕೂ ಕಾರಣ !'

'ಹೇಗೆ ಬಿಡೋದು ?'

ಅರುಣ ಮುಗ್ಧಧ್ವನಿಯಲ್ಲಿ ಪ್ರಶ್ನಿಸಿದ್ದಳು.

'ದೇವರು ಕೊಟ್ಟಿದ್ದರಲ್ಲಿ ತೃಪ್ತಿಪಡಬೇಕು, ಮಗೂ ; ಇದ್ದುದರಲ್ಲಿ ಸುಖವಾಗಿರಬೇಕು. ನೆಮ್ಮದಿ ಇರೋ ಕಡೆ ಅನ್ಯಾಯಕ್ಕೆ ಎಡೆಯೇ ಇಲ್ಲ !

ನ್ಯಾಯ ಇದ್ದಲ್ಲಿ, ಭಯ ಯಾಕೆ ಹೇಳು ? ಭಯದಿಂದ ವ್ಯಕ್ತಿತ್ವ ಹಾಳಾಗಿ ಹೋಗತ್ತೇಮ್ಮಾ. ಆತ್ಮವಿಶ್ವಾಸ-ಅದೇ ಮಾತೆತ್ತಿದ್ರೆ ಸರಿ, Self-confi-dence ಅಂತೀರಲ್ಲಾ ನಿಮ್ಮ ಭಾಷೇಲಿ, ಅದು ಬೆಳೆಯೋದೇ ಇಲ್ಲ ! ಆತ್ಮವಿಶ್ವಾಸ ಇಲ್ಲದ ಜೀವನ ನೆರಳಿನ ಬಾಳು ! ಅದು ನಾಯಿಬಾಳಿಗಿಂತ ಕೇಡು !'

ಆಕೆಯ ಸಂಗ ಅರುಣಳಿಗೆ ಹಿತಕರವಾಗಿತ್ತು. ಅರುಣಳಿಗಾಗಿ ಹಿಂದೂ ಹಬ್ಬಗಳನ್ನೆಲ್ಲ ಆಕೆ ಆಚರಿಸಿದಳು. ಗೋಕುಲಾಷ್ಟಮಿಯಂದು ಅರುಣಳಿಗೆ ಪುಟ್ಟ ಕೃಷ್ಣನ ವೇಷವನ್ನು ಹಾಕಿ, ಕೈಯಲ್ಲಿ ಕೊಳಲು ಕೊಟ್ಟು, ತೋಟದಲ್ಲಿ ಸುತ್ತಿಸಿದಾಗ, ಅರುಣಳ ಹಿಗ್ಗು ಹೇಳತೀರದು ! ವಿಧವಿಧ ಭಕ್ಷ್ಯಗಳನ್ನು ತಯಾರಿಸಿ, ಹುಡುಗಿಯ ಕೈಲಿ ಅವಳ ಕಾನ್ವೆಂಟಿಗೆ ಕಳುಹಿಸಿದರು—ಅವಳ ಸ್ನೇಹಿತೆಯರಿಗೆ.

'ಇದು ಕೋಡುಬಳೆ ; ಇದು ಕರಿಗಡಬು ; ಇದು ಚಕ್ಕುಲಿ ; ಇದು ಮೈಸೂರುಪಾಕು ; ಇದು ಲಾಡು ; ಇದು ಪಿಠಾಯಿ....' ವಿವರಿಸುವಾಗ ಅರುಣಳ ಗಂಟಲು ಕಟ್ಟಿತು.

ಬಹುದಿನಗಳ ಕನಸು ಬಿರಿದಿತ್ತು ! ನವರಾತ್ರಿಯ ರಜೆ ಪೂರ್ತಿ ಆ ಆಂಟಿಯ ಮನೆಯಲ್ಲಿ ಕಳೆದಳು ಅರುಣ. ಅವಳನ್ನೂ ಜೊತೆಯಲ್ಲಿ ಮಾರ್ಕೆಟ್ಟಿಗೆ ಕರೆದುಕೊಂಡು ಹೋದ ಇಂದೂ ಆಂಟಿ ಒಂದು ದೊಡ್ಡ ಪೆಟ್ಟಿಗೆ ತುಂಬಾ ಚೆಂದುಳ್ಳ ಬೊಂಬೆಗಳನ್ನು ತಂದರು.

ರಾಜರಾಣಿಗೆ ಸೀರೆ-ಕಚ್ಚೆಪಂಚೆಯನ್ನು ಉಡಿಸಿ, ಬಣ್ಣಬಣ್ಣ ಮಣಿಗಳಲ್ಲಿ ಗೆಜ್ಜೆಡಾಬು, ವಾಲೆ, ಮುತ್ತುಮೂಗುತಿ, ಸರ, ಬಳೆ, ಕಾಲುಂಗುರ, ಕೈ ಉಂಗುರ, ಎಲ್ಲವನ್ನೂ ಮಾಡಿ ಅಲಂಕರಿಸಿದ ಬಳಿಕ, ಇಬ್ಬರೂ ಸೇರಿ ಲಾಲ್‌ಬಾಗ್, ಹೊಟೇಲ್, ಕನ್ನಂಬಾಡಿಕಟ್ಟೆ, ಚಾಮುಂಡಿಬೆಟ್ಟ, ಎಲ್ಲವನ್ನೂ ನಿರ್ಮಿಸಿದರು—ಮರಳಿನಲ್ಲಿ, ಕಪ್ಪೆಚಿಪ್ಪುಗಳಲ್ಲಿ, ಹುಲ್ಲಿನಲ್ಲಿ, ಬಿಳಿಕಲ್ಲುಗಳಲ್ಲಿ....ರಾಗಿಕಾಳನ್ನು ಉದುರಿಸಿ, ಹಸಿರು ಬರಿಸಿದರು.

ಕೊಳದಲ್ಲಿ ಮೀನುಗಳನ್ನು ತೇಲಿಸಿ, ಲಾಲ್‌ಬಾಗ್‌ನಲ್ಲಿ ಕುರ್ಚಿಗಳನ್ನು ಹಾಕಿ—ಬೊಂಬೆಗಳನ್ನು ಕೂರಿಸಿ, ಕನ್ನಂಬಾಡಿಕಟ್ಟೆಗೆ ಎಲೆಕ್ಟ್ರಿಕ್ ಬಲ್ಬ್‌ಗಳನ್ನು ಹಾಕಿಸಿ—ಹೊತ್ತಿಸಿ, ಮೆಟ್ಟಿಲುಮೆಟ್ಟಿಲಾಗಿ ಜೋಡಿಸಿಟ್ಟ

ಬೆಂಚುಗಳ ಮೇಲೆ ಎತ್ತರದ ಬೊಂಬೆಗಳನ್ನು ನಿಲ್ಲಿಸಿ, ಊರಲ್ಲಿರುವ ಪಾಚಿಯನ್ನೆಲ್ಲಾ ತಂದು ಅಂಟಿಸಿ, ಹುಲ್ಲು ಹಾಸಿ, ಕೈ ತೊಳೆದು ಮಲಗುವ ವೇಳೆಗೆ ಬೆಳಗಿನ ಜಾವ ನಾಲ್ಕು ಗಂಟೆ !

ಒಳ್ಳೇ ಹುರುಪಿನಿಂದ ಆ ಹತ್ತು ದಿನಗಳೂ ಬೊಂಬೆಗಳ ಪೂಜೆಮಾಡಿದಳು, ಆರತಿ ಮಾಡಿದಳು, ಅರುಣ. ಆಂಟಿ ಹೇಳಿಕೊಟ್ಟ ಪದಗಳನ್ನೆಲ್ಲ ರಾಗರಾಗವಾಗಿ ಹೇಳಿದಳು. ಲಕ್ಷ್ಮೀಪೂಜೆ-ತುಳಸೀಪೂಜೆಯನ್ನು ಸಹ ಮಾಡಿದಳು ಶ್ರದ್ಧೆಯಿಂದ ! ಈ ಹಬ್ಬಕ್ಕೆ-ಆ ಹಬ್ಬಕ್ಕೆ, ಎಲ್ಲ ಹಬ್ಬಕ್ಕೂ ಸಂಬಂಧಪಟ್ಟ ಪುರಾಣ ಕಥೆಗಳನ್ನೆಲ್ಲಾ ಆಕೆ ಕೇಳಿ ತಿಳಿದುಕೊಂಡಳು—ಕಾನ್ವೆಂಟಿನ ಲೂಸಿ, ಮೇರಿ ರೋಸ್, ನಾರ್ಮಾ ಮುಂತಾದವರಿಗೆಲ್ಲಾ ಹೇಳಿದಳು.

ಹಬ್ಬಕ್ಕೆ ಕುಚ್ಚುನಾಗರನ್ನು ತೆಗೆದುಕೊಟ್ಟರು ಇಂದೂ ಆಂಟಿ. ಅದನ್ನು ಹಾಕಿಕೊಂಡು ಅವಳು ಕಾನ್ವೆಂಟಿಗೆ ಬಂದಾಗ, ಇಡೀ ಕಾನ್ವೆಂಟ್ ಹೊರಗೋಡಿ ಬಂದಿತು—ಇವಳ ಈ ವಿಚಿತ್ರ ವೇಷವನ್ನು ನೋಡಲು ! ಇದಾದಮೇಲೆ ಗಣಪತಿ ಹಬ್ಬ, ದೀಪಾವಳಿ, ಯುಗಾದಿ ! ಬರಹಿಡಿದವಳಂತೆ ಅರುಣ ತನ್ನ ಬಹುದಿನಗಳ ಬಯಕೆಯನ್ನು ತೀರಿಸಿಕೊಂಡುಬಿಟ್ಟಳು!

ಸಂಕ್ರಾಂತಿ ಹಬ್ಬ ಬಂದಾಗ 'ಎಲ್ಲರೂ ಎಳ್ಳು ಬೀರ್ತಾರಂತೆ, ಆಂಟಿ. ನಾ ಒಂದು ಸಲವೂ ಬೀರಿಲ್ಲ! ಈ ಸಲ ನಮ್ಮ ಕಾನ್ವೆಂಟಿಗೆ ಬೀರಲಾ, ಆಂಟಿ ?' ಸಲಿಗೆಯಿಂದ ಕೇಳಿದ್ದಳು.

'ಧಾರಾಳವಾಗಿ ಬೀರೆ, ಹುಡುಗಿ-ಯಾರು ಬೇಡ ಅಂದರು ? ನನ್ನನ್ನ ಕೇಳಿ ಮಾಡಬೇಕೆ ?' ಇಂದೂ ಆಂಟಿ ಅಂದಾಗ,

'ಚೂರು ಕಬ್ಬು ಇಟ್ಟರೆ ಸಾಲದು, ಆಂಟೀ—ಈಗಲೇ ಹೇಳಿದ್ದೀನಿ ! ಯೂರೋಪಿನಿಂದ ಬಂದಿದ್ದಾರಲ್ಲ ಹುಡುಗಿಯರು, ಅವರಲ್ಲಿ ಎಷ್ಟೋ ಜನ ಕಬ್ಬನ್ನೇ ನೋಡಿಲ್ಲ ! ರುಚಿಹತ್ತಿದ ತಕ್ಷಣ ಆನೆಚಪಲ ತೋರಿಸಿಬಿಡ್ತಾರೆ, ಗ್ಯಾರಂಟಿ !' ಎಚ್ಚರಿಸಿದ್ದಳು.

'ಹೋಗಲಿ—ನಮ್ಮ ಕಬ್ಬು ಹೇಗಿದೆ, ನೋಡಿದ್ದಾರೋ ಇಲ್ಲವೋ ?' ಆಂಟಿ ನಕ್ಕಿದ್ದರು.

'ಯಾರಿಗೆ ಗೊತ್ತು ? ಅಲ್ಲಿಂದ ಬಂದಿಳಿದ ತಕ್ಷಣ ಮಾವಿನಹಣ್ಣು

ಬೇಕೂಂತಾರೆ! ಹಲಸಿನ ಹಣ್ಣು ತಿನ್ನಬೇಕು ಅಂತಾರೆ! ಆನೆ ಎಲ್ಲಿದೆ ಅಂತಾರೆ–ರಾಜರಾಣೀನ ತೋರಿಸು ಅಂತಾರೆ. Groundnuts, groundnuts! ಎಂದು ಉಗ್ಗಡಿಸ್ತಾರೆ. ಈ ಕಡಲೇಕಾಯಿಯನ್ನೇನೋ ನಾವು ಯಾವಾಗ ಬೇಕಾದ್ರೂ ಹೊಂದಿಸಬಹುದು; ಆದರೆ ಮಾವಿನ ಹಣ್ಣಿನ ಕಾಲ ಬಂದಾಗ ತಾನೆ ನಾವು ಹಣ್ಣನ್ನ ತಂದುಕೊಡಬೇಕು? ಇಂಡಿಯಾದ ರಸ್ತೆರಸ್ತೆಯಲ್ಲೂ ಮೂಲೆಮೂಲೆಯಲ್ಲೂ ಬೆಳೆಯುವ ಗಿಡ ಅದು, ಅಂತ ತಿಳಿದುಕೊಂಡಿರೋ ಹಾಗಿದೆಯಲ್ಲಾ? ಇನ್ನು ಆನೆ—ಆನೆಗಳೇನು ಸದಾ ಬೀದೀಲಿ ಹೋಗತ್ವೆ? ರಾಜರಾಣಿಗಳು ಎಲ್ಲೀಂದ್ರಲ್ಲಿ ನೋಡೋ ವ್ಯಕ್ತಿಗಳೇ?' ಈ ಮಾತುಗಳಿಂದ ಇಂದೂ ಆಂಟಿಯ ಕುತೂಹಲ ಕೆರಳಿತು.

'ಸ್ವಲ್ಪ ನಿನ್ನ ಕಾನ್ವೆಂಟ್ ವಿಷಯಾನ ತಿಳಿಸಮ್ಮಾ?' ದುಂಬಾಲು ಬಿದ್ದರು.

'ಅಯ್ಯೋ! ಹೋಗಾಂಟಿ—' ಅರುಣ ಮುಖ ಸಿಂಡರಿಸಿದಳು—'ಕಾನ್ವೆಂಟ್ ಅಂದ್ರೇನೇ ನಂಗೆ ಬೇಜಾರು! ಅಲ್ಲಂತೂ ವಿಧಿಯಿಲ್ಲ—ಇಲ್ಲಿ ಬಂದ್ರೂ....'

'ನಾ ಕೇಳಬೇಕಮ್ಮ. ನಂಗೆ ತಿಳಿದುಕೋಬೇಕೂಂತ ಆಸೆ....'

ಈ ಮಗು ಬೆಳೆದಿರುವ ವಾತಾವರಣ ಎಂತಹುದು, ಎಂಬುದನ್ನು ಅರಿಯಲು, ಅವಳನ್ನು ಪೂರ್ತಿಯಾಗಿ ಅರ್ಥಮಾಡಿಕೊಳ್ಳಲು, ಇಂದೂ ಆಂಟಿಗೆ ಅಪೇಕ್ಷೆ. ಸರಿ—ನೆನಪು ಬಂದದ್ದನ್ನು ಅರುಣ ಅರಿಸಿ, ಪೋಣಿಸಿ, ಆಕೆಯ ಮುಂದಿಡಲೇಬೇಕಾಯಿತು.

* * *

ಕಾನ್ವೆಂಟ್‌ನಲ್ಲಿ ವಿದ್ಯಾರ್ಥಿನಿಯರನ್ನೆಲ್ಲಾ ಮೂರು ಭಾಗಗಳಾಗಿ ವಿಂಗಡಿಸಿದ್ದರು. ಆ ಭಾಗಗಳ ಹೆಸರು—'Holy, Maiden ಮತ್ತು Matron' ಎಂದು

ಆಯಾ ವಿಭಾಗಗಳಿಗೆ ಸದಾ ಸ್ಪರ್ಧೆ ನಡೆಯುತ್ತಲೇ ಇತ್ತು; ಪದ್ಯದ ಸ್ಪರ್ಧೆ, ಡ್ರಾಮಾ ಸ್ಪರ್ಧೆ, ಸ್ಪೋರ್ಟ್ಸ್ ಸ್ಪರ್ಧೆ–ಇತ್ಯಾದಿ. ಆದರೆ ಹೊರಗಡೆ ಯಾವುದಾದರೂ ಮ್ಯಾಚುಗಳಿಗೆ ಹೋಗಬೇಕಾದರೆ ಸರಿ, ಎಲ್ಲಾ ವಿಭಾಗದವರೂ ಒಂದಾಗುತ್ತಿದ್ದರು! ಅವರಲ್ಲಿ ಅತ್ಯುತ್ತಮವಾದ ಆಟಗಾರರನ್ನು

ಆರಿಸಿ ಕಳುಹಿಸುತ್ತಿದ್ದರು. ಒಂದೊಂದು ವಿಭಾಗಕ್ಕೆ ಒಂದೊಂದು ಬ್ಯಾಡ್ಜ್ ಇತ್ತು; ಮತ್ತು ರಾಷ್ಟ್ರಗೀತೆಯ ಹಾಗೆ ಒಂದೊಂದು ಗೀತೆ !

'ಚಿಕ್ಕಪುಟ್ಟ ವಿಷಯಗಳಿಂದ ಹಿಡಿದು, ದೊಡ್ಡ ವಿಷಯಗಳವರೆಗೂ ನಮಗೆಲ್ಲಾ ಮಾರ್ಕ್ಸ್ ಉಂಟು, ಆಂಟೀ' ಅರುಣ ತಿಳಿಸಿದಳು, 'ಬೂಟ್ಸು ಸರಿಯಾಗಿ ಪಾಲಿಶ್ ಆಗದಿದ್ರೆ ಕಮ್ಮಿ ಮಾರ್ಕ್ಸ್, ಟೈ ಸರಿಯಾಗಿ ಕಟ್ಟಿ ಕೊಳ್ಳದಿದ್ರೆ ಕಮ್ಮಿ ಮಾರ್ಕ್ಸ್, ಯೂನಿಫಾರಂ ಸ್ವಲ್ಪ ಸುಕ್ಕುಸುಕ್ಕಾಗಿದ್ದರೂ ಕಮ್ಮಿ ಮಾರ್ಕ್ಸ್! ಒಬ್ಬರಿಗೆ ಬಂದ ಈ ಕಮ್ಮೀ ಮಾರ್ಕ್ಸ್ ಇಡೀ ವಿಭಾಗಕ್ಕೇ ಅನ್ವಯಿಸತ್ತೆ ; ಆಗ ಮಿಕ್ಕವರು ನಮ್ಮ ಮೇಲೆ ಸಿಟ್ಟು ಮಾಡ್ತಾರೆ; ಆದ್ದರಿಂದ ಎಷ್ಟು ಹುಷಾರಾಗಿರ್ತೀವಿ ಗೊತ್ತೆ ?'

ನಿಜ ಅರುಣ ಹೇಳಿದ್ದು. ಎಂದಾದರೊಂದು ಮನೇಲಿ ಐರನ್ ಕೆಟ್ಟು ಹೋಗಿ, 'ಪರವಾಗಿಲ್ಲ ಕಣೆ ; ಇವತ್ತು ಹಾಗೇ ಹಾಕ್ಕೊಂಡು ಹೋಗೇ' ಎಂದು ತಾಯಂದಿರು ಅಂದರೆ ಸರಿ—'ಇಲ್ಲಮ್ಮ, ನಾನು ಈ ಡ್ರೆಸ್‌ನಲ್ಲಿ ಮಾತ್ರ ಕಾನ್ವೆಂಟಿಗೆ ಹೋಗೋದಿಲ್ಲ. ಆಮೇಲೆ ಪ್ರಾಣ ಹೋಗ್ಬಿಡತ್ತೆ !' ಹುಡುಗಿಯರು ಹಿಂಜರಿಯುತ್ತಿದ್ದರು.

'ಮಹಾ ಇಲ್ಲಿ! ನಾವೆಲ್ಲಾ ಕಾಲೇಜಿಗೆ ಹೋಗೋದಿಲ್ವೇ ? ನೋಡಿಲ್ಲಿ ಈ ಷರಟನ್ನ ? ಯಾವ ಅತ್ತೆಮ್ಮ ನಮಗೆ ಐರನ್ ಮಾಡಿಕೊಟ್ಟಿದ್ದಾಳೆ ? ಈ ಪೈಜಾಮಾನ ನೋಡು—ಹೇಗೆ ಮುದುರಿದೆ ? ನಾವೇ ಹಾಗೆ ಹೋಗೋವಾಗ ನಿಂಗೇನೇ ಬಂತು ಧಾಡಿ ?' ಅಣ್ಣಂದಿರು ಮೂದಲಿಸುತ್ತಿದ್ದರು. 'ಹೋಗೆ, ಐರನ್ ಅಂತೆ ಐರನ್ !' ಅಜ್ಜಿ ಅದೆಲ್ಲಿಂದಲೋ ಪ್ರತ್ಯಕ್ಷವಾಗುತ್ತಿದ್ದರು. 'ಒಂದಿನ ಇಲ್ಲದಿದ್ರೆ ಮುಳುಗಿ ಹೋಗತ್ತೇನು ಭೂಲೋಕ ? ಅದಕ್ಕೇ ಬಡಕೊಂಡೆ, ನೀವು ಇಸ್ಕೂಲಿಗೆ ಮಾತ್ರ ಸೇರಿಸಬೇಡ ಅಂತಾ ! ಆದ್ರೆ ಕೇಳಿದ್ರೆ ನನ್ನ ಮಾತನ್ನ ? ದಿವನಾಗಿ ಸೀರೆ ಉಟ್ಟು, ನಾಲ್ಕು ಮಕ್ಕಳ ತಾಯಾಗಿ ಓಡಾಡೋ ವಯಸ್ನಲ್ಲಿ ಮೊಳಕಾಲವರ್ಗೂ ಅದೆಂಥಾದ್ದೋ ಲಂಗಾನೋ ಹಾಕ್ಕೊಂಡು....ದೇವರೇ !....ಒಳ್ಳೇ ದೊರೆಸಾನಿ ಹಾಗೆ ಆಡ್ತಾಳೆ ! ಹೋಗೇ ಹೋಗೇ—ಎಲ್ಲಾ ನಾನೂ ಕಂಡಿದೀನಿ !'

ಉಹುಂ, ಏನಾದರೂ ಸರಿ, ಆ ಕಾನ್ವೆಂಟ್ ವಿದ್ಯಾರ್ಥಿನಿಯರು ಬೇರೆ ಜಗ್ಗುತ್ತಿರಲಿಲ್ಲ ! ಹೋದರೆ ಶಿಸ್ತಾಗಿ ಹೋಗಬೇಕು—ಇಲ್ಲದಿದ್ರೆ ಬೇಡ !

ವರ್ಷದ ಕೊನೆಯಲ್ಲಿ ಅತ್ಯುತ್ತಮ ಹೌಸ್ ಎಂದು ನಿರ್ಧರಿಸಿದ್ದಕ್ಕೆ ಬಹುಮಾನ ಸಿಗುತ್ತಿತ್ತು.

ಕಾನ್ವೆಂಟಿಗೆ ಹೊಸದಾಗಿ ಸೇರಲು ಯಾರಾದರೂ ಬಂದರೆ— 'What is your father ?' ಎಂದು ಕೇಳುವ ಪದ್ಧತಿಯಿತ್ತು. ಇಲ್ಲಿಯವರೆಗೆ ಅದರ ಅರ್ಥ ಬೇಗ ಆಗುತ್ತಿರಲಿಲ್ಲ. ಮಿಕಿಮಿಕಿ ನೋಡುತ್ತ ನಿಲ್ಲುತ್ತಿದ್ದರು.

'ನಮ್ಮ ತಂದೆ ಏನು?—ಎಂದರೆ ಅರ್ಥ ಏನು ? ನಮ್ಮ ತಂದೆಯೂ ಎಲ್ಲರಂತೆ ರಕ್ತ ಮಾಂಸದ ಮನುಷ್ಯ ! ಸಾಮಾನಲ್ಲ ! ಇದೇನೀ ವಿಚಿತ್ರ ಪ್ರಶ್ನೆಯ ಅರ್ಥ ?' ಎಂದು ವತ್ಸಲಾಬಾಯಿ ಮಾತ್ರ ಸರಿಯಾಗಿ ಉತ್ತರ ಕೊಟ್ಟಳು. ಪಾಪ !—ಗವರ್ನಮೆಂಟ್ ಸ್ಕೂಲಿನಿಂದ ಬಂದ ಹುಡುಗಿ; ಯಾವುದನ್ನೂ ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರ ಮಾಡಿ ಅಭ್ಯಾಸವಾಗಿಬಿಟ್ಟಿತ್ತು! 'ನಮ್ಮ ತಂದೆ-ನಮ್ಮ ತಂದೆ !' ಹುಬ್ಬೆತ್ತಿ ಘೋಷಿಸಿದಳು.

ಕಾನ್ವೆಂಟಿನ ಹುಡುಗಿಯರೆಲ್ಲಾ ಮಿಕಿಮಿಕಿ ನೋಡಿದರು. ಅರ್ಥವಾಯಿತೇನೋ, ಗೊಳ್ಳೆಂದು ನಕ್ಕರು.

ಯಾವುದಾದರೊಂದು ಸರಿಯಾಗಿ ತಿಳಿಯದಿದ್ದರೆ, ಅಥವಾ ಕೇಳಿಬರದಿದ್ದರೆ, 'ಏನು ?' ಎಂದು ಪ್ರಶ್ನಿಸುವುದು ಸಹಜ ತಾನೆ ? ಆ 'ಏನು ?' ಎಂಬುವುದಕ್ಕೆ, 'What ?' ಎಂಬುವುದು ತಾನೆ ಇಂಗ್ಲೀಷಿನಲ್ಲಿ ಸರಿಯಾದ ಭಾಷಾಂತರ ?

ವತ್ಸಲಾಬಾಯಿ ಆ ಭಾಷಾಂತರವನ್ನು ಸರಿಯಾಗಿ ಉಪಯೋಗಿಸಿಕೊಂಡಳು. ಪಾಪ ! ಬಂದ ಹೊಸದರಲ್ಲಿ, ಆ ಸರಸರ ಇಂಗ್ಲೀಷ್ ಭಾಷೆ ಏನೇನೂ ಅರ್ಥವಾಗದೆ, ಮಾತುಮಾತಿಗೂ 'ವಾಟ್?' ಎಂದೇ ಹಾಯಾಗಿ ಪ್ರಶ್ನಿಸುತ್ತಿದ್ದಳು.

'What ? What ? What ?' ಒಂದು ದಿನ ಮದರ್ ಲೂಯಿಸ್ ಸಿಡಿದೆದ್ದರು—'ನಿನ್ನ ಮ್ಯಾನರ್ಸ್ ಎಲ್ಲಿ ಹೋಯ್ತು ? Beg your pardon —ಎನ್ನಬೇಕು, ಗೊತ್ತಾಯ್ತಾ ಮಗು ?'

ಈ 'Beg your pardon'ನ್ನು ವತ್ಸಲಾಬಾಯಿಗೆ ಬಾಯಿಪಾಠ ಮಾಡಿಸುವ ಹೊತ್ತಿಗೆ ಸುಸ್ತಾಗಿಬಿಟ್ಟಿತು—ಮದರ್ ಲೂಯಿಸ್‌ಗೆ.

'Beg your pardon' ಮನೆಗಳಲ್ಲಿ ದೊಡ್ಡ ಜೋಕ್ ಆಯಿತು. ಕಾನ್ವೆಂಟಿನಲ್ಲಿ ಹೇಳಿ ಹೇಳಿ ಅಭ್ಯಾಸವಾಗಿದ್ದ ವಿದ್ಯಾರ್ಥಿನಿಯರು ಮನೆಯಲ್ಲೂ ಮಾತುಮಾತಿಗೂ 'ಬೆಗ್ ಯುವರ್ ಪಾರ್ಡನ್?' ಎನ್ನುತ್ತಿದ್ದರು. ಅಜ್ಜಿಗೆ–ಮಕ್ಕಳಿಗೆ–ಕೆಲಸದವರಿಗೆಲ್ಲಾ ಸಹಾ! ಸರಿ, ತಗೋ—ಒಂದೇ ಅಣಕ! ದೊಡ್ಡ ಅಣ್ಣನಿಂದ ಹಿಡಿದು ಪುಟ್ಟ ತಮ್ಮನವರೆಗೂ! 'ಮಾತೆತ್ತಿದ್ರೆ ಸರಿ, ನಿಮಗೆ—ಕಾನ್ವೆಂಟ್ ಹುಡುಗೀಯರಿಗೆ—Thank you, O.k., Sorry, My God !, No mention, Excuse me—ಇವೇ! ಈಗ ಇದೊಂದು!' ಎಂದು. 'ಇದೊಂದು ಬಾಕಿ ಇತ್ತು ಕಣೆ ನೀನು ಅಪ್ಪಟ ಇಂಗ್ಲೀಷಿನವಳಾಗೋದಿಕ್ಕೆ!' ಮತ್ತು—ಬೇಕುಬೇಕೆಂದು, 'ಫ್ಲಾ' ಇನ್ ದ 'ಬಾ' ಇನ್ ದ 'ಟಾ' ಎಂದು ಅವರುಗಳ ನಾಜೂಕಾದ ಉಚ್ಚಾರಣೆಯನ್ನು ಕೀಟಲೆ ಮಾಡುತ್ತಿದ್ದರು! (Flower in the Bower in the Tower.)

ಈ ಮದರ್‌ಗಳು ಎಲ್ಲ ಭಾರತೀಯ ಹೆಸರುಗಳನ್ನು 'ಸೀತಾ' ಮಾಡಿಬಿಡುತ್ತಿದ್ದರು. ಹಳೆಯ ವಿದ್ಯಾರ್ಥಿನಿಯರೂ 'ಸೀತಾ-' ಎಂದಿದ್ದವರೂ 'ಸೀತಾ-' ಹೊಸದಾಗಿ ಬಂದು ಸೇರಿದವರೂ 'ಸೀತಾ!' ಕೊನೆಗೆ ಕೆಲಸಕ್ಕೆ ಸೇರಿದವಳೂ 'ಸೀತಾ!' ಮಾಲಿ, ಆಳು, ವಾಚ್‌ಮೆನ್, ತೋಟಿ–ಎಲ್ಲರೂ ರಾಮು! ಕಾನ್ವೆಂಟ್‌ನಲ್ಲಿ 'ಸರ್‌ನೇಮ್' (ಅಡ್ಡಹೆಸರು) ಇನ್ನೊಂದು ಫಜೀತಿ ತಂದುಹಾಕುತ್ತಿತ್ತು.

ಮನೆಯಲ್ಲಿ ಎಲ್ಲರೂ ಕೂಗುವ ಹೆಸರಿನ ಹಿಂದುಗಡೆಯೇ ಮನೆತನದ ಹೆಸರನ್ನು ಇಟ್ಟುಕೊಳ್ಳುವುದು ಪಾಶ್ಚಾತ್ಯರ ಪದ್ಧತಿ. ಆದರೆ ಹಿಂದೂಗಳಿಗೆ ಅದೆಲ್ಲಾ ಹೊಸದು—ಹಾಗೂ ವಿಚಿತ್ರ!

'ನಿನ್ನ ಸರ್‌ನೇಮ್ ಏನು?' ಹೊಸದಾಗಿ ಬಂದು ಸೇರಿದ ಹಿಂದೂ ಹುಡುಗಿಯರನ್ನು ಕಾನ್ವೆಂಟ್ ಹುಡುಗಿಯರು ಕೇಳಿದಾಗ, ಅವರುಗಳು ಮೊದಲೇ ಸರಿ—'ಬಬಬಬ'! ಈಗ ಇನ್ನೂ ತಬ್ಬಿಬ್ಬಾಗುತ್ತಿದ್ದರು!

ಬೇಕೊಂತಲೇ ಈ ಕೀಟಲೆ ಪ್ರಶ್ನೆಯನ್ನು ಭಾರತೀಯ ವಿದ್ಯಾರ್ಥಿನಿಯರೇ ಹಾಕುತ್ತಿದ್ದರು! ಮತ್ತು—'ಎಲ್ಲೀ ಗುಗ್ಗೂಗಳಪ್ಪಾ ನೀವು! 'ಸರ್ ನೇಮ್' ಅಂದ್ರೆ ಏನು ಅನ್ನೋದೇ ಗೊತ್ತಿಲ್ಲಾ! ಒಳ್ಳೇ ಕಾಡುಜನಗಳು!

—ಎನ್ನುವಂತೆ ಕೀಳುದೃಷ್ಟಿಯಿಂದ ನೋಡುತ್ತಿದ್ದರು.

ಆಗ ಮೆಲ್ಲಗೆ ಒಂದು ಪಟ್ಟಿಯೇ ಏಳುತ್ತಿತ್ತು—'ಕಲಾವತಿ ಐಯರ್, ಶಾಂತಿ ನಾಯುಡು, ಸೀತಾ ಅಪ್ಪಯ್ಯ, ವಿದ್ಯಾ ಶೆಟ್ಟಿ, ಚಂದ್ರಾ ರೆಡ್ಡಿ, ಪ್ರಫುಲ್ಲ ಮೊದಲಿಯಾರ್, ನಿರ್ಮಲ ರಾವ್, ಶೀಲಾ ಸ್ವಾಮಿ, ಮೀರಾ ಐಯಂಗಾರ್, ಪ್ರೇಮ ಅರಸ್, ಲೀಲಾ ಸ್ವಾಮಿ, ಇತ್ಯಾದಿ !

ಸರ್‌ನೇಮ್ ತಮ್ಮ ಹೆಸರುಗಳಿಗೆ ತಗುಲಿಕೊಂಡದ್ದೇ ಕೊಂಡದ್ದು, ಒಳ್ಳೇ ನವಿಲುಗಳಂತೆ ಜಂಬದಿಂದ ತಲೆಯೆತ್ತಿಕೊಂಡು ನಡೆಯುತ್ತಿದ್ದರು ! ಈಗ ಯಾರಿಗೂ ಕಡಿಮೆ ಇಲ್ಲ ! ಅವರುಗಳಿಗೂ ಮಿಕ್ಕವರಂತೆ 'ಸರ್ ನೇಮ್' ಇದೆ ! ಬಿರುದಾವಳಿಗಳನ್ನು ಪಡೆದ ಮಹಾರಾಜರುಗಳು ಕೂಡ ಇಷ್ಟೊಂದು ಮೆರೆದಿರಲಾರರು !

ಹೊಸದಾಗಿ ಬಂದು ಸೇರಿದ ವಿದ್ಯಾರ್ಥಿನಿಯರಿಗೆ ವಿಪರೀತ ಬೇಸರ ತರುತ್ತಿದ್ದ ವಿಷಯ ಒಂದಿತ್ತು—ರ್‍ಯಾಗಿಂಗ್. ಹಳೆಯ ವಿದ್ಯಾರ್ಥಿನಿಯರು ಮನಬಂದಂತೆ ಚುಡಾಯಿಸುತ್ತಿದ್ದರು ಹೊಸಬರನ್ನು—ಯಾವುದೋ ಹಕ್ಕಿದ್ದಂತೆ ! ಇದು ಬಹುಕಾಲದಿಂದ ಬಂದಿದ್ದ ಪದ್ಧತಿ—ಬರಬರುತ್ತಾ ಅತಿರೇಕಕ್ಕೆ ಸಾಗುತ್ತಿತ್ತು. ಒಂದು ರೀತಿಯ ಚಿತ್ರಹಿಂಸೆಗೆ ಒಳಗಾದ ಈ ಬಡಪಾಯಿಗಳ ಮೂಕವೇದನೆ, ಮರುವರ್ಷ ಕಾನ್ವೆಂಟಿನೊಳಗೆ ಕಾಲಿಟ್ಟ ಹೊಸಬರ ಮೇಲೆ ಹರಿದು, ಶಮನವಾಗಬೇಕು !

ಯುದ್ಧದ ಭೀತಿಯಿಂದಾಗಿ ಯೂರೋಪಿನಿಂದ ಬಂದಿದ್ದ ಹುಡುಗಿಯರಿಗೆ ಭಾರತದಲ್ಲಿನ ಪ್ರತಿಯೊಂದೂ ನವೀನ–ಮೋಜು ! ಬಂದ ತಕ್ಷಣ ಕೋತಿಯನ್ನು ಕಾಣಬೇಕೆಂದು ಜೂಗೆ ಹೋಗಿಬಂದರು ! ಪಾಪ, ಬರುವಾಗ ಹಡಗಿನಲ್ಲಿ, ಅದರ ಬಗ್ಗೆ ಅದೆಷ್ಟೊಂದು ಕಥೆ ಕೇಳಿದ್ದರೋ !

'ಕೋತಿ, ಕರಡಿ, ಆನೆ, ಮೊಸಳೆ, ಹಾವು, ಸನ್ಯಾಸಿ, ರಾಜರಾಣಿ, ಇವಿಷ್ಟನ್ನು ನೋಡಿದರೆ ಆಯಿತು—ಇಂಡಿಯಾವನ್ನ ನೋಡಿದಂತೆ ! ಬೀದಿ ಬೀದಿಯಲ್ಲೂ ಅವುಗಳೇ !' ಮನದಟ್ಟು ಮಾಡಿಕೊಂಡು ಬಂದಿದ್ದರು.

'ಎಷ್ಟು ಸುಂದರವಾಗಿದೆ !—' ಮೆಚ್ಚುಗೆಯಿಂದ ಉದ್ಗರಿಸಿದರು—ಕೋತಿ ತನ್ನ ಮರಿಯನ್ನು ಕಟ್ಟಿಕೊಂಡು ರೆಂಬೆಯಿಂದ ರೆಂಬೆಗೆ ಹಾರುವುದನ್ನು ನೋಡಿ—'How Sweet !'

ಕೋತಿ ಒಂದು ಸಲ ಹಿಂದಕ್ಕೆ ತಿರುಗಿ 'ಗುರ್' ಎಂದಿತು. ಎಲ್ಲರೂ ದೌಡು !

ತಕ್ಷಣ—'ಚಿಲ್ರನ್, ಪ್ಲೀಸ್—ಕೋತಿಗಳ ಹಾಗೆ ಆಡುವುದನ್ನು ನಿಲ್ಲಿಸಿ-ಪ್ಲೀಸ್ !' ಮಿಸ್‌ಗಳು ಕೂಗಿಕೊಂಡವು.

ಆನೆಯನ್ನು ಕಂಡು ದಂಗಾಗಿ ನಿಂತುಬಿಟ್ಟುವು-ಯೂರೋಪಿನಿಂದ ಬಂದ ಈ ಗುಂಪು—!'ಮೈ ! My !'—ಎಂದುಕೊಂಡು ! 'So big !'

ಇಂತಹ ಒಂದು ಪ್ರಾಣಿಯೂ ಉಂಟೇ ! ಅರೆ ಮಹಾರಾಜ ಎಲ್ಲಿ ? ಆದರ ಮೇಲೆ ಮಹಾರಾಜ ಕೂತೇ ಇಲ್ಲವಲ್ಲಾ ! ಕಣ್ಣು ಕಿರಿದು ಮಾಡಿ ಕೊಂಡು, ತಡಕಾಡಿದರು—ದೃಷ್ಟಿಯಿಂದ. ಪಾಪ, 'ಆನೆ-ಮಹಾರಾಜ' ಎರಡೂ ಒಟ್ಟಿಗೆ ಬಾಯಿಪಾಠವಾಗಿದ್ದ ಪದ—ಅವರೇನು ಮಾಡಿಯಾರು ?

'ಆನೆ ಬಂದ ತಕ್ಷಣ ಮಹಾರಾಜ ಅದರ ಮೇಲೆ ಎತ್ತರವಾಗಿ ಕಾಣ ಬೇಕು ! ಮಹಾರಾಜ ಎಲ್ಲಿಂದಲೋ ಬಂದು ಹಾರ ಹಾಕಬೇಕು ! ಅಂಬು ಬಿಲ್ಲಿನ ಆಟ, ಮಲ್ಲಯುದ್ಧ, ದಾರಿಯುದ್ಧಕ್ಕೂ ಸಾಗಬೇಕು !' ಇದೇ ಅವರುಗಳ ಮನದಲ್ಲಿ ಬಿತ್ತರಿಸಲ್ಪಟ್ಟ ಚಿತ್ರ !

ಆನೆಯ ಬಗ್ಗೆ ಇಟಾಲಿಯನ್ ವಿದ್ಯಾರ್ಥಿನಿಯರು ಭಾವಗೀತೆಗಳನ್ನು ರಚಿಸಿದರು ! ಮೊಸಳೆ, ಕರಡಿ, ಹಾವು, ಎಲ್ಲವನ್ನೂ ನೋಡಿ ಬಂದಮೇಲೆ ಅವರುಗಳು ಪಟಪಟವಾಗಿ ಹೋಮ್‌ಗೆ ಕಾಗದ ಬರೆದುಹಾಕಿದರು.

'ಮೊಸಳೆ ಈ ರೀತಿ ಇದೆ ! ಹಾಗೆ ತಿರುಗಿತು ! ಹೀಗೆ ನೋಡಿತು ! ಆಗ ನಮಗೆ ಹೀಗಾಯಿತು ! ಹಾವು ಭಯಂಕರ ! ಆದರೆ ಇಲ್ಲಿ ಹಾವನ್ನು ಕೊಲ್ಲುವುದಿಲ್ಲವಂತೆ ! ಅದು ಹಿಂದೂಗಳಿಗೆ ದೇವರಂತೆ ! ನನ್ನ ಇಂಡಿಯನ್ ಸ್ನೇಹಿತೆಯರ ತಾಯಂದಿರು ಹಾವಿನ ಸುತ್ತ ಮೆರಿ ಗೋ ರೌಂಡ್ ಪ್ರದಕ್ಷಿಣೆ ಮಾಡಿ, ಪೂಜೆ ಮಾಡ್ತಾರಂತೆ ! ಇಲ್ಲದಿದ್ರೆ, ಖಾಯಿಲೆ ಬರತ್ತಂತೆ ! ಇಲ್ಲಿ ನವರ ದೇವರುಗಳಿಗೆಲ್ಲಾ ಎರಡು ಮೂರು ತಲೆ-ನಾಲ್ಕೈದು ಕೈಕಾಲುಗಳು! ನಮ್ಮ ಜೀಸಸ್‌ಗೆ ಮಾತ್ರ ಯಾಕೆ ಒಂದೇ ತಲೆ, ಎರಡು ಕೈ—ನಮ್ಮಗಳ ಹಾಗೆ !' ಇತ್ಯಾದಿ.

ತಕ್ಷಣ ಹೋಮ್‌ನಿಂದ ಮಮ್ಮಿಯ ಎಚ್ಚರಿಕೆ ಬರುತ್ತಿತ್ತು—'ಭದ್ರ ! ಆ 'ಹೀತನ್ಸ್ ಗಾಡ್ಸ್' ತಂಟೆಗೆ ಹೋಗಬೇಡಿ ! ಅದರಲ್ಲೂ ಸನ್ಯಾಸಿಗಳ

ಹತ್ರ ಮಾತನಾಡಬೇಡಿ. ಅವರೆಲ್ಲಾ ಮಕ್ಕಳನ್ನ ಎತ್ತಿಕೊಂಡು ಹೋಗ್ತಾರಂತೆ! 'ಕಾಳಿ' ಎಂಬ ಗಾಡೆಸ್‌ಗೆ ಬಲಿ ಕೊಡ್ತಾರಂತೆ! ಎಂಥದ್ದೋ ಪೌಡರ್‌ನ ಮುಖದ ಮೇಲೆ ಬಿಸಾಡಿ ಬುದ್ಧೀನ ಮಂಕು ಮಾಡ್ತಾರಂತೆ! ಅದಿರಲಿ—ಮಹಾರಾಜ ಅನ್ನೋದು ಹೇಗಿದೆ, ಬರೀಲೇ ಇಲ್ಲವಲ್ಲಾ?—ಅವರಿಗೆಲ್ಲಾ ಸಾವಿರ ಜನ ಹೆಂಡತಿಯರಂತೆ—ನಿಜವೇ?'

ಈ ಕಾಗದವನ್ನು ನೋಡಿದಾಗ ಇಂಡಿಯನ್ ಹುಡುಗಿಯರು ನಿಜಕ್ಕೂ ಕೆಂಡವಾದರು. 'ಯಾರು ಹೇಳಿದರು ಈ ಸುಳ್ಳು ಕಂತೇನ! ನಮ್ಮ ಮಹಾರಾಜರು ಅಂಥಾವರಲ್ಲ! ಇದಾನೆ ಹೈದರಾಬಾದ್ ನೈಜಾಮ—ಹೋಗಿ ನೋಡಿ—' ದಬಾಯಿಸುತ್ತಿದ್ದರು.

ಕೊನೆಗೆ ಯುರೋಪಿನ ಈ ಹುಡುಗಿಯರು ಮಹಾರಾಜ-ಸನ್ಯಾಸಿ ಎಲ್ಲವನ್ನೂ ನೋಡಿದಮೇಲೆ—

'ಇನ್ನು ನೀವು ನಿಶ್ಚಿಂತೆಯಾಗಿ ಮರಳಬಹುದು; ನಿಮ್ಮ ಹೋಮ್‌ಗೆ' ಕಲಾವತಿ ಸಲಹೆ ಮಾಡಿದಳು—'ನಮ್ಮ ಇಂಡಿಯಾವನ್ನ ಪೂರ್ತಿ ನೀವು ನೋಡಾಯ್ತು. ಹೋದ ತಕ್ಷಣ ಬೇಕಾದಷ್ಟು ಪುಸ್ತಕಗಳನ್ನ ಬರೆಯಬಹುದು—ನಮ್ಮ ಮೇಲೆ! ನಮಗೆಲ್ಲಾ ಪಠ್ಯಪುಸ್ತಕ ಆಗಿ ಇಡೋದಿಕ್ಕೆ!'

ಈ ಎಂಗ್ಲೋ-ಇಂಡಿಯನ್ಸ್‌ರ ಮಾತುಕಥೆ ಇನ್ನೂ ತಮಾಷೆಯಾಗಿರುತ್ತಿತ್ತು. ಅವರುಗಳಿಗೆ ಇಂಡಿಯನ್ಸ್ ಜೊತೆ ಸೇರುವುದಕ್ಕೇ ಬೇಸರ; ಯುರೋಪಿಯನ್ಸ್ ಸೇರಿಸಿಕೊಳ್ಳುತ್ತಿರಲಿಲ್ಲ. ತಾವು ಇಂಡಿಯಾದಲ್ಲಿ ಹುಟ್ಟಿ ಬೆಳೆದವರು—ತಮ್ಮ ತಂದೆತಾಯಿಗಳಲ್ಲಿ ಒಬ್ಬರು ಮಾತ್ರ ಈ ದೇಶದವರು, ಎಂದು ಹೇಳಿಕೊಳ್ಳಲು ಅವಮಾನ; ಮಾತೆತ್ತಿದರೆ ಸರಿ, ಈ ಯುರೋಪಿಯನ್ ಹುಡುಗಿಯರಿಗಿಂತಲೂ ಹೆಚ್ಚಾಗಿ, ಸದಾ 'ಹೋಮ್ ಹೋಮ್' ಎಂದು ಉಗ್ಗಡಿಸುತ್ತಿದ್ದರು; ಅಂದರೆ, ಇಂಗ್ಲೆಂಡ್ ತಮ್ಮ ಹೋಮು ಎಂಬಂತೆ. 'ಹೋಮ್? ನಿಮ್ಮ ಹೋಮು ಇಂಡಿಯಾ-ಇಂಗ್ಲೆಂಡ್ ಮಧ್ಯ; ನಡುಸಮುದ್ರದಲ್ಲಿ!' ತಡೆಯಲಾರದೆ ಭಾರತೀಯ ಹುಡುಗಿಯೊಬ್ಬಳು ದಬಾಯಿಸಿಬಿಟ್ಟಳು.

ಕಾನ್ವೆಂಟ್‌ನಲ್ಲಿ ಎಲ್ಲಕ್ಕಿಂತ ಹೆಚ್ಚು ತಮಾಷೆಯೆಂದರೆ, ಈ ಹುಟ್ಟಿದ ಹಬ್ಬಗಳ ಮೆರವಣಿಗೆ! ಕಾನ್ವೆಂಟಿನ ತುಂಬಾ ಮದರ್ಸ್‌ಗಳು, ಸಿಸ್ಟರ್ಸ್,

ಮಿಸ್‌ಗಳು ! ಸದಾ ಯಾವುದಾದರೊಂದು ಮದರ್‌ನ—ಇಲ್ಲ, ಸಿಸ್ಟರ್ಸ್‌ನ ಬರ್ತ್‌ಡೇ ಪಾರ್ಟಿ ಇರುತ್ತಲೇ ಇತ್ತು !

ಅಂದು ತರಗತಿಯ ಲೀಡರ್ಸ್ ತಮ್ಮ ತಮ್ಮ ತರಗತಿಗಳನ್ನೆಲ್ಲಾ ಅಲಂಕರಿಸಿ, ಪುಷ್ಪಾಲಂಕೃತವಾದ ಕ್ಯಾಸ್‌ಕೆಟ್ಟನ್ನು ಭಕ್ತಿಭಾವದಿಂದ ಅರ್ಪಿಸುತ್ತಿದ್ದರು ಅದರ ಜೊತೆ ಪ್ರತಿಯೊಬ್ಬ ವಿದ್ಯಾರ್ಥಿನಿಯಿಂದಲೂ ಉಡುಗೊರೆ !

'ಹೋಗಿ ಹೋಗಿ ಮುದುಕೀಗೆ ಮಾಡೋದು ಹುಟ್ಟಿದ ಹಬ್ಬಾನ ! ನಿಮ್ಮಗಳಿಗೇ ಮಾಡೊಲ್ಲ ನಾವು ! ಒಂದಿನ ಪಾಪನಿಗೆ ಎಣ್ಣೆ ಹಚ್ಚಿ, ನೀರು ಹಾಕಿ, ಏನೂ ತಕ್ಕೊಟ್ಟಿಲ್ಲ ! ಇನ್ನು ಆ ಅಜ್ಜಮ್ಮನಿಗೇನು ಬಂತು ಧಾಡಿ ! ಇನ್ನೂ ಮಣೆ ಮೇಲೆ ಕೂರಿಸಿ ಆರತಿ ಮಾಡಿ—ಆ ಬಿಳಿ ಪೀತಾಂಬರದಲ್ಲಿ !' ಮನೆಯಲ್ಲಿ ತಾಯಂದಿರು ಗೊಣಗುತ್ತಿದ್ದರು.

ಆದರೆ ಹುಡುಗಿಯರು ಮೊಂಡುಹಿಡಿದು, ಅತ್ತು ಕರೆದು, ಹೇಗೋ ಏನೋ ಒಂದು ಚೂರಾದರೂ ಉಡುಗೊರೆಯನ್ನು ತಪ್ಪದೆ ತಂದು ಮದರ್ ಮೇಜಿನ ಮೇಲಿಡುತ್ತಿದ್ದವು. ಅಷ್ಟಕ್ಕೇ ಮುಗಿಯಿತೆ ?

ಆ ಹುಡುಗಿಯರು ಮನೆಗೆ ಹಿಂತಿರುಗಿದರೋ ಇಲ್ಲವೋ—ಸದ್ಯ ಆ ಬ್ಯೂಟಿಗೆ ಬರ್ತ್‌ಡೇ ಆಯ್ತು ತಾನೆ ? ನಾವು ಬದುಕಿದೆವು!' ಎಲ್ಲಿಯೋ ಕಾದು ಕೂತಿದ್ದ ತಮ್ಮಂದಿರು ಚುಡಾಯಿಸುತ್ತಿದ್ದರು—'ಎಷ್ಟು ಹಲ್ಲು ಬಿತ್ತೋ—ಆಕೆಗೆ ? ಮರೀದೆ ಪ್ರಾರ್ಥನೆ ಮಾಡಿದೆ ತಾನೆ ?'

ಹೌದು, ಮಾತನಾಡಿದರೆ ಪ್ರಾರ್ಥನೆಮಾಡುವುದೇ ಆ ಕಾನ್ವೆಂಟ್‌ನಲ್ಲಿ ಕೆಲಸ !

'ನನ್ನ ಮಮ್ಮಿಗೆ ಮೈಹುಷಾರಿಲ್ಲ. ಏನಾದರೂ ಒಬ್ಬ ವಿದ್ಯಾರ್ಥಿನಿ ತಡೆಯದೆ ಹೇಳಿದರೆ ಸರಿ—'ನಾನು ಅವಳಿಗಾಗಿ ಪ್ರಾರ್ಥನೆ ಮಾಡುತ್ತೇನೆ' ಮದರ್‌ಗಳು ಭರವಸೆ ಕೊಡುತ್ತಿದ್ದರು. ಕೊಡುವುದೊಂದೇ ಅಲ್ಲ, ಹೃತ್ಪೂರ್ವಕವಾಗಿ ನೆರವೇರಿಸಿಯೂ ಬಿಡುತ್ತಿದ್ದರು ! ಇದನ್ನು ನೋಡಿ ನೋಡಿಯೋ ಏನೋ, ಹುಡುಗಿಯರಿಗೂ ಈ ಅಭ್ಯಾಸ ಹೊಂದಿಕೊಂಡು ಬಂದುಬಿಟ್ಟಿತ್ತು. ಕ್ರಿಶ್ಚಿಯನ್, ಮುಸ್ಲಿಮ್, ಹಿಂದೂ ಎನ್ನದೆ, ಒಬ್ಬರ ದುಃಖಶಮನಕ್ಕಾಗಿ ಇವರು—ಇನ್ನೊಬ್ಬರ ಹಿತಕ್ಕಾಗಿ ಅವರು—ಎಲ್ಲರ

ಏಳಿಗೆಗಾಗಿ ಎಲ್ಲರೂ ಸೇರಿ ಪ್ರಾರ್ಥನೆ ಮಾಡುತ್ತಿದ್ದರು. ಅಲ್ಲದೆ—ಮಾತ ನಾಡುತ್ತಿದ್ದಂತೆಯೇ ಕ್ರಿಶ್ಚಿಯನ್ ಹುಡುಗಿಯರು ಪಕ್ಕದಲ್ಲೇ ಇದ್ದ ಚಿಕ್ಕ ಚರ್ಚಿಗೆ ಹೋಗುತ್ತಿದ್ದರು. ಮಿಕ್ಕವರೂ ಯಾಂತ್ರಿಕವಾಗಿ ಹಿಂಬಾಲಿಸುತ್ತಿ ದ್ದರು. ಅವರ ಜೊತೆ ಮೊಳಕಾಲೂರುತ್ತಿದ್ದರು; ಕ್ರಾಸ್ ಮಾಡಿಕೊಳ್ಳು ತ್ತಿದ್ದರು—ಅವರುಗಳಂತೆ!

ಕಾನ್ವೆಂಟಿನ ವೈಶಿಷ್ಟ್ಯವೆಂದರೆ, ಆಗಾಗ ನಡೆಯುವ ಅದರ ಕಾನ್ ಸರ್ಟ್ಸ. ರಾಜವಂಶದವರು ಬರುತ್ತಿದ್ದರು; ಮುಂದಿನ ಸಾಲಿನಲ್ಲಿ, ಮದರ್ ಪಕ್ಕ ಕೂತು ಆನಂದಿಸುತ್ತಿದ್ದರು. ರಾಜವಂಶದವರಿಗೆ ಈ ಮದರ್ ಗಳೆಂದರೆ ಬಹಳ ಮರ್ಯಾದೆ. ಕಾರಣ, ಅವರುಗಳು ಕಾನ್ವೆಂಟಿಗೆ ಬಂದು, ಪಿಯಾನೋ ಕಲಿಯುತ್ತಿದ್ದರು; ಫ್ರೆಂಚ್ ಹೇಳಿಸಿಕೊಳ್ಳುತ್ತಿ ದ್ದರು. ಪ್ರತ್ಯೇಕ ಕೋಣೆಯೊಂದರಲ್ಲಿ ಕೂತು, ಮಿಕ್ಕ ಪಾಠಗಳ ಶಿಕ್ಷಣ ವನ್ನೂ ಪಡೆಯುತ್ತಿದ್ದರು. ಅವರನ್ನು ಕರೆದುಕೊಂಡು ಬಂದು ಬಿಡುವ_ಕರೆ ದೊಯ್ಯಲು ಬರುವ ಕಾರುಗಳನ್ನೇ ಬೆರಗಾಗಿ ನೋಡುತ್ತಾ ನಿಲ್ಲುತ್ತಿದ್ದವು ವಿದ್ಯಾರ್ಥಿನಿವೃಂದ. ಇದಲ್ಲದೆ ಮದರ್‌ಗಳೂ ಅರಮನೆಗೆ ಹೋಗಿ ಅವರು ಗಳಿಗೆ ಬೇಕಾದ್ದನ್ನು ಹೇಳಿಕೊಟ್ಟು ಬರುತ್ತಿದ್ದರು. ಆಗ ಅವರಿಗಾಗಿ ಅರ ಮನೆಯ ಕಾರುಗಳು ಬರುತ್ತಿದ್ದವು.

ಕಾನ್‌ಸರ್ಟ್‌ಗೆ ಬಂದ ರಾಜವಂಶದವರನ್ನು ಕಂಡು, ಯೂರೋಪಿ ನಿಂದ ಬಂದು ಇಲ್ಲಿ ಬೋರ್ಡರಾಗಿದ್ದ ಹುಡುಗಿಯರಿಗೆ ನಿರಾಶೆಯೇ ಆಯಿತು. ಕಿರೀಟ–ಕತ್ತಿ–ಗುರಾಣಿ–ಕುದುರೆ ಏನೇನೂ ಇಲ್ಲದೆ, ಮಿಕ್ಕವ ರಂತೆಯೇ ಉಡುಪನ್ನೂ ಧರಿಸಿದ್ದ ಇವರುಗಳು ಅದೆಂಥಾ ರಾಜವಂಶದವರು? ಛೇ ಛೇ! ಇಂಡಿಯಾ ಬಲು ಅನ್ಯಾಯ!

ಕಾನ್‌ಸರ್ಟ್‌ನಲ್ಲಿ ಮುಖ್ಯವಾದದ್ದು ಸಂಗೀತ—ನೃತ್ಯ. ಅನೇಕ ಭಾರತೀಯ ವಿದ್ಯಾರ್ಥಿನಿಯರನ್ನೂ ಆರಿಸಿ, ತರಬೇತಿ ಕೊಟ್ಟಿದ್ದರು ಮದರ್ ರೋಸ್. ಇದರಿಂದಾಗಿ ಆ ಭಾರತೀಯ ವಿದ್ಯಾರ್ಥಿನಿಯರಿಗೆ ತಲೆಯೇ ನಿಲ್ಲದಾಯಿತು. ಅವರ ಮನಸ್ಸಿನಲ್ಲಿ—'ಇಂಗ್ಲೀಷ್ ಮ್ಯೂಸಿಕ್' ಎಂದರೆ, 'ದೇವಗಾನ' ಎಂಬ ಭಾವನೆ. 'ನಂಗೆ ಕನ್ನಡ ಬರೋಲ್ಲ' ಎಂದು ಹೇಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರೋ, ಅಷ್ಟೇ ಹೆಮ್ಮೆಯಿಂದ—'ನಂಗೆ ಈ

ಕರ್ನಾಟಿಕ್ ಮ್ಯೂಸಿಕ್ ಬರೋದೇ ಇಲ್ಲ' ಎಂದು ಹೇಳಿಕೊಳ್ಳುತ್ತಿದ್ದ ವರ್ಗ —ಈಗ ಕೇಳಬೇಕೆ? ಸದಾ ಬಾಯಲ್ಲಿ ಇಂಗ್ಲೀಷ್ ಮ್ಯೂಸಿಕ್! ಮನೆಯಲ್ಲೂ ಅಷ್ಟೇ! ತಾವು ರೇಡಿಯೋ ಹಾಕಿದಾಗಲೂ ಅಷ್ಟೇ! ಸುಬ್ಬಲಕ್ಷ್ಮಿಯ ಗಾನವನ್ನು 'Rubbish' ಎಂದು ತಳ್ಳಿ ಇಂಗ್ಲೀಷ್ ಮ್ಯೂಸಿಕ್ ಮಾತ್ರ ಹಾಕುತ್ತಿದ್ದರು–ಗಟ್ಟಿಯಾಗಿ! ಅಕ್ಕಪಕ್ಕದವರಿಗೆಲ್ಲಾ ತಿಳಿಯಬೇಕಲ್ಲಾ, ತಾವಿದನ್ನ ಹಾಕಿರೋದು?

ಕಾನ್‌ಸರ್ಟ್‌ಗೆ ಹಾಡು–ನೃತ್ಯವನ್ನು ಹೇಳಿಕೊಡುತ್ತಿದ್ದ ಮದರ್ ರೋಸ್ ಇದೇ ತಾನೆ ಯೌವನವನ್ನು ದಾಟುತ್ತಿರುವಾಕೆ. ಬಳ್ಳೀ ಬಳ್ಳಿಯಂತಹ ಶರೀರ, ಚಂದ್ರನಂತಹ ಮುಖ, ಅಲ್ಲಿಯವರ ಆಕರ್ಷಕ ಬಣ್ಣ–ಕೆಂಪು ತುಟಿ, ಸದಾ ನಗುಸೂಸುತ್ತಲ್ಲಿರುವ ಕಣ್ಣುಗಳು—ಮೃದು ಧ್ವನಿ.... ಇಡೀ ಕಾನ್ವೆಂಟಿಗೇ ಅವರು ಒಂದು ದಿವ್ಯಪ್ರಭೆಯಂತಿದ್ದರು. ಇಂಥವರು ಯಾಕೆ 'ನನ್' ಆದರು, ಎಂಬುದೇ ಎಲ್ಲರಿಗೂ ಸಮಸ್ಯೆ.

ತಡೆಯದೆ ಅರುಣ ಕೇಳಿಬಿಟ್ಟಿದ್ದಳು. ಹಿಂದುಗಡೆಯೇ ಅಂಜಿದ್ದಳು. ಮದರ್ ರೋಸ್‌ಗೆ ಕೋಪವೆಂಬುದೇ ಇಲ್ಲ. ಆದರೂ—ಇದೊಂದು ತೀರ ಆತ್ಮೀಯದ ಪ್ರಶ್ನೆ; ಸಿಟ್ಟಾದರೆ? ಮದರ್ ಸುಪೀರಿಯರ್‌ಗೆ ತಿಳಿಸಿಬಿಟ್ಟರೆ?

ಮದರ್ ರೋಸ್ ಸಿಟ್ಟಾಗಿರಲಿಲ್ಲ; ಕಣ್ಗಳಲ್ಲಿ ಕ್ಷಣ ಕನಸು ಸುಳಿದಿತ್ತು;

'ಒಬ್ಬನನ್ನು....ಪ್ರೇಮಿಸಿದೆ' ಅರುಣ; ತುಂಬಾ ಪ್ರೇಮಿಸಿದೆ. ಆದರೆ ನೋಡು, ನಾವು ಯಾರನ್ನೂ ತುಂಬಾ ಪ್ರೀತಿಸಬಾರದು; ಲಾರ್ಡ್‌ನನ್ನು ಮಾತ್ರ ಹಚ್ಚಿಕೊಳ್ಳಬೇಕು. ಡೇವಿಡ್—ಅವನು ಸತ್ತುಹೋದ; ಲಾರ್ಡ್ ನನ್ನನ್ನು ಕರೆದ; I took up the veil' ಎಂದಿದ್ದರು.

ಕಾನ್‌ಸರ್ಟ್‌ಗೆ ನೃತ್ಯವನ್ನು ಹೇಳಿಕೊಡುವಾಗ ಮದರ್ ರೋಸ್ ಖುದ್ದಾಗಿ ಮಾಡಿ ತೋರಿಸುತ್ತಿದ್ದರು. ಸೊಗಸಾದ ಆ ಪಿಯಾನೋ ಸಂಗೀತಕ್ಕೆ ಸರಿಯಾಗಿ ಈ ಚೆಲುವೆ ತನ್ನ ಬಿಳಿಯ ರೋಬ್‌ನಲ್ಲಿ ನರ್ತಿಸಿದಾಗ, ಅಪ್ಸರೆಯೊಬ್ಬಳು ಇಳಿದು ಬಂದು ನರ್ತಿಸುತ್ತಿರುವಂತೆ ಭಾಸವಾಗುತ್ತಿತ್ತು. ಅವನ್ನು ಮತ್ತೆ ಮತ್ತೆ ನೋಡುವುದಕ್ಕೋಸ್ಕರ, ಬೇಕುಬೇಕೆಂದು ವಿದ್ಯಾರ್ಥಿನಿಯರು ತಪ್ಪು ಹೆಜ್ಜೆ ಇಡುತ್ತಿದ್ದರು—'Mischievous girls! I know you!' ಮದರ್ ರೋಸ್ ನಗುತ್ತಿದ್ದರು. 'Come on-Do it.'

ಸ್ಟೇಜಿನ ಸುತ್ತ ನಿಂತು, ಈ ರಿಹರ್ಸಲ್ಸ್‌ಗಳನ್ನು ನೋಡಿ ಆನಂದಿಸುವುದೇ, ಕಾನ್‌ವೆಂಟ್‌ಗೆ ಸೇರದ ವಿದ್ಯಾರ್ಥಿನಿಯರ ಮನರಂಜನೆ. ಇಂತಹ ಹಿನ್ನೆಲೆಯಲ್ಲಿ ಬೆಳೆದಿದ್ದಳು ಅರುಣ.

೮

ಇವೆಲ್ಲವನ್ನೂ ಒಳ್ಳೇ ಕಥೆಯಂತೆ ತಿಳಿಸಿದಳು ಅರುಣ. ಎಲ್ಲಾ ಕೇಳಿ, ಯಾಕೋ ಏನೋ, ಇಂದೂ ಆಂಟಿಯ ಕಣ್ಣುಗಳಲ್ಲಿ ನೀರು ಬಂದಿತು.

'ಒಳ್ಳೇ ಪರದೇಶಿ ಹಾಗೆ ಬೆಳೆದೆಯಲ್ಲಮ್ಮಾ, ಕಂದಾ !' ಅರುಣಳನ್ನು ಕಟ್ಟಿಕೊಂಡು ಬಿಕ್ಕಿದರು—'ನನ್ನ ಅಕ್ಕ–ಭಾವ ಮಟ್ಟಿಗೆ ಬದುಕಿದ್ದಿದ್ದರೆ ನೀನು ಹ್ಯಾಗಿರಬೇಕಿತ್ತು ! ಅದು ಬಿಟ್ಟು, ಎಲ್ಲೋ, ಯಾವುದೋ ಸುಡುಗಾಡು ಜಾತಿಯವರ ನಡುವೆ. ..'

ಅಕ್ಕ–ಭಾವ !

ಅರುಣ ಮಂತ್ರಮುಗ್ಧಳಾದವಳಂತೆ ನಿಂತಳು. ಇಂದೂ ಆಂಟಿಯ ಅಕ್ಕ—ತನ್ನ ಮಮ್ಮಿ ! ಮತ್ತೆ—ಸ್ವಲ್ಪ ಆ ಅಕ್ಕನ ವಿಷಯವನ್ನು ತನಗೆ ತಿಳಿಸಬಾರದೆ ? ಇಂದೂ ಆಂಟಿ ತಿಳಿಸಲಿಲ್ಲ. ಕೆದಕಿ ಕೇಳುವ ಧೈರ್ಯ ಅರುಣಳಿಗೆ ಬರಲಿಲ್ಲ.

ಅರುಣ ಕಾನ್ವೆಂಟ್–ಕಥೆಯನ್ನು ಹೇಳಿದ ರೀತಿಯೋ ಅಷ್ಟೊಂದು ಅನೋಘವಾಗಿತ್ತೋ, ಅಂತೂ ಕೆಲವು ವಿಷಯಗಳನ್ನು ಮತ್ತೆ ಮತ್ತೆ ನೆನೆದುಕೊಂಡು, ಇಂದೂ ಆಂಟಿ ನಗುತ್ತಿದ್ದರು.

ಅರುಣ ಅವರ ಜೀವನದಲ್ಲಿ ಕಾಲಿಟ್ಟಮೇಲೆ ಆಕೆಯ ಕಣ್ಣುಗಳಲ್ಲಿನ ಸಂಕಟವು ಹೃದಯಪೂರ್ವಕ ಆನಂದಕ್ಕೆ ದಾರಿ ಬಿಟ್ಟಿತ್ತು. ಪ್ರೇತದಂತೆ ಆವರಿಸಿದ್ದ ಮುದಿತನ ಇಳಿಮುಖವಾಗಿ, ಚಿಕ್ಕವರಾಗಿ ಕಾಣಹತ್ತಿದರು ! ಅರುಣಳ ಮೇಲೆ ಕಣ್ಣೋಡಿಸಿದಾಗಲೆಲ್ಲಾ ಏನೋ ಒಂದು ಬಗೆಯ ತೃಪ್ತಿ-ಧೈರ್ಯವನ್ನು ಕಂಡುಕೊಂಡ—ಗುರಿಯನ್ನು ಹೊಂದಿಸಿಕೊಂಡ ಭಾವ !

ಅರುಣಳಿಗೆ ಈಗ ಹಿಂದೂ ಧರ್ಮದ ವಿಷಯವೆಲ್ಲಾ ಗೊತ್ತು ! ಹಬ್ಬಹುಣ್ಣಿಮೆಗಳೆಲ್ಲಾ ತಿಳಿದಿತ್ತು ! ಪುರಾಣದ ಕಥೆಗಳೆಲ್ಲಾ ಕಂಠಪಾಠ

ವಾಗಿದ್ದವು ! ಪುರಾಣದ ವ್ಯಕ್ತಿಗಳೆಲ್ಲ ನಾಲಿಗೆಯ ಮೇಲೆಯೇ ಇದ್ದರು ! ಇಷ್ಟೆಲ್ಲಕ್ಕೂ ಇಂದೂ ಆಂಟಿಯೇ ಕಾರಣ !

ಹುಡುಗಿಯ ಇಕ್ಕಟ್ಟನ್ನು ಅರಿತ ಆಕೆ ತುಂಬು ಸಹನೆಯಿಂದ ಅರುಣಳ ಎಲ್ಲಾ ಪ್ರಶ್ನೆಗಳಿಗೂ ಉತ್ತರವೀಯುತ್ತಿದ್ದರು. ಅರುಣಳ ವಯಸ್ಸಿಗನುಗುಣವಾದ ಕುತೂಹಲವನ್ನು ಕೈಲಾದಷ್ಟುಮಟ್ಟಿಗೆ ಶಮನ ಮಾಡಿದರು ; ಹತ್ತಿರ ಕೂರಿಸಿಕೊಂಡು, ನಮ್ಮ ಪುರಾಣದ—ಹಾಗೂ ಐತಿಹಾಸಿಕ ಕಥೆಗಳನ್ನು ಹೇಳಿದರು.

'ಅರೇ, ನಮ್ಮ ಹಿಂದೂ ಜಾತಿ ಏನು ಸೊಗಸಾಗಿದೆ !' ಅರುಣ ಉದ್ಗರಿಸಿದಳು—'ನಂಗೆ ಗೊತ್ತೇ ಇರಲಿಲ್ಲ ! ನೀವು ನಂಗೆ ಎಲ್ಲಾ ತಿಳಿಸ್ದೇ ಇದ್ದಿದ್ರೆ, ನಾನು ಪೆಚ್ಚುಪೆಚ್ಚಾಗಿ ನನ್ ಆಗಿಬಿಡ್ತಿದ್ದೆ, ಆಂಟೀ !'

ಇಂದೂ ಆಂಟಿಯ ಕಣ್ಣಲ್ಲಿ ನೀರು ಬಂದೇ ಬಿಟ್ಟಿತ್ತು ! ತನಗೇ ತಿಳಿಯದಂತೆ ಅರುಣ ತನ್ನ ಪುಟ್ಟ ತಲೆಯ ತುಂಬಾ ಆದರ್ಶಗಳನ್ನು ಹೊತ್ತಳು.

ಸ್ಪಷ್ಟ ಬುನಾದಿ ಇಲ್ಲದೆ ತಡಕಾಡುತ್ತಿದ್ದ ಅವಳ ವ್ಯಕ್ತಿತ್ವ ಇಂದೂ ಆಂಟಿಯ ಹಸ್ತದಲ್ಲಿ ವಿಶಿಷ್ಟ ರೂಪ ತಾಳಿತು. 'ಇಂದೂ ಆಂಟಿ ಎಂದರೆ ದೇವರ ಸಮಾನ !' ಎಂಬ ಭಾವನೆ ಆವರಿಸಿತು.

'ಇಂದೂ ಆಂಟಿ, ನೀವೇ ನನ್ನ ಮಮ್ಮಿಯಾಗಬಾರದಿತ್ತೆ ?' ತಡೆಯದೆ ಕೇಳಿಯೂ ಬಿಟ್ಟಳು.

'ಅಷ್ಟು ಪುಣ್ಯಾನ ನಾನೆಲ್ಲ ಮಾಡಿದ್ದೆ, ಮಗು.' ನಿಟ್ಟುಸಿರುಬಿಟ್ಟರು : 'ಎಲ್ಲದಕ್ಕೂ ಕೇಳಿಕೊಂಡು ಬಂದಿರಬೇಕಲ್ಲಾ ?'

'ಯಾಕೆ ಆಂಟಿ–ನಿಮಗೆ ಮಕ್ಕಳಾಗಲಿಲ್ಲವೇ ?' ಅರುಣಳ ಕಣ್ಣುಗಳು ಅಗಲವಾದವು.

'ಮೊದಲು ಮದುವೆ ಆಗಿದ್ರೆ ತಾನೆ—ಮಕ್ಕಳಾಗೋದಿಕ್ಕೆ ?' ಆಕೆಯ ಧ್ವನಿ ಬಾಡಿತ್ತು ; ಮುಖ ಚಿಕ್ಕದಾಯಿತು.

'ನಿಮಗೆ ಮದುವೆ ಆಗಲಿಲ್ಲ ಅಂದ್ರೆ, ಒಪ್ಪದ ಮಾತು, ಆಂಟಿ ! ಈಗಲೇ ಹೀಗಿದ್ದೀರಿ—ಇನ್ನೂ ಆ ವಯಸ್ನಲ್ಲಿ, ನಾನು-ತಾನು ಅಂತ ಬರಬೇಕಾಗಿತ್ತು ವರಗಳು ! ಯಾರ ಕಣ್ಣಿಗೂ ಬೀಳಲಿಲ್ಲವೋ ಅಂತೀನಿ !

ಘೋಷಾ ಇಟ್ಟಿದ್ದರೋ ನಿಮ್ಮ ತಾಯಿ—ಬ್ಯೂಟಿ ಅಂತ?'

ಅರುಣ ಎಣಿಸಿದಂತೆ ಇಂದೂ ಆಂಟಿ ನಗಲಿಲ್ಲ. ಅರುಣಳ ಒಂದು ಚೂರು ಹಾಸ್ಯ ನುಡಿಗೂ ಜೋರಾಗಿ ನಕ್ಕು ನಲಿಯುತ್ತಿದ್ದ ಆಕೆ ಇಂದು ಸಪ್ಪೆಯಾಗಿ ಕುಳಿತಿದ್ದರು! ಎಂದೂ ಇಲ್ಲದ ಯಾವುದೋ ಭಾವರಹಿತ ನಿಶ್ಶಬ್ದತೆ ಇಳಿಬಿದ್ದಿತ್ತು.

ಅದೆಷ್ಟು ಹೊತ್ತು ಹಾಗೆಯೇ ಕುಳಿತಿದ್ದರೋ, ಒಮ್ಮೆಲೆ ತಲೆಯೆತ್ತಿ ಆ ಮೌನವನ್ನು ಮುರಿದಾಗ, ಇಂದೂ ಆಂಟಿಯ ಧ್ವನಿ ಮತ್ತೂ ಕ್ಷೀಣ ವಾಗಿತ್ತು—ಸೋತು ಸಾಯುತ್ತಿದ್ದ ಗುಬ್ಬಚ್ಚಿಯ ಟುವ್ವಿಯಂತೆ....

'ಯಾರುಯಾರನ್ನೋ ಮದುವೆಯಾದ್ರೆ ಹೇಗೆ, ಅರುಣ? ಮನಃ ಪೂರ್ವಕ ಒಪ್ಪಿರುವವನ ಕೈಹಿಡೀಬೇಕು; ಮನೆತುಂಬ ಮಕ್ಕಳಾಗಬೇಕು, ಕಷ್ಟಸುಖದಲ್ಲಿ ಅವನಿಗೆ ಭುಜಕ್ಕೆ ಭುಜ ಕೊಟ್ಟು 'ಗೃಹಲಕ್ಷ್ಮಿ' ಅನ್ನೋ ಹೆಸರ್ನ ತೆಗೀಬೇಕು.'

ಆಕೆಯ ಕಣ್ಣಂಚಿನಲ್ಲಿ ತೋರುತ್ತಿದ್ದ ನೀರನ್ನು ಕಂಡು ಅರುಣ ಬೆಚ್ಚಿ ದಳು. ಅಂದು ಇಂದೂ ಆಂಟಿ ಹೇಳಿದ ಮಾತುಗಳನ್ನು ಅರುಣ ಮೇಲೆ ಮೇಲೆ ಮೆಲುಕುಹಾಕಿದಳು. ಆಂಟಿ ಯಾಕೆ ಆ ರೀತಿ ಮಾತನಾಡಿದರು?

'ಯಾರುಯಾರನ್ನೋ ಮದುವೆ ಆದರೆ ಹೇಗೆ, ಅರುಣ? ಮನಃ ಪೂರ್ವಕ ಒಪ್ಪಿರುವವನ....'

ಅಂದರೆ, ಇಂದೂ ಆಂಟಿ ಅದು ಯಾರನ್ನಾದರೂ ಪ್ರೀತಿಸುತ್ತಿದ್ದರೆ? ಅವರನ್ನು ಪಡೆಯಲಾಗಲಿಲ್ಲವೇ? ಅದಕ್ಕೆಯೇ ಇಷ್ಟೊಂದು ನಿರಾಶೆ–ವೈರಾಗ್ಯ? ಇಂದೂ ಆಂಟಿ ಪ್ರೀತಿಸುತ್ತಿದ್ದ ಆ ವ್ಯಕ್ತಿ....ಆ ವ್ಯಕ್ತಿ ಯಾರೋ? ಇದ್ದಕ್ಕಿದ್ದಂತೆ ಆ ಪುಟ್ಟ ಮೆದುಳಿಗೆ ಹೊಳೆಯಿತು.

ಹೌದು! ತನ್ನ ಚಂದ್ರೂ ಅಂಕಲ್ ಬಗ್ಗೆ ಇಂದೂ ಆಂಟಿಗೆ ಪ್ರೇಮ! ಅವರಿಗೆ? ಮನಸ್ಸನ್ನು ಹಿಂಪಕ್ಕೋಡಿಸಿ, ನೆನಪಿನಲ್ಲಿ ಸುಳಿದ ಪ್ರಸಂಗಗಳ ನ್ನೆಲ್ಲ ಜೋಡಿಸಲು ಪ್ರಯತ್ನಿಸಿದಳು. ಊಹುಂ, ಚಂದ್ರೂ ಅಂಕಲ್ ವಿಷಯ ಹೀಗೇ ಎಂದು ಹೇಳುವುದಕ್ಕಾಗುವುದಿಲ್ಲ! ಅವರು ಎಂದೂ ಒಂದೇ ಬಿಗಿ ಮುಖ! ತನ್ನನ್ನು ಕಂಡಾಗ ಮಾತ್ರ ಕಣ್ಣುಗಳಲ್ಲಿ ಏನೋ ಮೃದುತ್ವ!

ಯೋಚಿಸುತ್ತಿದ್ದಂತೆಯೇ, ಅರುಣಳಿಗೆ ಒಂದು ಅದ್ಭುತ ಆಲೋಚನೆ

ಹೊಳೆಯಿತು. ಹೇಗೂ ಚಂದ್ರೂ ಅಂಕಲ್‌ಗೆ ಹೆಂಡತಿಯಿಲ್ಲ; ಒಬ್ಬರೇ ಆಗಿ ತುಂಬಾ ಕಷ್ಟಪಡುತ್ತಿದ್ದಾರೆ; ಈ ಕಡೆ ಇಂದೂ ಆಂಟಿ ಒಂಟಿಯಾಗಿ, ಸನ್ಯಾಸಿನಿಯ ಬಾಳನ್ನು ನೂಕುತ್ತಿದ್ದಾರೆ. ಅವರಿಬ್ಬರಿಗೂ ಮದುವೆ ಆದರೆ ....ಆಲೋಚನೆಯೇನೋ ಅಮೋಘವಾದದ್ದು; ಆದರೆ ಅದನ್ನು ಕಾರ್ಯ ರೂಪಕ್ಕೆ ಇಳಿಸುವ ಬಗೆ?

ಅರುಣಳನ್ನು ಇಂದೂ ಆಂಟಿಯಲ್ಲಿ ಬಿಟ್ಟ ತಕ್ಷಣ ಚಂದ್ರೂ ಅಂಕಲ್ ಹೊರಟುಹೋಗುತ್ತಿದ್ದರು. ಕರೆದುಕೊಂಡು ಹೋಗಲು ಮತ್ತೆ ಬರುತ್ತಿದ್ದರು. ಆದರೆ ಈ ಬಾರಿ ಅರುಣ ಹೋಗುವುದಕ್ಕೇ ಬಿಡಲಿಲ್ಲ—ಚಂದ್ರೂ ಅಂಕಲ್‌ನ್ನು.

'ಚೆನ್ನಾಗಿ ಕಾಣಲ್ಲ ಅಂಕಲ್, ಹೀಗೆ ಪ್ರತಿಸಲಾನೂ ನನ್ನನ್ನು ಕರ ಕೊಂಡು ಬಂದುಬಿಟ್ಟು, ನಿಮ್ಮ ಪಾಡಿಗೆ ನೀವು ಹೋಗೋದು! ನಿಮಗೇನು ಕಾಣದವರ ಮನೆಯಾ ಇದು? ಆಂಟಿ ಏನು ತಿಳ್ಕೋತಾರೆ—ಹೀಗೆ ಪ್ರತಿ ಸಲಾನೂ ನೀವು ಮಾಡಿದ್ರೆ! ನಂಗೆ ಒಂದು ಥರಾ ಆಗುತ್ತೆ....' ಎಂದು ದಬಾಯಿಸಿದಳು.

ಚಂದ್ರೂ ಅಂಕಲ್ ಅವಳ ಮಾತಿನ ಸರಣಿಗೆ ಬೆಪ್ಪಾದರು. ಅವರು ಹೊರಟು ಹೋಗಿರಬಹುದೆಂದು ಎಣಿಸಿ, ಅರುಣಳನ್ನು ಒಳಗೆ ಕರೆಯಲು ಬಂದ ಇಂದು ಆಂಟಿಗೆ ಅವರನ್ನು ನೋಡಿ ತಬ್ಬಿಬ್ಬಾಯಿತು.

'ಏನಾದ್ರೂ ಬೇಕಾಗಿತ್ತಾ?' ಕೇಳಿದರು.

'ಒಂದು ಲೋಟ ನೀರು...' ಚಂದ್ರೂ ಅಂಕಲ್ ಹೇಳಿದರು—

'ನೋಡಿದೆಯಾ ತುಂಟಿ, ನನ್ನನ್ನ ಯಾವ ಬಿಕ್ಕಟ್ಟಿಗೆ ಸಿಗಿಸಿದೆ!' ಎನ್ನುವಂತೆ ಅರುಣಳತ್ತ ಬಿರುನೋಟ ಬೀರಿದರು.

ಅರುಣ ನಕ್ಕಳು. 'ಹೀಗೇ ನಾಲ್ಕು ದಿನ ಮುಜುಗರವಾಗುತ್ತೆ—ಆಮೇಲೆ ಎಲ್ಲಾ ಸರಿಹೋಗತ್ತೆ. ಆದಷ್ಟು ಬೇಗ ಮದುವೆಯಾಗಿಬಿಡಿ, ಅಂಕಲ್–ಆಂಟಿ!' ಮನದಲ್ಲೇ ಹಾರೈಸಿದಳು.

ಏನೋ ನೆವ ಮಾಡಿಕೊಂಡು ಎದ್ದಳು; ತೋಟದೊಳಗೆ ಕಾಲಿಟ್ಟಳು. ಹಾಗೇ ಅಡ್ಡಾಡಿದಳು. ಸ್ವಲ್ಪ ಹೊತ್ತು ಕಳೆದು ಹಿಂತಿರುಗಿದವಳು —**ಕಿಟಕಿಯ ಬಳಿಯೇ ದಿಗ್ಭ್ರಾಂತಳಾಗಿ ನಿಂತಳು!**

ಚಂದ್ರೂ ಅಂಕಲ್ ಮಾತಾಡುತ್ತಿದ್ದರು—ಅವರ ಗಂಟಲು ಏರಿತ್ತು ! ಅರೇ, ಯಾಕೋ ರೌದ್ರಾವತಾರ ! ಏನಾಯಿತು ಇಷ್ಟರೊಳಗೆ ! ಯಾರ ಮೇಲೋ ಈ ಕೋಪ ! ಇನ್ನೂ ಮದುವೆಯಾಗೇ ಇಲ್ಲ—ಆಗಲೇ ಜಗಳ!

'ಇಗೋ, ಮೇಲೆ ಮೇಲೆ ಎಚ್ಚರಿಸಿದ್ದೇನೆ ! ಅರುಣಾಳ ವಿಷಯ ತುಂಬಾ ಹುಷಾರಾಗಿರಬೇಕು, ಗೊತ್ತಾ ? ಸರಿಯಾಗಿ ಬೆಳೆಸಿದೆಯೋ ಸರಿ—ಇಲ್ಲವೋ ! ಅದಕ್ಕೆ ಮಾತ್ರ ಮೋಸ ಕಲಿಸಬೇಡ—ಏನೂ ಅರಿಯದ ಕಂದ....'

ಇಂದೂ ಆಂಟಿ ಉತ್ತರ ಕೊಟ್ಟಂತೆ ಕಾಣಲಿಲ್ಲ. ಹೌದು, ಅಳುವ ಶಬ್ದ ! ತನ್ನ ಇಂದೂ ಆಂಟಿಯೇ ಹಾಗೆ ಅಳುತ್ತಿರುವುದು ! ಅರುಣಾಳ ಹೃದಯ ಕಿತ್ತುಕೊಂಡು ಬಂದಿತು ; ಓಡೋಡಿ ಹೋದಳು.

ಅರುಣ ಬಾಗಿಲ ಬಳಿ ಬರುವುದಕ್ಕೂ, ಚಂದ್ರೂ ಅಂಕಲ್ ಹೊರ ಬರುವುದಕ್ಕೂ ಸರಿಹೋಯಿತು. ಅವರ ಮುಖವೆಲ್ಲಾ ಒಂದೇ ಕಬ್ಬಿಣದ ಸರಪಣಿ ! ಇವಳನ್ನು ನೋಡಿಯೂ ನೋಡದವರಂತೆ ಸರಸರನೆ ಮೆಟ್ಟಲು ಇಳಿದು ಹೊರಹೋದರು !

'ಆಂಟಿ ?' ಅರುಣ ಕುರ್ಚಿಯ ಹತ್ತಿರ ಹೋಗಿ, ಮೊಣಕಾಲೂರಿ ಕುಳಿತು, ಬಾಗಿದ್ದ ತಲೆ ಸವರಿದಳು—'ಯಾಕೆ ಆಂಟಿ, ಅಳ್ತಿ ? ಏನಾಗಿದೆ ?'

ಆಂಟಿ ತಲೆಯೆತ್ತಿದ್ದರು. ಅತ್ತು ಅತ್ತು, ಕಣ್ಣುಗಳೆಲ್ಲ ಒಳಹೋಗಿದ್ದವು ; ಮುಖವೆಲ್ಲಾ ಒಂದೇ ಹಿಂಡಿದ ಬಟ್ಟೆ !

'ಅಂಕಲ್ ಏನಾದ್ರೂ ಅಂದ್ರಾ ?'

'ಛೇ, ಇಲ್ಲ !' ಇಂದೂ ಆಂಟಿ ಬಲವಂತದ ನಗೆ ಚೆಲ್ಲಿದರು—'ನನ್ನನ್ನ ಯಾಕಂತಾರೆ ?'

'ಮತ್ತೆ—ಈ ಅಳು....' ಅರುಣಳಿಗೆ ನಗು ಬರುವಂತಾಯಿತು.

ಹತ್ತು ಮನೆಗೂ ತಿಳಿಯುವ ಹಾಗೆ ಜಗಳ ಕಾಯುವುದು....ಹೀಗೆ ಗುಟ್ಟು ಮಾಡುವುದು ! ವಿಚಿತ್ರದ ಮನುಷ್ಯರು—ಈ ದೊಡ್ಡವರು !

'ನಾನು ನನ್ನ ಅಕ್ಕನ್ನ....ನಿನ್ನ ಮಮ್ಮಿಯನ್ನ, ಜ್ಞಾಪಿಸಿಕೋತಾ ಇದ್ದೆ....'

'ನನ್ನ ಮಮ್ಮಿ....' ಅರುಣಳ ಮುಖ ಕಾಮನಬಿಲ್ಲಿನಂತಾಯಿತು.

—'ನನ್ನ ಮಮ್ಮಿ ಎಲ್ಲಿ—ಆಂಟಿ ?'

'ನಿನ್ನ ಮಮ್ಮಿ...' ಇಂದೂ ಆಂಟಿ ನಿಧಾನವಾಗಿ ಹೇಳಿದರು; ಒಂದೊಂದು ಮಾತನ್ನೂ ತೂಕ ಮಾಡುವಂತಿತ್ತು ಅವರ ಧ್ವನಿ—'ಸತ್ತು ಹೋದಳು, ಅರುಣಾ.'

'ಹಾಂ !'

ಕೆಳಗೆ ಬೀಳುವಂತಿದ್ದ ಅವಳನ್ನು ಹಿಡಿದುಕೊಂಡು, ಅತೀವ ಅನು ತಾಪದಿಂದ ತಲೆ ಸವರಿದರು—'ಆಕೆಯನ್ನ ಮರೆತುಬಿಡು, ಅರುಣಾ; ಆಕೆ ಮಮ್ಮಿಯಲ್ಲ—ರಾಕ್ಷಸಿ! ಆಕೆ ಹುಟ್ಟಿದ್ದೇ ತಪ್ಪು; ಸತ್ತಿದ್ದು ಲೋಕಕ್ಕೆ ಉಪಕಾರವಾಯಿತು !....'

ಆಂಟಿಯು ಈ ಮಾತುಗಳು ಒಳ್ಳೇ ಒಗಟಾಗಿ ಕಂಡವು; ಕಾನ್ವೆಂಟಿನಲ್ಲಿದ್ದಾಗಲೂ ಅರುಣಳನ್ನು ಕಾಡಿಸಹತ್ತಿತು 'ಆಂಟಿ ಯಾಕೆ ಹಾಗೆ ಮಾತನಾಡಿದರು ? ಅದರ ಅರ್ಥ ಏನು ?'

ಎಷ್ಟು ಕೇಳಿದರೂ, ಆಂಟಿ ಬೇರೆ ತುಟಿ ಬಿಚ್ಚಲಿಲ್ಲ! ಯೋಚಿಸಿ ಯೋಚಿಸಿ, ತಲೆ ಹುಣ್ಣಾಯಿತು; ಸಣ್ಣಗೆ ಜ್ವರ ಬರುವುದಕ್ಕಾರಂಭಿಸಿತು. ಅರುಣ ಪಟ್ಟಾಗಿ ಹಾಸಿಗೆ ಹಿಡಿದಳು. ಏನೇನೋ ದುಃಸ್ವಪ್ನಗಳು; ಯಾವು ಯಾವುದೋ ಕೆಟ್ಟ ಯೋಚನೆಗಳು....' ತಡೆಯಲಾರದಾಗಿ ಅರುಣ ರಾತ್ರಿಯೋ ರಾತ್ರಿ ಕೂಗಿಕೊಳ್ಳುತ್ತಿದ್ದಳು. ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಎಲ್ಲರಿಗೂ ಗಾಬರಿಯೇ ಆಯಿತು.

ಒಂದು ರಾತ್ರಿ—ಅರುಣಳಿಗೆ ತನ್ನ ಮಮ್ಮಿಯು ಸ್ವಪ್ನವಾಯಿತು. ಮಮ್ಮಿ ನೋಡುವುದಕ್ಕೆ ಬಲು ಸುಂದರಳಾಗಿದ್ದಳು, ಎಲ್ಲರ ಮಮ್ಮಿಯಂತೆ ದೊಡ್ಡವಳಾಗಿರಲಿಲ್ಲ—ಚಿಕ್ಕವಳಾಗಿದ್ದಳು! ಬಿಳಿಯ ಪೀತಾಂಬರದ ಸೀರೆ ಉಟ್ಟಿದ್ದಳು; ಮಧ್ಯೆ ಜರೀ ಬುಟ್ಟಾ! ದೇವತೆಯಂತೆ ಮೇಲಿನಿಂದ ಕೆಳಗೆ ಇಳಿದು ಬಂದ ಆಕೆ ನೆಟ್ಟಗೆ ಅರುಣಳ ಹತ್ತಿರ ಬಂದಳು. ಅವಳ ಸುಡುವ ತಲೆಯ ಮೇಲೆ ಕೈಯಾಡಿಸಿದಳು. ತನ್ನ ತೊಡೆಯ ಮೇಲಿಟ್ಟುಕೊಂಡು ಮುದ್ದಿಸಿದಳು. ಅವಳ ಸ್ಪರ್ಶ ರೋಜಾ ಹೂವಿನಷ್ಟು ಮೃದುವಾಗಿತ್ತು. 'ಅರುಣ್ ?' ಕೂಗಿದ ಅವಳ ಧ್ವನಿ-ಆ ಧ್ವನಿ ವೀಣೆಯ ತಂತಿಯಂತಿತ್ತು.

'ಮಮ್ಮಿ ?'

'ಮಮ್ಮಿ ? ಅವಳ ಎದೆಯಲ್ಲಿ ತಲೆ ಹುದುಗಿಸಿಕೊಂಡ ಅರುಣ ಇಡೀ ಲೋಕವನ್ನೇ ಮರೆತಳು—'ಮಮ್ಮೀ, ನೀನು ನಿಜವಾಗಿಯೂ ಬಂದಿದ್ದೀಯಾ ?'

ಮಮ್ಮಿಯ ತುಟಿಗಳ ಮೇಲೆ ಕಿರುನಗೆ ಸುಳಿದಾಡಿತು—'ಹೂಂ, ನೋಡು !' ಎಂದರು.

'ನೀನು ಸತ್ತುಹೋಗಿಲ್ಲವಾ ?'

'ಮತ್ತೆ ಬದುಕಿ ಬಂದಿದ್ದೀನಿ, ಮಗು—ನಿನಗಾಗಿ.'

'ಅಂದರೆ—ಮತ್ತೆ ಜೀಸಸ್ ಬಳಿ ಹೋಗೋದಿಲ್ಲ ತಾನೆ ?'

'ಇಲ್ಲ, ಮಗು—ಇಲ್ಲೇ ಇರ್ತೀನಿ; ನಿನ್ನ ಹತ್ತಿರಾನೆ—ಇನ್ಮೇಲೆ.'

'ನೀನು ತುಂಬಾ ಕೆಟ್ಟವಳು, ಮಮ್ಮಿ ! ಇಷ್ಟು ದಿನ ನನ್ನನ್ನ ಬಿಟ್ಟು ಹೊರಟುಹೋಗಿದ್ದೆಯಲ್ಲಾ ! ನಾನು ಎಷ್ಟು ದುಃಖಪಟ್ಟೆ ಗೊತ್ತಾ?—ಸರಿಯಾ ನೀನು ಮಾಡಿದ್ದು ?'

ಮಮ್ಮಿಯ ಕಣ್ಣುಗಳು ತುಂಬಿ ಬಂದವು ; ಅವಳನ್ನು ಎದೆಗಪ್ಪಿಕೊಂಡು ಹೇಳಿದರು—

'ಹೌದು ಅರುಣ್, ನಾ ಮಾಡಿದ್ದು ತಪ್ಪು ; ಖಂಡಿತ ಇನ್ಮೇಲೆ ಹಾಗೆ ಮಾಡೊಲ್ಲ ! ನಿನ್ನನ್ನ ಬಿಟ್ಟು ಎಲ್ಲೂ ಹೋಗಲ್ಲ ; ಇಲ್ಲೇ ಇರ್ತೀನಿ.'

'ನಿನ್ನನ್ನ ಬಿಟ್ಟು ಎಲ್ಲೂ ಹೋಗಲ್ಲ—ಇಲ್ಲೆ ಇರ್ತೀನಿ ; ನಿನ್ನನ್ನ ಬಿಟ್ಟು ಎಲ್ಲೂ ಹೋಗಲ್ಲ—ಇಲ್ಲೇ ಇರ್ತೀನಿ !' ಆಕೆಯ ಆ ಭರವಸೆ ದೇವಗಾನದಂತೆ ಕಿವಿಯಲ್ಲಿ ಮೊಳಗಿತು.

ಅರುಣ ಆನಂದಾತಿರೇಕದಿಂದ ಪಕ್ಕಕ್ಕೆ ಹೊರಳಿದಳು. ಹೌದು, ಮಮ್ಮಿ ತನ್ನ ಹಣೆಯ ಮೇಲೆ ಕೈಯಾಡಿಸುತ್ತಲೇ ಇದ್ದಳು....

'ಅರುಣ ?' ಮೆಲುವಾಗಿ ಕೂಗಿದಳು—'ಹಾಲು ಕುಡಿ....'

ಅರುಣ ಕಣ್ಣುಬಿಟ್ಟಳು. ಎದುರಲ್ಲಿ ಮಮ್ಮಿಯಿರಲಿಲ್ಲ ! ಕಾತರತೆಯಿಂದ ಸುತ್ತಲೂ ಕಣ್ಣೋಡಿಸಿದಳು.

ಊಹು....ಎಲ್ಲೂ ಮಮ್ಮಿಯಿರಲಿಲ್ಲ ! ಕೊಟ್ಟ ಮಾತನ್ನು ಉಳಿಸಿಕೊಳ್ಳದೆ ಹೊರಟುಹೋಗಿದ್ದಳು ! ಕಾಳರಾತ್ರಿಯಂತೆ ಆವರಿಸಿದ ಭಯಾನಕ ಶೂನ್ಯತೆಯನ್ನು ತಡೆಯಲಾರದೆ ಅರುಣ ಬಿಕ್ಕಿದಳು.

'ಅರುಣಾ—ಎದ್ದೆಯಾ ?' ಪಕ್ಕದ ಕೋಣೆಯಿಂದ ಇಂದೂ ಆಂಟಿ ಧಾವಿಸಿ ಬಂದರು—'ಛೇ, ಹಾಗೆಲ್ಲ ಅಳಬಾರದಮ್ಮ ; ಜ್ವರ ಏರತ್ತೆ ಅಷ್ಟೇ.'

ಹತ್ತಿರ ಕುಳಿತುಕೊಂಡರು ; ಅವಳ ತಲೆಯನ್ನು ತಮ್ಮ ತೊಡೆಯ ಮೇಲಿಟ್ಟುಕೊಂಡರು ; ಹಣೆಯ ಮೇಲೆ ಹೊರಳುತ್ತಿದ್ದ ಮುಂಗುರುಳನ್ನು ಹಿಂದಕ್ಕೆ ತಳ್ಳಿ ಕೈಯಾಡಿಸಿದರು. ಹಿತಕರವಾದ ಸ್ಪರ್ಶ....ಹೃದಯದಲ್ಲಿನ ನೋವೆಲ್ಲ ಮರೆತುಹೋಯಿತು, ತಂಗಾಳಿ ಬೀಸಿದ ಅನುಭವ....ಅರುಣ ಹಾಗೇ ನಿದ್ದೆಹೋದಳು.

* * *

'ನಾನು ಇಲ್ಲಿಗೆ ಹೇಗೆ ಬಂದೆ, ಆಂಟಿ ?' ಸ್ವಲ್ಪ ಚೇತರಿಸಿಕೊಂಡ ಮೇಲೆ ಅರುಣ ಕೇಳಿದಳು - 'ಒಳ್ಳೇ ಅಲ್ಲಾವುದೀನ ಕಥೆ ಹಾಗಿದೆಯಲ್ಲಾ ! ನಾ ಮಲಗಿದ್ದು ನಮ್ಮ ಕಾನ್ವೆಂಟಿನಲ್ಲಿ ; ಎದ್ದದ್ದು ಇಲ್ಲಿ ! ಅದು ಹೇಗೆ ?'

'ಅಲ್ಲಾವುದೀನ್ ದೀಪದ ಭೂತ ನಿನ್ನನ್ನ ಕರಕೊಂಡು ಬಂದಿತು !' ಆಂಟಿ ನಕ್ಕರು.

'ಅದರ ಹೆಸರು ಚಂದ್ರೂ ಅಂಕಲ್ ಎಂದೋ ?' ಅರುಣ ಕೇಳು ವುದಕ್ಕೂ ಚಂದ್ರೂ ಅಂಕಲ್ ಒಳಗೆ ಕಾಲಿಡುವುದಕ್ಕೂ ಸರಿಹೋಯಿತು.

'ಸದ್ಯ, ಎದ್ದೆಯಲ್ಲಾ ಮಹಾರಾಯ್ತೀ !' ಮಂಚದ ಹತ್ತಿರ ಕುರ್ಚಿ ಎಳೆದುಕೊಂಡು ಉದ್ಗರಿಸಿದರು—'ಏನು ಗಾಬರಿಪಡಿಸಿಬಿಟ್ಟೆಯೋ ಹುಡುಗಿ, ನಮ್ಮನ್ನೆಲ್ಲಾ !'

'ನಾನು ಸ್ವಪ್ನದಲ್ಲಿ ನನ್ನ ಮಮ್ಮಿ ಕಂಡೆ—' ಅರುಣ ಇದ್ದಕ್ಕಿದ್ದಂತೆ ಹೇಳಿದಳು.

ಆ ಈರ್ವರೂ ಸ್ತಬ್ಧರಾದರು. ಮುಖ ಮುಖ ನೋಡಿಕೊಂಡರು.

'ಮಮ್ಮಿ ಬಂದಿದ್ದಳು—ಹೇಳಿದಳು... '

ಎವೆ ಮುಚ್ಚಿದ ಅರುಣ ಮತ್ತೆ ಆ ಮಧುರ ಚಿತ್ರವನ್ನು ಕಲ್ಪಿಸಿ, ನಿಧಾನವಾಗಿ ವರ್ಣಿಸಿದಳು—ಚಾಚೂ ಬಿಡದೆ....ನಿಲ್ಲಿಸಿದ ಮೇಲೆ, ಪ್ರತಿ ಕ್ರಿಯೆಗಾಗಿ ಕಾದಳು. ಬಹು ಹೊತ್ತಾದರೂ ಏನೂ ಬಾರದಿರಲು, ಕಣ್ಣು ತೆರೆದಳು. ಕೋಣೆಯಲ್ಲಿ ಯಾರೂ ಇರಲಿಲ್ಲ !

* * *

ಡಾಕ್ಟರವರ ಸಲಹೆಯಂತೆ ಆ ಬೇಸಗೆಯ ರಜೆ ಪೂರ್ತಿ ಅರುಣ ಆಂಟಿಯ ಮನೆಯಲ್ಲಿಯೇ ಇದ್ದಳು; ಆಂಟಿಯ ಸತತ ಆರೈಕೆಯ ಫಲ ವಾಗಿ ಬೇಗ ಚೇತರಿಸಿಕೊಂಡಳು.

ಹಿಂದಿನ ಬೇಸಗೆಯ ರಜೆಗಳಂತೆ ಈ ಸಲದ್ದು ನೀಳವಾಗಿ ಕಾಣಲಿಲ್ಲ ಹೊತ್ತು ಮಿಂಚಿನಂತೆ ಹರಿದು ಹೋಗುತ್ತಿತ್ತು. ಮೆಲ್ಲಗೆ ಅವಳನ್ನು ಎಲ್ಲದ ರಲ್ಲೂ ತಯಾರು ಮಾಡಿದರು ಇಂದೂ ಆಂಟಿ.

ಚಂದ್ರೂ ಅಂಕಲ್‌ಗೆ ಒಂದು ಸ್ವೆಟರ್ ಹಾಕಿಕೊಟ್ಟಾಗ, ಅದು ಯಾವುದೋ ಪವಾಡವನ್ನು ಕಂಡವರಂತೆ ಆತ ನಿಂತುಬಿಟ್ಟರು!

'ನಿಜವಾಗಿಯೂ ನಮ್ಮ ಅರುಣಳೇ ಇದನ್ನ ಹಾಕಿದ್ದು! ಎಲ್ಲಿ ಕಲಿ ತಳು? ಇಷ್ಟೆಲ್ಲಾ ಬರತ್ತಾ ಅವಳಿಗೆ!' ಉದ್ಗಾರಗಳ ಮಳೆಯನ್ನೇ ಸುರಿಸಿ ದರು.

'ಅದೆಲ್ಲಾ ಆಮೇಲೆ ಆಗಲಿ—ಮೊದಲು ಹಾಕ್ಕೊಂಡು ನೋಡಿ— ಸರಿಹೋಗುತ್ತಾ ಎಂದು?' ಇಂದೂ ಆಂಟಿ ಹುಸಿಕೋಪ ತೋರಿದರು— 'ನಮ್ಮ ಅರುಣನ ಏನೂಂತ' ತಿಳಿದುಬಿಟ್ಟಿದ್ದೀರಿ? ಎಲ್ಲದರಲ್ಲೂ ಜಾಣೆ!' ಸೇರಿಸಿದರು—ಜಂಬವಾಗಿ.

'ಹೌದೇ?' ಅವರು ಬೆರಗಾದರು—ಯಾವಾಗಿನಿಂದ? ನಾನೇನೋ ಬರೀ ಅಲ್ಲಿ ಇಲ್ಲಿ ಸುತ್ತೋದ್ರಲ್ಲಿ, ಹರಟೆ ಹೊಡೆಯೋದ್ರಲ್ಲಿ ಮಾತ್ರ ಪ್ರವೀಣೆ ಅಂದುಕೊಂಡಿದ್ದೆ!'

'ಅದೆಲ್ಲಾ ನಿಮ್ಮ ಟ್ರೈನಿಂಗ್, ಅಂಕಲ್'—ತುಂಟುತನದಿಂದ ಅರುಣ ನುಡಿದಳು; ಆಂಟಿಯ ಕಡೆ ಬೆರಳು ತೋರಿಸಿ—'ಇವೆಲ್ಲಾ ಆಂಟಿಯ ಟ್ರೈನಿಂಗ್' ಎಂದು ಮುಗಿಸಿದಳು.

'ರ‍್ಯಾಸ್ಕಲ್! ಒಳ್ಳೇ ಬಿರುದನ್ನೇ ಕೊಟ್ಟೆಯಲ್ಲಾ ನಂಗೆ—ಇಷ್ಟು ದಿನ ಹಿಂದೆ ಮುಂದೆ ಓಡಾಡಿದ್ದಕ್ಕೆ!' ಚಂದ್ರೂ ಅಂಕಲ್ ಕೋಪದ ಸೋಗುಹಾಕಿ, ಕೆನ್ನೆ ಚಿವುಟಿದರು. ಸ್ವೆಟರ್ ಹಾಕಿಕೊಂಡು, ಒಳ್ಳೇ ಎಳೇ ಹುಡುಗನಂತೆ ಆ ಹಾಲಿನುದ್ದಕ್ಕೂ ಹೆಮ್ಮೆಯಿಂದ ಅಡ್ಡಾಡಿದರು.

'ಅದು ಸರಿ....' ಅವರ ಹುಬ್ಬುಗಳು ಒಂದಾದವು; ನಿಂತರು— '**ಇದರಲ್ಲಿ ಇಂದು ಹಾಕಿದ್ದು ಎಷ್ಟು—ಅರುಣ ಹಾಕಿದ್ದು ಎಷ್ಟು?**'

ಅರುಣಳಿಗೆ ಸಿಟ್ಟು ಬರದೇ !

'ಸ್ವೆಟರ್‌ನ ತೆಗೆದು ಕೊಟ್ಟುಬಿಡಿ, ಅಂಕಲ್'—ದುರುದುರು ನೋಡಿದಳು—'ನಿಮಗೆ ಆ ಕಲರ್ ಚೆನ್ನಾಗಿ ಕಾಣಲ್ಲ ; ಒಳ್ಳೇ ಸರ್ಕಸ್ ಬಫೂನ್ ಹಾಗೆ ಕಾಣ್ತಿದೀರಿ !'

'ಮೆಲ್ಲಗೆ, ಮೆಲ್ಲಗೆ' ಇಂದೂ ಆಂಟಿ ಕೈಯೆತ್ತಿದ್ದರು—'ಎಲ್ಲಾ ನಿಮ್ಮ ಅರುಣಳೇ ಹಾಕಿದ್ದು....' ಚಂದ್ರೂ ಅಂಕಲ್‌ಗೆ ತಿಳಿಸಿದರು—ನಗುತ್ತಾ.

'ನಂಗೆ ಇದು—' ಇಂದೂ ಆಂಟಿಯ ಎದುರಲ್ಲಿ ಸೆಟೆದು ನಿಂತು, ಜಗಳ ಕಾಯುವವರಂತೆ ಪ್ರಶ್ನಿಸಿದರು ಚಂದ್ರೂ ಅಂಕಲ್—'ನಂಗೆ ಇದು, ಒಳ್ಳೇ ಸರ್ಕಸ್ ಬಫೂನಿನ ಹಾಗೆ ಕಾಣತ್ತಾ? ನಾನು—ಏನು, ಒಳ್ಳೇ ಸರ್ಕಸ್ ಬಫೂನಿನ ಹಾಗೆ ಕಾಣ್ತಿದೀನಾ ?'

'ಛೇ ಇಲ್ಲ ! ಖಂಡಿತ ಇಲ್ಲ !' ಇಂದೂ ಆಂಟಿ ಆಚ್ಚರಿ ತೋರಿದರು : 'ಯಾರಾದ್ರೂ ನಕ್ಕಾರು !'

'ಮತ್ತೆ-ಇದು ಹೇಳತ್ತೆ ?' ಅರುಣಳ ಪಕ್ಕ ಅಂಕಲ್ ಬೆರಳು ಮಾಡಿ ತೋರಿದರು.

'ತಲೆಹರಟೆ ಮಾತುಗಳು ; ಗೊತ್ತಿದೆಯಲ್ಲಾ ಅದರ ಸ್ವಭಾವ? ಖಂಡಿತ ಅದರಲ್ಲಿ ತಿರುಳು ಇಲ್ಲ ; ನೀವು ಈ ಸ್ವೆಟರ್‌ನಲ್ಲಿ....'

'ಫೇಟ್ ರೋಮಿಯೋ ಹಾಗೆ ಕಾಣ್ತಿದೀರಿ !' ಅರುಣ ಸೇರಿಸಿದಳು ಮುಗ್ಧ ಧ್ವನಿಯಲ್ಲಿ.

'ಕೆಟ್ಟ ಹುಡುಗಿ !' ಎಂದು ಚಂದ್ರೂ ಅಂಕಲ್ ದುರುಗುಟ್ಟಿಕೊಂಡು ನೋಡಿದರು.

ಆದರೆ ಎಷ್ಟು ಹೊತ್ತು ? ಅರುಣ ಕಿಲಕಿಲನೆ ನಕ್ಕಳು. ಚಂದ್ರೂ ಅಂಕಲ್ ಮಂದಹಾಸದ ಮುದ್ದೆಯಾದರು.

'ಭೇಷ್ ! ಅನೂಪ್‌ಗೆ ಒರೆಯಬೇಕು !' ತಮ್ಮ ಭಾವೀ ಸೊಸೆಯತ್ತ ಅಭಿಮಾನದಿಂದ ನೋಡಿದರು—'ತುಂಬಾ ಜಾಣ ಹುಡುಗಿ! ಹಾಗೇ ಮನೆಕೆಲಸಾನೂ ಹೇಳಿಕೊಡು, ಇಂದೂ. ಈ ಹೆಣ್ಣುಮಕ್ಕಳಿಗೆ ಅಡಿಗೆ ಮಾಡೋದು ಬರಬೇಕು ನೋಡು ; ನಮ್ಮ ಅನೂಪ್‌ಗೆ ಹುಳಿ ತುಂಬಾ ಇಷ್ಟ ; ಅದ್ರಲ್ಲೂ ಆಲೂಗೆಡ್ಡೆ-ಈರುಳ್ಳಿ ಹುಳಿ, ಬದನೆಕಾಯಿ ಗೊಜ್ಜೊಂದ್ರೆ

ಪ್ರಾಣ! ಇಡ್ಲಿ ಅಂದ್ರೆ ಸರಿ, ಎಲ್ಲಿದ್ರೂ ಓಡಿಬಂದು ಬಿಡ್ತಾನೆ! ಮಸಾಲೆ ವಡೇನ ಸ್ವಪ್ನದಲ್ಲೂ ಚಪ್ಪರಿಸ್ತಾನೆ! ಮೈಸೂರುಪಾಕು, ಜಾಮೂನು, ಕೇಸರೀಭಾತು, ವಾಂಗೀಭಾತು. ಪಕೋಡ, ಹಲ್ವ ..'

'ಅಶೋಕ ಹೊಟೇಲ್‌ರ ಮಗಳನ್ನ ಮದುವೆ ಮಾಡಿಕೊಟ್ಟುಬಿಡಿ, ಅಂಕಲ್—' ಅರುಣ ಉಪದೇಶಿಸಿದಳು—'ಸುಖವಾಗಿರ್ತಾನೆ!'

ಚಂದ್ರೂ ಅಂಕಲ್ ಕೆರಳಿ ನೋಡಿದರು.

*    *    *

ಚಂದ್ರೂ ಅಂಕಲ್ ಹೇಳಿದುದರಿಂದಲೋ ಏನೋ, ಅಂತೂ ಅರುಣ ಳಿಗೆ ಮನೆಗೆಲಸದಲ್ಲಿ ಆಸಕ್ತಿ ಹುಟ್ಟಿತು. ಪ್ರತಿಯೊಂದನ್ನೂ ಕಲಿತಳು.

'ಇನ್ನು ನಮ್ಮ ಅರುಣ ಯಾವುದರಲ್ಲೂ, ಯಾರಿಗೂ ಕಮ್ಮಿಯಿಲ್ಲ.' ಇಂದೂ ಆಂಟಿ ಹೆಮ್ಮೆಯಿಂದ ಚಂದ್ರೂ ಅಂಕಲ್‌ರವರ ಹತ್ತಿರ ಹೇಳಿ ಕೊಂಡರು—'ಯಾವ ರಾಜಕುಮಾರನಿಗೆ ಬೇಕಾದ್ರೂ ಕೇಳಬಹುದು.'

'ರಾಜಕುಮಾರನೂ ಬೇಡ—ಗೀಜಕುಮಾರನೂ ಬೇಡ!' ಚಂದ್ರೂ ಅಂಕಲ್ ಗದರಿಸಿಕೊಂಡರು—'ನಮಗೆಲ್ಲಾ ಯಾಕೆ ಅದೆಲ್ಲಾ? ಇದಾನಲ್ಲಾ ನಮ್ಮ ಮನೇಲೇ ಒಬ್ಬ ಚೋರ! ಹಿಡಿದು ತಾಳಿ ಕಟ್ಟಿಸಿಬಿಟ್ರೆ ಆಯ್ತು.'

'ಆ ಚೋರನ ಮನಸ್ಸು ಹ್ಯಾಗೋ?' ಇಂದು ಆಂಟಿ ಬೇಕೆಂದು ಕೇಳಿದರು—ತಿಳಿದುಕೊಳ್ಳಲು. ಎಷ್ಟಾದರೂ ಆಕೆಗೆ ಸ್ತ್ರೀಸಹಜ ಆತಂಕ–ಕುತೂಹಲ!

'ಆ ಚೋರನಿಗೆ ಚಿಕ್ಕಂದಿನಿಂದ ಇವಳದೇ ಕನಸು! ಓದು ಬಿಟ್ಟು ಸದಾ ಹಿಂದೆ ತಿರುಗ್ತಾ ಇದ್ದ; ಕೇಳು ಬೇಕಾದ್ರೆ ಅವಳನ್ನ? ಅದು ಯಾವ ಬೃಹಸ್ಪತಿ ಪಾಸುಮಾಡಿಸಿದನೋ ಅವನನ್ನ—ನಂಗೇ ಗೊತ್ತಿಲ್ಲ! ಕಾಗದ ದಲ್ಲೂ ಅಷ್ಟೇ, ಬರೀ ಅರುಣಾಳದೇ ವಿಷಯ!'

'ಅರುಣಾಳ ಮನಸ್ಸು ಹ್ಯಾಗೋ?' ಇಂದೂ ಆಂಟಿಮತ್ತೊಂದು ಅಡ್ಡಿ ಒಡ್ಡಿದರು.

ಚಂದ್ರೂ ಅಂಕಲ್‌ಗೆ ಸಿಟ್ಟು ಬಂದುಬಿಟ್ಟಿತು.

'ನನ್ನ ಮಗ ಯಾವುದ್ರಲ್ಲಿ ಕಡಿಮೆ ಅಂತ ನೀ ಹೀಗೆ ಕೇಳಬೇಕು—

ಅವಳು ಹಿಂತೆಗೆಯಬೇಕು, ನೀನೇ ಹೇಳು? ಅಲ್ಲದೆ, ಚಿಕ್ಕಂದಿನಿಂದ ಅಷ್ಟೆ, ಅವಳಿಗೂ ಅವನನ್ನ ಕಂಡರೆ ಬಲು ಇಷ್ಟ—ಬಲು ಇಷ್ಟ! ಸದಾ 'ಅನೂಪ್! ಅನೂಪ್?' ಅಂತ. ಅವನ ಹಿಂದೆಮುಂದೇನೇ ಅಡ್ಡಾಡುತ್ತಿದ್ದಳು.'

'ಯಾಕೆ ಕೋಪಮಾಡ್ಕೋತೀರಿ—ಅದೂ ಇಷ್ಟೊಂದು! ನಾ ಯಾಕೆ ಕೇಳಿದೆ ಅಂದ್ರೆ....' ಇಂದೂ ಆಂಟಿ ನಿಧಾನವಾಗಿ ಹೇಳಿದಳು—'ಮದುವೆ ಜೀವನದಲ್ಲಿ ಮುಖ್ಯ ಘಟ್ಟ! ಸರಿಯಾಗಿ ಯೋಚನೆ ಮಾಡದೆ, ಒಲ್ಲದವನ್ನ ಮದುವೆಯಾಗಿ, ಜೀವನ ಪರ್ಯಂತವೂ ಅಸುಖಿಯಾಗಿರೋದಕ್ಕಿಂತ, ಮದುವೆ ಆಗದೆ ಉಳಿಯೋದೇ ಲೇಸು! ಮದುವೆ ಆದ್ರೆ, ಮನಸ್ಸಿಗೆ ಒಪ್ಪಿದವನನ್ನ ಆಗಬೇಕು; ಇಲ್ಲದಿದ್ರೆ....'

ಧಡಕ್ಕನೆ ನಿಲ್ಲಿಸಿದಳು. ಚಂದ್ರೂ ಅಂಕಲ್ ಅವಳನ್ನೇ ನಿಟ್ಟಿಸಿ ನೋಡುತ್ತಿದ್ದರು! ಈರ್ವರ ಕಣ್ಣುಗಳೂ ಒಂದಾದವು; ಕಣ್ಣುಗಳಾಳದಿಂದ ಯಾವುದೋ ವೇದನೆ ಹೊಮ್ಮಿ ಗಕ್ಕನೆ ನಿಂತಿತು—ಮುಂದಕ್ಕೆ ಹರಿದು ಹೋಗಲಾರದೆ....ಅರ್ಧ ಅಲ್ಲೇ ನಿಲ್ಲಲಾರದೆ....ಕುಡಿದಿದ್ದ ಕಾಫಿಯನ್ನು ಅಲ್ಲಿಯೇ ಇಟ್ಟ ಚಂದ್ರೂ ಅಂಕಲ್, ಸರಕ್ಕನೆ ಎದ್ದು ಹೊರಟು ಹೋದರು.

## ೯

ಹೊರಗಡೆ ಚಪ್ಪಲಿಯ ಸಪ್ಪಳ ಆಯಿತು.

'ಓ ಪ್ರಸಾದ್ ಬಂದ!' ಬೆಚ್ಚಗೆ ಹೊದೆದು ಮಲಗಿದ್ದ ಅರುಣ ಚಂಗನೆ ಕುಳಿತಳು—'ನಂಗೆ ಗೊತ್ತಿತ್ತು ಇವತ್ತು ಬರ್ತಾನೆ ಅಂತ!'

ಒಳಗೆ ಕಾಲಿಟ್ಟ ಪ್ರಸಾದ್ ಬೇಕೆಂದು ಬಾಗಿಲಲ್ಲೇ ನಿಂತ. ಅವನ ಕಣ್ಣುಗಳಲ್ಲಿ ಏನೋ ಕೀಟಲೆ ಎದ್ದು ಕಂಡಿತು.

'ಯಾಕೆ ಅಲ್ಲೇ ನಿಂತೆ? ಒಳಗೆ ಬಾ, ಪ್ರಸಾದ್—' ಇಂದೂ ಆಂಟಿ ವಾತ್ಸಲ್ಯದಿಂದ ಕರೆದರು.

'ಇಲ್ಲ, ಕ್ಷಮಿಸಿ—ಯಾರೋ ಬಾಣಂತಿ ಬಂದ ಹಾಗಿದೆ! ಯಾಕೆ ಡಿಸ್ಟರ್ಬ್ ಮಾಡಬೇಕು?'

'ಬಾಣಂತಿ ?' ಇಂದೂ ಆಂಟಿ–ಅರುಣ, ಇಬ್ಬರೂ ಅಚ್ಚರಿಯಿಂದ ನೋಡಿದರು—'ಎಲ್ಲಿ ?'

'ಅಲ್ಲಿ ...' ತಲೆಯಿಂದ ಹಿಡಿದು ಕುತ್ತಿಗೆ ಪೂರ್ತಿ ಮಫ್ಲರ್ ಬಿಗಿದಿದ್ದ ಅರುಣಳತ್ತ ಕೈ ತೋರಿಸಿದನು—'ಅದೇ, ಆ ರಗ್ಗುಗಳ ನಡುವೇ....'

'ಓ !....' ಇಂದೂ ಆಂಟಿ ನಕ್ಕರು—'ಯಾವ ಊರ ಬಾಣಂತೀನೋ ! ಅದು ನೀನೂ ಸರಿಯೇ—ಅದು ನಮ್ಮ ಅರುಣ ಕಣೋ ! ಚಳಿ ಅಂತ, ಊರಲ್ಲಿರೋ ರಗ್ ಎಲ್ಲ ಹೊದ್ದುಕೊಂಡು ಮಲಗಿದ್ದಾಳೆ.'

'ಅರುಣ !' ಅವನು ಅಚ್ಚರಿಯ ಸೋಗು ಹಾಕಿದನು—'ಅವಳೇ ಇದು ! ನನಗೆ ಗೊತ್ತೇ ಆಗಲಿಲ್ಲ ! ನಿಜವಾಗಿಯೂ ಮಿಸ್ಟೇಕ್ ಮಾಡಿಕೊಂಡುಬಿಟ್ಟೆ !'

'ಹೌದು ಹೌದು, ನಿನ್ನ ತಲೆ !' ಅರುಣ ಸಿಡುಕಿದಳು—'ಬಾಗಿಲ ಎದುರಿಗೆ ಸರಿಯಾಗಿ–ನಿಂಗೆ ಚೆನ್ನಾಗಿ ಕಾಣೋ ಹಾಗೆ ನಾ ಕೂತಿದೀನಿ ! ನಿನ್ನ ಕಣ್ಣೋ, ಯಾವ ದೋಷಾನೂ ಇಲ್ಲದೆ ಛೇಷಾಗಿದೆ ! ಮಿಸ್ಟೇಕ್ ಅಂತೆ—ಮಿಸ್ಟೇಕು ! ಬೇಕೂಂತ ನಾಟಕ ಆಡ್ತಾನೆ !'

ಪ್ರಸಾದ್ ನಕ್ಕನು. ಮುಂದೆ ಬಂದು, ಬದಿಯಲ್ಲಿದ್ದ ಒಂದು ಕುರ್ಚಿಯನ್ನು ಮಂಚದ ಬಳಿ ಹಾಕಿಕೊಂಡು ಕುಳಿತನು ; ಕೇಳಿದನು—

'ಇದೇನೀ ಅವತಾರ ? ವೈ ಹುಷಾರಿಲ್ವಾ ?'

'ಇಲ್ಲ—' ಅರುಣ ಸಪ್ಪೆಮುಖ ಮಾಡಿದಳು.

'ಏನಾಗಿದೆ ?' ಅವನ ಧ್ವನಿಯಲ್ಲಿ ಆತಂಕ ತಲೆದೋರಿತ್ತು.

'ಖಾಯಿಲೆ—' ಅರುಣ ನರಳಿದಳು.

'ಖಾಯಿಲೆಯ ಹೆಸರು ?'

'ಸೋಮಾರಿತನ....'

ತಕ್ಷಣ ಅವನು ಹುಸಿಭಯದಿಂದ ಕುರ್ಚಿಯನ್ನು ಹಿಂದಕ್ಕೆ—ಬಹು ಹಿಂದಕ್ಕೆ ಎಳೆದುಕೊಂಡನು—'ಅಂಟುಜಾಡ್ಯ! ದೂರ ಇರೋಣ...' ಎಂದು.

'ಸಾಲದು ! ಇನ್ನೂ ಒಂದು ಹತ್ತು ಮೈಲಿ ದೂರ ಎಳೆದುಕೋ—' ಅರುಣ ಉಪದೇಶಿಸಿದಳು.

'ಆಗ ನಾನು ಕಾಂಪೌಂಡಿನಲ್ಲಿ ಕೂರಬೇಕಷ್ಟೆ—' ಅವನು ನಕ್ಕನು.

ಮಾಮೂಲಿನಂತೆ ಇಂದೂ ಆಂಟಿ ತಿಂಡಿ-ಕಾಫಿ ತಂದುಕೊಟ್ಟರು—'ಬೆಳಿಗ್ಗೆ ಯಾಕಪ್ಪಾ ಊಟಕ್ಕೆ ಬರಲಿಲ್ಲ?' ವಿಶ್ವಾಸದಿಂದ ಪ್ರಶ್ನಿಸಿದರು.

'ಬೆಳಗ್ಗೆ ಯಾವುದೋ ಎರಡು ಟ್ಯೂಷನ್ ಅರ್ಜೆಂಟಾಗಿ ಬಿತ್ತು, ಆಂಟಿ; ಮುಗಿಸಿ ಬರುವ ಹೊತ್ತಿಗೆ ಇಷ್ಟು ಹೊತ್ತಾಯ್ತು.'

ಇಂದೂ ಆಂಟಿ ಅವನನ್ನೇ ಅಭಿಮಾನದಿಂದ ನೋಡಿದರು. ತುಂಬು ಬಡತನದಲ್ಲಿ ಹೋರಾಡಿ, ಸ್ವಪ್ರಯತ್ನದಿಂದ ಉತ್ಕರ್ಷೆಗೆ ಬರುತ್ತಿರುವ ಹುಡುಗ—ಎಷ್ಟು ಜನಕ್ಕಿದೆ ಈ ಸ್ಥೈರ್ಯ? ಅದೂ ಈಗಿನ ಕಾಲದ ಹುಡುಗರಿಗೆ?

ಪ್ರಸಾದ್ ಹುಟ್ಟಿದ ಕೂಡಲೆ ತಂದೆ ತೀರಿಹೋಗಿದ್ದರು. ಅಲ್ಲಿ ಇಲ್ಲಿ ಕೈಕೆಲಸ ಮಾಡಿಕೊಟ್ಟು, ತಾಯಿ ಅವನನ್ನು ಬೆಳೆಸಿದ್ದರು; ಓದಿಸಿದ್ದರು. ಅವರ ಇವರ ಕಾಲು ಕಟ್ಟಿ ವಾರದ ಮನೆ ಗೊತ್ತುಮಾಡಿದರು. ಇಂದೂ ಆಂಟಿಯದೂ ಅಂತಹುದೊಂದು ಮನೆ. ಆಕೆಗೆ ಪ್ರಸಾದ್‌ನ ತಾಯಿ ಬಲಗೈಯಾಗಿದ್ದಳು ಪ್ರತಿಯೊಂದು ಹಬ್ಬಹುಣ್ಣಿಮೆಯಲ್ಲೂ ಅವಳದೇ ನೆರವು! ಆಕೆಯ ಬಗ್ಗೆ ಇಂದೂ ಆಂಟಿಗೆ ಒಂದು ತರಹದ ಗೌರವ; ಕಾರಣ, ಮಿಕ್ಕ ಕೆಲಸದವರಂತೆ ಆಕೆ ಹರಟೆ ಹೊಡೆಯುತ್ತಿರಲಿಲ್ಲ. ಎಷ್ಟೋ ಅಷ್ಟು ಮಾತು. ಮಿಕ್ಕವರಂತೆ ಅನಾವಶ್ಯಕವಾದ ಕುತೂಹಲ ತೋರುವುದು, ಸಂಬಂಧವಿಲ್ಲದ್ದನ್ನೆಲ್ಲ ಕೇಳುವುದು—ಅರಿಯದ ಬುದ್ಧಿ.

ಆಕೆಯ ಹುಡುಗ ಪ್ರಸಾದ್‌ನನ್ನು ಕಂಡ ತಕ್ಷಣ ಇಂದೂ ಆಂಟಿಗೂ ಏನೋ ಒಂದು ತರಹದ ವಿಶ್ವಾಸ ಎದ್ದಿತ್ತು. ಆತ ಒಳ್ಳೇ ಚೂಟಿಯಾದ ಹುಡುಗ; ಓದಿನಲ್ಲಂತೂ ಬಲು ಬುದ್ಧಿವಂತ: ವಿನಯಶಾಲಿ; ಸದಾ ಹಸನ್ಮುಖಿ. ಯಾರಿಗೆ ತಾನೆ ಅದು ಮೆಚ್ಚಿಗೆಯಾಗದು? ಪಾಪ, ಹುಡುಗನ ದುರದೃಷ್ಟ; ಇದ್ದಕ್ಕಿದ್ದಂತೆಯೇ ತಾಯಿ ಹೋಗಿಬಿಟ್ಟಳು! ದಿಕ್ಕುತೋಚದೆ ತಲೆಯ ಮೇಲೆ ಕೈಯಿಟ್ಟು ಕುಳಿತ ಆ ಅನಾಥ ಬಾಲಕನಿಗೆ ಇಂದೂ ಆಂಟಿಯೇ ಆ ಹೊತ್ತಿನಿಂದ ತಾಯಿಯಾದರು. ಅವನ ಕಷ್ಟಸುಖದಲ್ಲಿ ಭಾಗಿಯಾದರು. ಚಿಕ್ಕಂದಿನಿಂದಲೂ ತಪ್ಪದೆ ಫಸ್ಟ್ ಬರುತ್ತಿದ್ದ ಅವನು ಕಾಲೇಜಿನಲ್ಲಿಯೂ ಅದೇ ಶಿಖರವನ್ನೇರಿದಾಗ ಇಂದೂ ಆಂಟಿಯ ಹೆಮ್ಮೆ ತೀರದು! ಸ್ಕಾಲರ್‌ಶಿಪ್ ಸಹ ದೊರಕಿತು!

ಮೇಷ್ಟ್ರುಗಳಿಗೆಲ್ಲಾ ಪ್ರಸಾದ್ ಎಂದರೆ ಬಲು ಅಚ್ಚುಮೆಚ್ಚು. ಸ್ನೇಹಿತರಿಗೂ ಅಷ್ಟೇ ! ಹುಟ್ಟಿದಂದಿನಿಂದ ಕಷ್ಟವನ್ನೇ ಉಂಡು ಬೆಳೆದಿದ್ದ ಅವನು, ಪರರ ಕಷ್ಟಕ್ಕಾಗುವ ಮನುಷ್ಯ. ಜೊತೆಗೆ ಸದಾ ಸರಸಿ–ಸರಳಹೃದಯಿ !

ಇಂದೂ ಆಂಟಿಯ ಮನೆಯಲ್ಲಿ ಪ್ರಸಾದ್ ಮತ್ತು ಅರುಣಳ ಪರಿಚಯ ಬೆಳೆಯಿತು. ಅರುಣಳಿಗೆ ಕಥೆ ಪುಸ್ತಕ ಎಂದರೆ ಬಲು ಇಷ್ಟ ; ಅವನ್ನು ಸಂಪಾದಿಸಿಕೊಂಡುವ ಕೆಲಸ ಪ್ರಸಾದನಿಗೆ ಬಿತ್ತು.

'ಅಮ್ಮಯ್ಯಾ ! ಈ ರೀತಿ ದಿನಕ್ಕೊಂದು ಕಥೆ ಪುಸ್ತಕಾನ ಓದಿ ಮುಗಿಸ್ತಾ ಇದ್ರೆ, ನಂಗೆ ಅದೇ ಕೆಲಸವಾಗಿಬಿಡತ್ತೆ ಅಷ್ಟೇ—ನಿಂಗೋಸ್ಕರ ಪುಸ್ತಕಕ್ಕೆ ಅಲೆಯೋದು ; ತರೋದು ! ಒಳ್ಳೇ ಬಕಾಸುರಿ ಆಗಬಿಟ್ಟಿದ್ದೀಯಲ್ಲಾ !' ದಬಾಯಿಸುತ್ತಿದ್ದ.

'ನಿನ್ನಿಂದಲೇ ನಂಗೀ ಅಂಟುಬಾಡ್ಯ ಬಂದದ್ದು ! ಮೊದಲೆಲ್ಲಾ ನಾ ಹೀಗೆ—ಇಂಥಾದ್ದೆಲ್ಲಾ ಓತ್ತಾನೇ ಇರಲಿಲ್ಲ. ಇಲ್ಲಿ ಬಂದು, ನಿನ್ನ ಸ್ನೇಹ ಆದಮೇಲೆ, ನಂಗೂ ಶುರು ಆಯ್ತು.' ಅರುಣ ವಾದಿಸುತ್ತಿದ್ದಳು.

'ನಾನೇನೂ ನಿನ್ನ ಹಾಗೆ ಪ್ರೇಮ ಕಾದಂಬರಿಗಳನ್ನ ಓದೋದಿಲ್ಲ.'

'ಇಲ್ಲ ಪಾಪ, ಮೂರು ಹೊತ್ತೂ ಶಂಕರಾಚಾರ್ಯರ ಜೀವನ ಚರಿತ್ರೇನ–ರಾಮಾಯಣ ಮಹಾಭಾರತಾನ ಓತ್ತಾ ಇರ್ತೀ ನೋಡು !' ಅವಳು ಅಣಕಿಸಿದಳು—'ಸುಮ್ನಿರಪ್ಪಾ ಸುಬ್ಬಾಶಾಸ್ತ್ರೀ, ನಾನೂ ಕಂಡಿದೀನಿ!'

ಒಂದು ಸಲ—'ಪ್ರೇಮಿಗಳ ಮಿಲನ' ದಪ್ಪ ಕಾದಂಬರಿಯನ್ನು ಓದುತ್ತಿದ್ದ ಅವನನ್ನು ಅರುಣ ಕಂಡುಬಿಟ್ಟಳು ! ಆಗ ಅವನ ಮುಖ ನೋಡಬೇಕಿತ್ತು !

'ಇಲ್ಲ ಕಣಮ್ಮಾ, ಅದು ನಿಜವಾಗಿಯೂ ಹೆಸರಿನಷ್ಟು ಗಲೀಜಾಗಿಲ್ಲಾ ....ತುಂಬಾ ಮರ್ಯಾದೆಯಾದ ಕಥೆ; ಅದ್ರಲ್ಲಿ ಪ್ರೇಮಿಗಳು ಕೈ ಕೂಡ ಮುಟ್ಟೋದಿಲ್ಲ ! ದೂರಾನೆ ಕೂತು ಮಾತಾಡ್ತಾರೆ....' ಎಂದು ವಿವರಿಸಲು ಯತ್ನಿಸಿದನು.

'ಏನು—ಚೀಣಾದ ವಿಚಾರವನ್ನೇ ?' ಅರುಣ ಮುಗ್ಧಭಾವದಿಂದ ಕೇಳಿದಳು.

ಅವನು ಏನಾಯಿತೆಂದು ತಿರುಗಿ ನೋಡುವಷ್ಟರಲ್ಲಿ ಆ ಪುಸ್ತಕವನ್ನು ಕಸಿದುಕೊಂಡು ಓಡಿಹೋಗಿದ್ದಳು ಅರುಣ. ಹಿಂದೋಡಲು ಅವನಿಗೆ ಧೈರ್ಯವಾಗಲಿಲ್ಲ.

ಒಂದು ವಾರವಾಯಿತು, ಎರಡು ವಾರವಾಯಿತು, ಒಂದು ತಿಂಗಳಾಯಿತು—ಆ ಪುಸ್ತಕದ ಪತ್ತೆಯೇ ಇಲ್ಲ !

'ಎಲ್ಲಮ್ಮಾ ಆ ನನ್ನ....ನನ್ನ ಬುಕ್ಕು !' ತಡೆಯಲಾರದೆ ಕೇಳಿದ

'ನಾನು ಓದುತ್ತಾ ಇದ್ದೆ....ಮದರ್ ಲೂಯಿಸ್ ನೋಡಿಬಿಟ್ರು ! ವಾಟ್ ಚೈಲ್ಡ್, ಇಂತಹಾ ಪುಸ್ತಕಾನ ಓದೋದುಂಟೇ ! ತಡೀ, ಮದರ್ ಸುಪೀರಿಯರ್‌ಗೆ ಹೇಳಿ ಮಾಡಿಸ್ತೀನಿ ! ವೆರೀ ರಾಂಗ್ ಚೈಲ್ಡ್ ಅಂತ ಬೆದರಿಸಿಕೊಂಡು ಹೋಗಿಬಿಟ್ರು....ಎಷ್ಟು ಕೇಳಿದ್ರೂ ಕೊಡಲ್ಲ ; ನಾನೇನು ಮಾಡಲಿ ?' ಅರುಣ ತಲೆತಗ್ಗಿಸಿದಳು.

'ಹಾಗಾದ್ರೆ....ಎಲ್ಲೋ ಮದರ್ ಲೂಯಿಸ್ ಸಹ ಅದನ್ನ ಓತ್ತಾ ಇರಬೇಕು....' ಪ್ರಸಾದ್ ಹಾಸ್ಯಮಾಡಿದ—'ಎಷ್ಟಾದ್ರು ನಿಮ್ಮ ಮದರ್ಸ್-ಸಿಸ್ಟರ್ಸ್‌ಗಳು ಕೂಡ ರಕ್ತಮಾಂಸದ ಮನುಷ್ಯರು ತಾನೆ ? ಮುಂದಿನ ಸಲ ಕಂಡಾಗ ಕೇಳು—'ಪ್ರೇಮಿಗಳ ಮಿಲನ ಚೆನ್ನಾಗಿತ್ತಾ ? ಕಾದಂಬರಿಯನ್ನ ಚೆನ್ನಾಗಿ ಬರೆದಿದ್ದಾನಾ ?' ಅಂತ. ಆಗ ಹೊರಬರುತ್ತೆ ಗುಟ್ಟು !'

ಅರುಣ ಕಿಲಕಿಲನೆ ನಕ್ಕಳು. ಅವಳ ಈ ನಗು ಕೇಳಿ ಇಂದೂ ಆಂಟಿ ತಾವು ಮಾಡುತ್ತಿದ್ದ ಕೆಲಸವನ್ನು ಬಿಟ್ಟು ತಲೆಯೆತ್ತಿದ್ದರು. ಎರಡು ಮುಗ್ಧ ಎಳೇಜೀವಿಗಳು....ಹೃದಯದಲ್ಲಿ ಯಾವುದೋ ಆಸೆ ಎದ್ದಿತು....ಹಿಂದುಗಡೆಯೇ ಏನೋ ಆತಂಕ !

## ೧೦

ಅರುಣ ಬಿಡಲೊಲ್ಲಳು ; ಆಂಟಿ ಹೇಳಲೊಲ್ಲಳು. ಕೊನೆಗೂ ಅರುಣಳೇ ಗೆದ್ದಳು !

'ನಿನ್ನ ಅಂಕಲ್‌ಗೆ ತಿಳಿದ್ರೆ....ಏನಿಲ್ಲ, ನನ್ನನ್ನ ಕೊಂದುಹಾಕಿ ಬಿಡ್ತಾರೆ ಅಷ್ಟೇ..' ಆಂಟಿ ಅಂಜಿದರು.

'ಅಂಕಲ್‌ಗೆ ಹೇಗೆ ತಿಳಿಯುತ್ತೆ ? ನಾನು ಅಂಕಲ್‌ಗೆ ಹೇಳಲ್ಲ ; ಖಂಡಿತ ಹೇಳಲ್ಲ....' ಅರುಣ ಮಾತುಕೊಟ್ಟಳು.

ಮನಸ್ಸಿಲ್ಲದೆ—ವಿಧಿಯಿಲ್ಲದೆ, ಆಂಟಿ ಪ್ರಾರಂಭಿಸಿದರು, ಅರುಣಳ ಮಮ್ಮಿ ಕಥೆಯನ್ನ....

'ನಂಗಿಂತ ಸ್ವಲ್ಪ ದೊಡ್ಡವಳು ನಿನ್ನ ಮಮ್ಮಿ ಅಷ್ಟೇ ; ನಾವಿಬ್ಬರೂ ಗುಮಾಸ್ತೆ ರಂಗಣ್ಣನವರ ಮಕ್ಕಳು ; ನೋಡೋದಿಕ್ಕೆ ನಿಮ್ಮಮ್ಮ ತುಂಬಾ ಚೆನ್ನಾಗಿದ್ದರು ; ಬಹಳ ಚೆಲುವೆ ಎಂದು ಹೆಸರು ತೆಗೆದಿದ್ದರು. ಆದರೆ ಮನೆಯಲ್ಲಿ ಅಷ್ಟೊ ಅಷ್ಟು ಬಡತನ ತಾಂಡವವಾಡುತ್ತಿತ್ತು.

'ಈ ಚಂದ್ರೂ....ಅಂದರೆ ನಿನ್ನ ಈ ಚಂದ್ರೂ ಅಂಕಲ್ ನಮಗೆ ಯಾವುದೋ ದೂರದ ಸಂಬಂಧ. ಹಾಗಾಗಿ ಆಗಾಗ ಮನೆಗೆ ಬರುತ್ತಿದ್ದರು —ಹರಟೆಗೆ ಕೂರುತ್ತಿದ್ದರು. ನಮಗೇ ತಿಳಿಯದಂತೆ ನಾವಿಬ್ಬರು ಅಕ್ಕತಂಗಿ ಯರೂ ಅವರನ್ನು ಪ್ರೇಮಿಸಿದೆವು. ಆದರೆ ಚಂದ್ರೂ ಒಲಿದದ್ದು....

'ಚಂದ್ರೂ ಒಲಿದದ್ದು....ಗೌರಾನಿಗೆ....ನಿನ್ನ ಮಮ್ಮೀಗೆ....ನನ್ನ ಹೃದಯಕ್ಕೆ ತುಂಬಾ ನೋವಾದರೂ, ದಾರಿ ಬಿಟ್ಟು ನಿಂತೆ. ಕಾರಣ, ವಯಸ್ಸಿನಲ್ಲಿ ನಾನೇ ಕಿರಿಯವಳಾಗಿದ್ದರೂ, ಪ್ರತಿಯೊಂದನ್ನೂ ಅಕ್ಕನಿಗಾಗಿ ತ್ಯಾಗ ಮಾಡಿ ಮುದುರಿ ಕೂರುವ ಪಟ್ಟ ನನ್ನದಾಗಿತ್ತು.

'ಗೌರಾ ನನ್ನ ಎಲ್ಲಾ ತ್ಯಾಗಗಳನ್ನು ತನ್ನ ಜನ್ಮಸಿದ್ಧ ಹಕ್ಕು ಎಂಬು ವಂತೆ ನಡೆಸಿಕೊಳ್ಳುತ್ತಿದ್ದಳು. ಅಪ್ಪ ಅಮ್ಮನ ಅತಿಮುದ್ದು, ತನ್ನ ರೂಪದ ಅರಿವು, ಸುತ್ತಮುತ್ತಲಿನವರ ಮೆಚ್ಚುಗೆ, ಎಲ್ಲವೂ ಸೇರಿ ಅಹಂಕಾರ ತಲೆಗೆ ಏರಿತ್ತು ! ಆದರೀಗ ನಮ್ಮಮ್ಮ ಚಂದ್ರೂ ಅಂಕಲ್-ಗೌರಾನ ಪ್ರಣಯಕ್ಕೆ ಪ್ರೋತ್ಸಾಹ ಕೊಡಲಿಲ್ಲ ! ಚಂದ್ರೂ ಅಂಕಲ್ ಸಹ ನಮ್ಮಂತೆಯೇ ಬಡವರು ; ನೋಡಿ ನೋಡಿ, ತಮ್ಮಂಥವರಿಗೇ ಕೊಡುವುದೇ ?

'ಚಂದ್ರೂ ಒಳ್ಳೆ ಮನೆತನದವ ; ತುಂಬಾ ಬುದ್ಧಿವಂತ ಹುಡುಗ. ಇಂದೋ ನಾಳೇನೋ, ಖಂಡಿತ ಮೇಲಕ್ಕೆ ಬಂದೇ ಬರ್ತಾನೆ. ಎಲ್ಲಕ್ಕಿಂತ ಮುಖ್ಯ ಒಳ್ಳೆಯ ಹುಡುಗ—ತುಂಬ ಒಳ್ಳೆಯ ಹುಡುಗ ! ಅಂಗೈಯಲ್ಲಿ ಇಟ್ಕೊಂಡು ಗೌರಾಳನ್ನ ನೋಡಿಕೋತಾನೆ. ಯಾಕೆ ಕೊಡಬಾರ್ದು ? ಅದೂ ಹುಡುಗ-ಹುಡುಗಿ ಒಪ್ಪಿರೋವಾಗ ?'—ಇದು ನಮ್ಮಪ್ಪನ ವಾಗ್ವಾದ.

'ಅದು ಸರಿ, ಆದ್ರೆ ಗೌರಾ ಮಾಡಿಕೋತಾಳಾ ? ನಂಗೇನೋ ಅನುಮಾನ ಅಂದ್ರೆ ; ಗೌರಾಗೆ ಬಡವರು ಅಂದ್ರೆ ತೀರ ತಿರಸ್ಕಾರ ; ಅಸಾಧ್ಯ ತಿರಸ್ಕಾರ !' ನಮ್ಮಮ್ಮನ ನಿಲವು.

'ನೀ ಹೇಳಿದ್ರೆ ಮಾಡ್ಕೋತಾಳೆ....'

'ನಾ ಹೇಗೆ ಹೇಳೋದು ?....'

'ಬೇಡ ಬಿಡು ; ಮಾಡ್ಕೋಬೇಡಾ ಅಂತ ಹೇಳದೇ ಇದ್ರೆ ಸರಿ....'

'ತಿಳಿದೂ ತಿಳಿದೂ ನಾ ಬಿದ್ದಿರೋ ಭಾವಿಗೇ ಮಗಳನ್ನ ನೂಕು ಅಂತೀರಾ ?'

'ನೀ ಯಾವ ಭಾವೀಲಿ ಬಿದ್ದಿದ್ದೀ ?'

'ಇಲ್ಲ....ಅರಮನೇಲಿ ಇದ್ದೀನಿ !....ನಿಮ್ಮ....ಕೀರಿಟಕ್ಕೆ ಚಾಮರ ಬೀಸ್ತಾ....'

'ಪಾಪ. ಅಪ್ಪ ಸುಮ್ಮನಾಗಿಬಿಡುತ್ತಿದ್ದರು ; ಅಂತೂ ನಮ್ಮ ಸಂಸಾರ ತುಂಬಾ ವಿಚಿತ್ರವಾಗಿತ್ತು, ಅರುಣ....'

ಇಂದೂ ಆಂಟಿ ಕಥೆಯನ್ನು ಮುಂದುವರಿಸಿದರು—'ನಮ್ಮಮ್ಮ-ನಮ್ಮಪ್ಪ, ಇಬ್ಬರೂ ಒಂದು ಬಗೆಯ ವಿಚಿತ್ರ ವ್ಯಕ್ತಿಗಳು ! ಅಂಥವರ ಹೊಟ್ಟೆಯಲ್ಲಿ ಹುಟ್ಟಿದ್ದು ನಮ್ಮ ಕರ್ಮ ! ಒಳ್ಳೆಯವರ ಒಡಲಲ್ಲಿ ಹುಟ್ಟುವುದಕ್ಕೂ ಕೇಳಿಕೊಂಡು ಬಂದಿರಬೇಕು ಎನ್ನುತ್ತಾರೆ ಹಿರಿಯರು....

'ಜೊತೆಗೆ, ಈ ಬಡತನ ಎನ್ನುವುದು ಬಲು ಕೆಟ್ಟದ್ದು ನೋಡು ! ಮಾನವೀಯತೆಯನ್ನೇ ಹಾಳುಮಾಡಿಬಿಡತ್ತೆ ! ಮಾನವನ ಅತ್ಯಮೂಲ್ಯ ಗುಣಗಳನ್ನ ಹಿಸುಕಿಬಿಡತ್ತೆ ! ಸ್ವಾಭಿಮಾನ, ಮರ್ಯಾದೆ, ಯಾವುದಕ್ಕೂ ದಾರಿದ್ರ್ಯದಲ್ಲಿ ಸ್ಥಾನವಿಲ್ಲ ; ಬಡವರಲ್ಲಿ ಆ ಗುಣಗಳು ಕಂಡುಬಂದರೆ ಬೆಲೆಯಿಲ್ಲ. ಎಲ್ಲಿ ಹೋದರೂ, ಏನು ಮಾಡಿದರೂ, ಹೇಗೆ ಇದ್ದರೂ, ಅವಹೇಳನವೇ ಗತಿ ! ಹೀಗಾಗಿ, ಬಡವ ನಿಜಕ್ಕೂ ಕೀಳಾಗಿ ವರ್ತಿಸುವುದೂ ಉಂಟು. ಬೇರೇನೂ ಬೇಡ, ನಮ್ಮ ಮನೆಯ ಸುದ್ದಿಯನ್ನೇ ಕೇಳು—

'ಎಲ್ಲಿ ಯಾರ ಮನೇಲಿ ವಾಲಗದ ಶಬ್ದ ಆಗಲಿ, ನಮ್ಮ ತಂದೆ ಹೋಗಲೇಬೇಕು ! ಅವರು ಕರೆಯಲಿ ಕರೆಯದಿರಲಿ, ಹಾಜರ್ ! ಹೋದ ಮೇಲೆ—ಅಲ್ಲಿ ಅವರಿಗೆ ಬೀಗರ ಉಪಚಾರವೇ ಆಗಬೇಕು !

‘ಎಲೆ ಹಾಕಾಯ್ತಾ ? ಇನ್ನೂ ಹೊತ್ತಾಗತ್ತಾ ?’ ಒಳ್ಳೇ ಆಫೀಸಿಗೆ ಹೋಗುವವರ ಹಾಗೆ ಚಡಪಡಿಸುತ್ತಿದ್ದರು ! ಇನ್ನು, ಎಲೆಯ ಮುಂದೆ ಕೂತಮೇಲೆ, ಅವರ ಆ ಅಟ್ಟಹಾಸವನ್ನು ನೋಡಬೇಕು !

‘ಇಲ್ಲಿ ಕೋಸಂಬರಿ ಇನ್ನೂ ಬಂದಿಲ್ಲ ! ಸಾರಿಗೆ ತುಪ್ಪ ಹಾಕಿಲ್ಲ ! ಚಿತ್ರಾನ್ನಕ್ಕೆ ಹುಳಿ ಸಾಲದು, ಪಾಯಸಕ್ಕೆ ಬೆಲ್ಲ ಜಾಸ್ತಿ, ಕೂಟಿಗೆ ಬೇಳೆ ಇಟ್ಟಿಲ್ಲ, ಪಲ್ಯಕ್ಕೆ ತೆಂಗಿನಕಾಯಿ ಹಾಕಿಲ್ಲ, ಮಜ್ಜಿಗೆಹುಳೀಲಿ ಮೊಸರಿಲ್ಲ, ಹುಳೀಲಿ ತರಕಾರಿ ಇಲ್ಲ ! ಮೊಸರುವಡೆ ಒಂದೇ ಬಡಿಸಿದರು, ಸಂಡಿಗೆ ಎರಡೇ ಹಾಕಿದರು ! ಲಾಡೂನ ಯಾರಾದ್ರೂ ದೊಡ್ಡವರು ಎತ್ಕೊಂಡು ಬನ್ನಿ ; ಖಾರಾಶೇವ ಯಾಕೆ ಇಷ್ಟು ಕಟುಕಲಾಯ್ತು ? ಮೊಸರು ಯಾಕೆ ಇಷ್ಟು ಹುಳಿಯಾಯ್ತು ?’ ಎಂದೆಲ್ಲಾ !

‘ರಾಮಚಂದ್ರಾ ! ರಂಗಣ್ಣನವರು (ನಮ್ಮ ತಂದೆ) ಮದುವೆಯ ಮಂಟಪದೊಳಗೆ ಕಾಲಿಟ್ಟರು ಎಂದರೆ ಸರಿ, ಒಳ್ಳೇ ಭೂತ ಕಂಡ ಹಾಗೆ ನಡುಗಿಬಿಡ್ತಿದ್ದರು—ಹೆಣ್ಣಿನ ಮನೆಯವರು ! ತಾವು ಅಚ್ಚುಕಟ್ಟಾಗಿ ಬಡಿಸಿಕೊಳ್ಳೋದಿರಲಿ, ಸುತ್ತ ಕೂತಿರೋವರಿಗೂ ಊರಲ್ಲಿಲ್ಲದ ಉಪಚಾರಾನ ಮಾಡಿ ಬಡಿಸೋದೇ !

‘ಅವರು ಯಾರೋ—ತಾವು ಯಾರೋ ! ಖರ್ಚು ಮಾಡೋವರಿಗೆ ಗೊತ್ತು ಆ ಕಷ್ಟ ! ಇಷ್ಟೆಲ್ಲಾ ಆದಮೇಲೆ—ದಕ್ಷಿಣೆಯನ್ನ ಮರೆಯ ಬಾರದು ! ಮರೆತು ಕೊಡಲಿಲ್ಲವೋ, ಹೊರಡುವವನೇ ಆಸಾಮಿ !

‘ಅವರಿಗೆ ಮಾತ್ರ ಒಳ್ಳೇ ದಪ್ಪ ತೆಂಗಿನಕಾಯಿಯನ್ನೇ ಆರಿಸಿ ಕೊಡ ಬೇಕು ! ಏನಾದ್ರೂ ಚಿಕ್ಕಪುಟ್ಟ ತೆಂಗಿನ ಕಾಯಿ–ವೀಳ್ಯದೆಲೆ ಅವರ ಪಾಲಿಗೆ ಬಂದಿತೋ, ಚಪ್ಪರಕ್ಕೆ ಚಪ್ಪರವೇ ಬಿದ್ದು ಹೋಗೋ ಹಾಗೆ ಗಂಟಲೆತ್ತುತ್ತಿದ್ದರು.

‘ಏನಮ್ಮಾ ಪಾತು, ಇಷ್ಟೆಲ್ಲಾ ಖರ್ಚುಮಾಡಿ ಮದುವೆ ಮಾಡಿದೆ ! ಒಂದು ಒಳ್ಳೆ ತೆಂಗಿನಕಾಯನ್ನ ತಂದು ಹಾಕಬಾರದಿತ್ತಾ ? ಅಷ್ಟು ದಾರಿದ್ರ್ಯನಾ ನಿಂಗೆ! ಛೀ, ಕೊಟ್ಟರೆ ಒಳ್ಳೇದು ಕೊಡಬೇಕು; ಇಲ್ಲದಿದ್ರೆ ಸುಮ್ಮನಿರಬೇಕು ! ಈ ಶೆಟ್ಟಿಬುದ್ಧಿ ಯಾಕೇಂತ ? ನೀ ಕೊಟ್ಟ ಕಾಯನ್ನ ಸಂಜೆ ರಾಯರ ಗುಡೀಗೆ ತಗೊಂಡು ಹೋಗಿ ಒಡೀಬೇಕು—ನಿಮಗೆಲ್ಲ

ಒಳ್ಳೇದಾಗಲಿ ಅಂತ, ಕೇಳ್ಕೋಬೇಕು ಅಂತಿದ್ದೆ. ಈಗ ನೋಡಿದ್ರೆ....ನಂಗೆ ಒಂದು ಮಾತ್ನ ಹೇಳಿದ್ರೂ ಆಗ್ತಿತ್ತು ! ತಕ್ಷಣ ತಿಪಟೂರಿಗೆ ಓಡಿಹೋಗಿ, ಒಂದು ಲಾರಿ ಭರ್ತಿ ಒಳ್ಳೆ ಭರ್ಜರಿ ಕಾಯನ್ನ ತುಂಬಿಕೊಂಡು ಬಂದು, ನಿನ್ನ ಕಾಲ ಬಳಿ ಕೆಡವ್ತಿದ್ದೆ!....'

'ಹಾಗೆ, ಹೀಗೇ, ಎಂದು ! ಪಾಪ, ಮಣೆಯ ಮೇಲೆ—ಅಳಿಯನ ಪಕ್ಕದಲ್ಲಿ ಠೀವಿಯಿಂದ ಕುಳಿತಿರುತ್ತಿದ್ದ ಪಾತಮ್ಮ—ಅದೇ ಹೆಣ್ಣಿನ ತಾಯಿ, ಅವಮಾನದಿಂದ ತಲೆತಗ್ಗಿಸಿಕೊಂಡು ಬಿಡುತ್ತಿದ್ದರು.

'ಹೋಗಲಿ—ನವ್ಮ ಅಪ್ಪ ಧಾರೆಯಂದು ಮಾತ್ರ ಮದುವೆ ಮನೆಗೆ ಧಾಳಿಯಿಡುತ್ತಿದ್ದರೋ? ಇಲ್ಲ—ಚಪ್ಪರದ ಮೊದಲನೆಯ ಕಂಬವನ್ನ ನೆಟ್ಟು ಕೊನೆಯದನ್ನ ಬಿಚ್ಚುವವರೆಗೂ ಅವರದೇ ಓಡಿಯಾಟ! ಸಾಲದ್ದಕ್ಕೆ ಬೀಗರ ಮೇಲ್ವಿಚಾರಣೇನ ತಾವಾಗಿ ವಹಿಸಿಕೊಳ್ಳೋದು ಬೇರೆ ! ಆ ಬೀಗರು—ನೆಂಟರು, ಹೆಣ್ಣಿನ ಕಡೆಯವರು, ಎಲ್ಲರೂ ಓಡಿಹೋಗುವುದು ಬಾಕಿ !

'ಈ ಅಪ್ಪನ ಜೊತೆಗೆ ನಮ್ಮಮ್ಮನೂ ಸೇರುವುದೇ ! ನಮ್ಮಮ್ಮನ ಹೆಸರು ರತ್ನಮ್ಮ ಎಂದು. ಅವರ ನಿಜವಾದ ಹೆಸರು ಪುಟ್ಟಮ್ಮ 'ರತ್ನ ಅನ್ನೋ ಹೆಸರನ್ನ ಇಟ್ಟುಕೊಂಡವರೆಲ್ಲಾ ಭಾರಿಯಾಗ್ತಾರಂತೆ ಕಣೇ ! ನಿಂಗೂ ಹಾಗೇ ಆಗಲಿ....' ಎಂದು ಹೊಸ ನಾಮಕರಣ ಮಾಡಿದ ನಮ್ಮಪ್ಪ—ಕಾದರು....ಕಾದರು....

'ರತ್ನ ಆಕಾರದಲ್ಲಿ ಭಾರಿಯಾದಳೇ ಹೊರತು, ಹಣದಲ್ಲಿ ಆಗಲೇ ಇಲ್ಲ ! ಪಾಪ, ಆಕೆಯೂ ತುಂಬಾ ಮಹತ್ವಾಕಾಂಕ್ಷಿ ! ಹೃದಯದ ತುಂಬಾ ಅದೇನೇನು ಆಸೆಗಳು ನೆರೆದಿದ್ದವೋ, ನಿರಾಶೆಯ ರಾಶಿ ಅದೆಷ್ಟೊಂದು ಎತ್ತರ ಬೆಳೆದಿತ್ತೋ, ವಕ್ರಹಾದಿಯಲ್ಲಿ ಮನಸ್ಸನ್ನ ಇಳಿಬಿಟ್ಟಳು !

'ಮದುವೆಮನೆಯ ಸಮಾರಂಭಗಳ ಯಾವುದಕ್ಕಾದರೂ ನಮ್ಮಮ್ಮ ಬಂದರು ಎಂದರೆ ಸರಿ, ಹೆಂಗಳೆಯರೆಲ್ಲಾ ತಕ್ಷಣ ಹುಷಾರಾಗುತ್ತಿದ್ದರು ! ಆದರೆ ನಮ್ಮಮ್ಮ ಕೇಳಬೇಕಲ್ಲ? ತರಕಾರಿ ಕುಯ್ಯುವುದು, ಗೋಮೆ ಹಚ್ಚುವುದು, ಹಸೆಯ ಬಳಿ ಗುಡಿಸಿ ರಂಗೋಲಿ ಇಟ್ಟು, ಮಣೆ ಹಾಕುವುದು—ವಧೂವರರಿಗೆ ನಿವಾಳಿಸಿ, ಎತ್ತರ–ಕೆಳಗಿನ ಧ್ವನಿಯಲ್ಲಿ ಹಾಡು ಹೇಳುವುದು—ಎಲ್ಲವೂ ತನ್ನದೇ ಕೆಲಸ ಎನ್ನುವಂತೆ ಮಾಡಿಬಿಡುತ್ತಿದ್ದರು. ಕರೆಯಲಿ

ಬಿಡಲಿ, ಗಂಡನಂತೆ ಎಲ್ಲ ಮದುವೆಮನೆಗಳಲ್ಲೂ ಹಾಜರ್ !

'ತಿಳಿದ ಮನೆಗಳಲ್ಲೇನೋ ಸರಿ ; ತಿಳಿಯದ ಮನೆಗಳಲ್ಲಿ ? ಗಂಡಿನವರ ಕಡೆ ಎಂದು ಹೆಣ್ಣಿನವರು—ಹೆಣ್ಣಿನ ಕಡೆ ಎಂದು ಗಂಡಿನವರು ! ಎರಡೂ ಕಡೆಯಲ್ಲೂ ಮರ್ಯಾದೆ! ಕೊನೆಗೆ—ಈ ಗಂಡಹೆಂಡತಿ ಹೊರಟು ಹೋದಮೇಲೆ, ಯಾವುದಾದರೊಂದು ಸಾಮಾನು ನಾಪತ್ತೆ ! ಗುಲ್ಲೋ ಗುಲ್ಲು ! ಆದರೆ ಅಷ್ಟು ದೊಡ್ಡ ಗುಂಪಿನಲ್ಲಿ ಯಾರನ್ನೆಂದು ಅನುಮಾನಿಸುವುದು ?

'ಅನ್ಯಾಯ !—ಅದು ಹೇಗೋ ಏನೋ, ಈ ನಮ್ಮಮ್ಮನಿಗೆ ಈ ಕೆಟ್ಟ ಚಾಳಿ ಮೊದಲಿಂದ ಬಂದುಬಿಟ್ಟಿತ್ತು! ನಮ್ಮ ಮನೆಗೆ ಯಾರಾದ್ರೂ ಬಂದಿಳಿದರೆ ಸರಿ, ಅವರಿಗೆ ತಿಳಿಯದಂತೆ, ಅವರ ಪೆಟ್ಟಿಗೆಯಿಂದ ದುಡ್ಡು ಹಾರಿಸಿಬಿಡುತ್ತಿದ್ದರು. ಅವರ ಹಣದಿಂದ ಅವರಿಗೇ ಬಟಾಣಿಕೂಟು ಮಾಡಿ ಹಾಕಿ ಉಪಚರಿಸುತ್ತಿದ್ದರು ! ರವಿಕೆಕಣ ಕೊಟ್ಟು ಆದರಿಸುತ್ತಿದ್ದರು !... ಇದರಿಂದಾಗಿ ನೆಂಟರು ಬರುವುದನ್ನೇ ನಿಲ್ಲಿಸಿಬಿಟ್ಟರು ; ಅಥವಾ ಬಂದರೂ, ವೈಟಿಂಗ್ ರೂಮ್ನಲ್ಲಿ ಸಾಮಾನುಗಳನ್ನ ಇಟ್ಟು, ಬರಿಗೈಯಲ್ಲಿ ಬಂದು ಹೋಗುತ್ತಿದ್ದರು !

'ನಮ್ಮಮ್ಮ ಎಲ್ಲಿ ಯಾರ ಮನೆಗೆ ಹೋದರೂ, ಏನಾದರೊಂದನ್ನ ಅವರ ಮನೆಯಿಂದ ಕದ್ದು ತರಲೇಬೇಕು ! ಅದು ಇಂತಹುದೇ ಎಂದಿಲ್ಲ ! ಮದುವೆ ಮನೆಯಲ್ಲಾದರೆ ಒಡವೆ, ಬೆಳ್ಳಿ ಪಾತ್ರೆ, ಇತ್ಯಾದಿ ; ಬರಿಯ ದಿನಗಳಲ್ಲಿ ? ಮಾಮೂಲು ಹೋಗಿಬರುವ ಮನೆಗಳಲ್ಲಿ ?

'ಯಾರೂ ಅವರನ್ನು 'ಮನೆಗೆ ಬನ್ನಿ' ಎಂದು ಉಪಚಾರಕ್ಕೆ ಸಹ ಕರೆಯುತ್ತಿರಲಿಲ್ಲ. ಅರಶಿನ–ಕುಂಕುಮಕ್ಕೆ ಕೂಡ ತಪ್ಪಿಸುತ್ತಿದ್ದರು.

'ನಮ್ಮ ಮನೆಯಲ್ಲವೇ ? ಕರೆಯಬೇಕೆ ?' ಅಮ್ಮನೇ ಹೋಗೇ ಹೋಗುತ್ತಿದ್ದರು.

ಆಗ ಮನೆಯವರು ಸಾಧ್ಯವಾದಷ್ಟೂ ಅವರನ್ನು ಕೋಣೆಯೊಳಗೆ ಬಿಡುತ್ತಿರಲಿಲ್ಲ. ಆದರೂ....ಎಷ್ಟೂಂತ ಎತ್ತಿಡುವುದು ? ಕಣ್ಣಿಗೆ ಕಾಣದಂತೆ ಮುಚ್ಚಿಡುವುದು ? ಕಣ್ಣೇ ಕಾವಲಾಗಿ ರತ್ನಮ್ಮನ ಹಿಂದೆಮುಂದೆ ಸುತ್ತಾಡುವುದು ?

'ಏನೂ ಸಿಗದಿದ್ದಾಗ, ಕೊನೆಗೆ ಹೊರಟುಬರುವಾಗ, ಅವರ ಮನೆಯ ಬಾಳೆಯ ಗಿಡದ ನಾರನ್ನಾದ್ರೂ ಕಿತ್ತು ತರುವುದೇ—ಅಮ್ಮ? ಉಪಯೋಗಿಸುವುದು ಅಷ್ಟರಲ್ಲೇ ಇತ್ತು ! ಆದರೆ ಇನ್ನೊಬ್ಬರ ಸ್ವತ್ತನ್ನು ಹೀಗೆ ಕದ್ದು ತರೋದು ಒಂದು ರುಚಿ !

ಮತ್ತೇನೂ ಕಣ್ಣಿಗೆ ಬೀಳದಿದ್ದಲ್ಲಿ, ಹಜಾರದಲ್ಲಿ ಮೂಲೆಗುಂಪಾಗಿ ಬಿದ್ದಿದ್ದ, ಕೆಲಸಕ್ಕೆ ಬಾರದ, ಹುಣಿಸೇಬಿಜವನ್ನೇ ತಮಗೇ ಅರಿಯದಂತೆ ಕೈಚೀಲದಲ್ಲಿ ತುರುಕುತ್ತಿದ್ದರು ! ಅವರು ಹೊರಟು ನಿಲ್ಲಬೇಕು—ಅದೇ ಸುಳಿವು ! ತಕ್ಷಣ ಎಲ್ಲೆಲ್ಲೂ ಗುಸುಗುಸು ಆರಂಭವಾಗುತ್ತಿತ್ತು—

'ಓ ! ಏನೋ ಆಯ್ತು—ಏನೋ ಹೋಯ್ತು!' ಎಂದು.

'ಬರೀಗೈಯಲ್ಲಿ ಹೋದ್ರೆ ರಾತ್ರಿ ನಿದ್ರೇನೇ ಬರಲ್ಲ—ಸ್ಮಗ್ಲರ್ ರತ್ನಮ್ಮಂಗೆ' ಎಂದು ಎಲ್ಲರೂ ಆಡಿಕೊಳ್ಳುತ್ತಿದ್ದರು

'ಹೌದು, 'ಸ್ಮಗ್ಲರ್ ರತ್ನಮ್ಮ' ಎಂತಲೇ ನಮ್ಮಮ್ಮನ ಹೆಸರು !

'ಇನ್ನು ತಂದೆಯದೋ', 'ಮದುವೆಮನೆ ರಂಗಣ್ಣ' ಎಂದು ! ಸುಮ್ಮನೆ 'ರಂಗಣ್ಣ' ಎಂದರೆ ಯಾರಿಗೂ ಗೊತ್ತಾಗುತ್ತಿರಲಿಲ್ಲ. ಹೇಗೆ ತಿಳಿಯುತ್ತೆ, ಹೇಳು ? ನೂರೆಂಟು ರಂಗಣ್ಣಗಳಿಲ್ಲವೇ ? ರಂಗಣ್ಣ, ಶಾಮಣ್ಣ, ರಾಮಣ್ಣ, ಎಲ್ಲಾ ಸರ್ವೇಸಾಮಾನ್ಯ ಹೆಸರುಗಳು. ಮನೆಮನೆಯಲ್ಲೂ ಒಂದೊಂದು ರಂಗಣ್ಣ—ಅದಕ್ಕೇ ಈ ಟೈಟಲ್ !

'ನೂಲಿನಂತೆ ಸೀರೆ' ಎನ್ನುವುದು ಅಕ್ಷರಶಃ ನಿಜ ! ತನಗೇ ತಿಳಿಯದಂತೆ ನಮ್ಮಕ್ಕನೂ ಅಮ್ಮನ ಈ ಕೆಟ್ಟ ಚಾಳಿಯನ್ನು ಕಲಿತಳು. ಕೊನೆಗೆ ಅಮ್ಮನನ್ನೂ ಮೀರಿಸಿದಳು !

'ಈ ಚಂದ್ರೂ ಅಂಕಲ್ ನಂಗೆ ಆಗಾಗ್ಗೆ ಬುದ್ಧಿವಾದ ಹೇಳದಿದ್ರೆ, ನಾನೂ ಅದೇ ದಾರಿ ಹಿಡಿಯುತ್ತಿದ್ದೆನೋ ಏನೋ—ಸದ್ಯ, ನಂಗೆ ಆ ದುರಭ್ಯಾಸ ಬರಲಿಲ್ಲ ! ನಮ್ಮಮ್ಮ ಎಲ್ಲಿಗೆ ಹೋಗಬೇಕಾದ್ರೂ ಬರಿಗಾಲಿನಲ್ಲಿ ಹೋಗುತ್ತಿದ್ದರು. ಹಿಂತಿರುಗಿದಾಗ ಚಪ್ಪಲಿ ಇರ್ತಿತ್ತು ಕಾಲಲ್ಲಿ! ಮಾತನಾಡ್ತಾ, ಮಾತನಾಡ್ತಾ ಅವರ ಇವರ ಚಪ್ಪಲೀನ—ಹಾಗೇ ಮರೆತು, ಹಾಕ್ಕೊಂಡು ಬರೋದು ಸಹಜ ತಾನೇ ?

'ತರೋದು ತರ್ತೀ; ಹರಕಲು ಚಪ್ಪಲೀನ ಯಾಕೆ ಹಾಕ್ಕೊಂಡು

ಬರ್ತೀ ಅಂತೀನಿ ! ಸ್ವಲ್ಪ ಹುಡುಕಿ ಹೊಸದನ್ನ ಹಾಕ್ಕೊಂಡು ಬರಬಾರ್ದೆ?'

ಮಗಳು ತಾಯಿಗೆ ಹೇಳಿಕೊಟ್ಟಳು. ಹೀಗೆ ಬರಬರುತ್ತಾ ಎಲ್ಲಾ ಜಾಸ್ತಿಯಾಯಿತು ಚಂದ್ರೂ ಅಂಕಲ್‌ಗೆ ನಮ್ಮ ಮನೆಯ ವಿಷಯವೆಲ್ಲ ಗೊತ್ತಿತ್ತು. ಚಿಕ್ಕಂದಿನಿಂದ ನೋಡಿದ್ದವರು ತಾನೆ? ಆದರೂ ಅವರು ಗೌರಾಳನ್ನ ತುಂಬಾ ಪ್ರೀತಿಸುತ್ತಿದ್ದರು ; ಅದೇ ಆಶ್ಚರ್ಯ !

'ಮದುವೆ ಆದ ತಕ್ಷಣ ಈ ಕೆಟ್ಟ ಚಾಳಿಯನ್ನ ಬಿಡಿಸಿ ತಿದ್ದಿದರಾಯ್ತು ; ಏನು ಮಹಾ !' ಅಂದುಕೊಂಡಿದ್ದರಂತೆ.

ಗೌರಾನೂ ಅವರನ್ನು ಮನಸಾರ ಪ್ರೀತಿಸುತ್ತಿದ್ದಳು. ಅವರಿಬ್ಬರಿಗೂ ಮದುವೆ ಆಗಿದ್ರೆ ಚೆನ್ನಾಗಿರುತ್ತಿತ್ತು ; ಅನ್ಯಾಯ, ಮನೆಯಲ್ಲಿನ ಹುಳುಕು ಹೊರಗೆ ಹೋಗುತ್ತಿರಲಿಲ್ಲ. ಉಹು, ಹೋಗುವುದಕ್ಕೆ ಚಂದ್ರೂ ಅಂಕಲ್ ಖಂಡಿತ ಆಸ್ಪದ ಕೊಡುತ್ತಿರಲಿಲ್ಲ. ಒಳಗೇ—ಮೂರನೆಯವರಿಗೆ ತಿಳಿಯದಂತೆ, ಚಿವುಟಿ ಹಾಕ್ತಿದ್ದು ಅವಳಲ್ಲಿದ್ದ ಒಳ್ಳೆಯ ಗುಣಗಳೆಲ್ಲ ಎತ್ತಿಕಾಣುವಂತೆ—ಶೋಭಿಸುವಂತೆ ಮಾಡ್ತಿದ್ದ !

ನಿಜಕ್ಕೂ ಅಷ್ಟೊಂದು ಶಕ್ತಿಯಿತ್ತು ಅವನಲ್ಲಿ ! ಅಷ್ಟೊಂದು ಪ್ರಭಾವವಿತ್ತು ಅವಳ ಮೇಲೆ ! ಛೇ, ಹಾಳು ವಿಧಿ....ಅದೊಂದಿದೆಯಲ್ಲಾ....ಕೆಟ್ಟ ಶಕ್ತಿ ನಡುವೆ ತಲೆಹಾಕಿ ಏನೇನೋ ಮಾಡಿಬಿಟ್ಟಿತು !

'ಚಂದ್ರೂ ಅಂಕಲ್‌ಗೆ ಒಬ್ಬ ಪ್ರಾಣಸ್ನೇಹಿತ ಇದ್ದ ; ನಾಣಿ ಎಂದು ಹೆಸರು. ಅಸಾಧ್ಯ ಬುದ್ಧಿವಂತ ಹುಡುಗ. ನೌಕಾಪಡೆಯಲ್ಲಿ ಸೊಗಸಾದ ಕೆಲಸದಲ್ಲಿದ್ದ.

'ಒಂದು ಬಾರಿ ಚಂದ್ರೂ ಅಂಕಲ್ ಜೊತೆಯಲ್ಲಿ ಮನೆಗೆ ಬಂದಿದ್ದ ಆತ ಗೌರಾನನ್ನು ನೋಡಿದ—ಏಕೋ ಏನೋ, ಅವಳನ್ನು ಕಂಡ ತಕ್ಷಣ ವಿಶ್ವಾಸ ಹತ್ತಿಕೊಂಡು ಬಂದುಬಿಟ್ಟಿತು. ಅದಕ್ಕೆ ನಿಮ್ಮ ಕಾನ್ವೆಂಟ್ ಭಾಷೆಯಲ್ಲಿ 'ಲವ್ ಎಟ್ ಫಸ್ಟ್ ಸೈಟ್' ಅಂತೀರಿ....ಅಲ್ಲವೇ ?

'ನಾವು ಋಣಾನುಬಂಧ ; ಪೂರ್ವಜನ್ಮದ ವಾಸನೆ' ಅಂತೀವಿ

'ಗೌರಾಗೇನೋ ಚಂದ್ರೂನ ಮದುವೆ ಮಾಡ್ಕೋಬೇಕು ಎಂತಿತ್ತು. ಆದರೆ ಅಮ್ಮ, ನಾಣಿಯ ಅಂತಸ್ತು–ಹಣಕ್ಕೆ ಮರುಳಾದರು. ಸಹಜವೇ ಪಾಪ, ನಿನ್ನ ಮಮ್ಮಿ ಏನೆಂದ್ರೂ ತುಂಬಾ ಚಿಕ್ಕವಳು. ಎಡವಟ್ಟು ವಯಸ್ಸು

—ಚಿಕ್ಕವಳಿಗೆ ಚಿಕ್ಕವಳಲ್ಲ, ದೊಡ್ಡವಳಿಗೆ ದೊಡ್ಡವಳಲ್ಲ !

'ತಾಯಿಯ ನಿರ್ಧಾರವೇ ಮೇಲಾಯಿತು. ಚಂದ್ರುವಿಗೆ ಹೃದಯಾಘಾತವಾದಂತಾಯಿತು. ಪಾಪ, ಅವರಿಗೆ ಈ ಮದುವೆ ಸುಳಿವೇ ಇರಲಿಲ್ಲ ! ಬೇಸಿಗೆಯ ರಜಕ್ಕೆ ಚಿಕ್ಕಪ್ಪನ ಮನೆಗೆ ಹೋಗಿದ್ದವರು—ಲಗ್ನಪತ್ರಿಕೆ ಕಂಡ ತಕ್ಷಣ ಧಾವಿಸಿ ಬಂದರು ! ಈ ವೇಳೆಗೆ ಚಪ್ಪರ ಭೂತಾಕಾರವಾಗಿ ನಿಂತಿತ್ತು! ಮದುವೆ ಮನೆಯ ಲಕ್ಷಣಗಳೆಲ್ಲ ನಮ್ಮ ಮನೆಗೆ ಬಂದಾಗಿತ್ತು !

'ಗೌರಾ, ನೀನು ಹೀಗೆ ಮಾಡಬಹುದಾ ?' ಕಷ್ಟಪಟ್ಟು ಒಬ್ಬಳನ್ನೇ ಸಂದರ್ಶಿಸಿ, ಗದರಿಸಿಕೊಂಡಾಗ, ಅವಳಾದರೂ ತಿಳಿದುಕೊಂಡು ಸಮಾಧಾನವಾಗಿ ಮಾತನಾಡಬಹುದಿತ್ತು. ಏನೆಂದರೂ ತಪ್ಪು ಅವಳದಲ್ಲವೇ ?

'ನಂಗೆ ಇಷ್ಟ ಬಂದವನನ್ನ ನಾ ಮದುವೆ ಮಾಡ್ಕೋತೀನಿ ; ನೀ ಯಾರು ಕೇಳೋದಿಕ್ಕೆ ?' ಎಂದು ಒರಟಾಗಿ ಬದಲಿತ್ತಳು. ಮುಖ ತಿರುಗಿಸಿಕೊಂಡು ಹೊರಟುಹೋದಳು. ಚಂದ್ರೂವಿನ ಮುಖ ಚಿಕ್ಕದಾಯಿತು. ಆತ ಮನಸ್ಸುಮಾಡಿದ್ದರೆ ಒಂದೇ ಏಟಿಗೆ ಮದುವೆಯನ್ನ ನಿಲ್ಲಿಸಬಹುದಿತ್ತು —ನಾಣಿಯ ಕಿವಿಯಲ್ಲಿ ನಮ್ಮ ಮನೆಯ ಹುಳುಕುಗಳನ್ನೆಲ್ಲ ಊದಿ ! ಆದರೆ ಹಾಗೆ ಮಾಡಲಿಲ್ಲ ! ಗೌರಾ ನಾಣಿಯ ಕೈಹಿಡಿದಳು. ಮದುವೆಯಾದ ತಕ್ಷಣ ನಾಣಿ ಗೌರಾಳನ್ನು ಕರೆದುಕೊಂಡು ಇಂಡಿಯಾ ಪೂರ್ತಿ ಸುತ್ತಿಸಿದ. ಒಲವಿನಿಂದ 'ಸಿಂಧು' ಎಂದು ಕರೆದ ; ಕಾರಣ—ಅವನಿಗೆ ಸಮುದ್ರ, ನದಿ, ಸಾಗರ ಎಂದರೆ ಪಂಚಪ್ರಾಣ ! ಎಷ್ಟಾದರೂ ಅದರ ಮೇಲೆಯೇ ಮೂರು ಹೊತ್ತೂ ಇರುವವನಲ್ಲವೇ ? ಅವಳ ಕಣ್ಣಿಗೆ ಬಿದ್ದ ಬಟ್ಟೆಗಳನ್ನೆಲ್ಲಾ ತೆಗೆದುಕೊಟ್ಟ ; ಅಪೇಕ್ಷಿಸಿದ ಸಾಮಾನುಗಳನ್ನೆಲ್ಲಾ ಕೊಂಡುತಂದ ; ಇಷ್ಟಪಟ್ಟದ್ದನ್ನೆಲ್ಲಾ ರಾಶಿರಾಶಿ ತಂದುಹಾಕಿದ. ಅವಳನ್ನು ಆಪಾದಮಸ್ತಕ ಒಡವೆಗಳಿಂದ ಸಿಂಗರಿಸಿದ.

'ಒಂದಾನೊಂದು ಕಾಲದಲ್ಲಿ ಎಲ್ಲದಕ್ಕೂ ಬಾಯಿಬಾಯಿ ಬಿಡುತ್ತಿದ್ದ ಸಿಂಧು ಧಿಡೀರನೆ ರಾಣಿಯಂತೆ ಮೆರೆದಳು ! ನವಿಲಿನಂತೆ ಕುಣಿದಳು ! ಹಠಾತ್ತನೆ ಅದೃಷ್ಟ ಒಲಿದರೆ, ಅಹಂಕಾರ ಬಂದುಬಿಡುತ್ತದಂತೆ. ನಮ್ಮಕ್ಕನಿಗೆ ಹಾಗೇ ಆಯಿತು. ಹೇಳಬಾರದು—ನನ್ನನ್ನು ಕಣ್ಣೆತ್ತಿ ನೋಡುತ್ತಿರಲಿಲ್ಲ ! ಅವಳು ಆಡಿದ್ದೆ ಆಟ—ಲಂಗಿರಲಿಲ್ಲ, ಲಗಾಮಿರಲಿಲ್ಲ! ಭಾವನೋ—

ಅದ್ಯಾವ ಮಂಕುಬೂದಿ ಎರಚಿದ್ದಳೋ, ಅವಳು ಹೇಳಿದ ಹಾಗೆ ಕೇಳು ತ್ತಿದ್ದ.

'ಅತ್ತ ಅವನ ಪಕ್ಕ ಯಾರೂ ಹಿರಿಯರಿರಲಿಲ್ಲ ; ತಾಯಿ, ತಂದೆ, ಅಜ್ಜ, ಅಜ್ಜಿ, ಎಲ್ಲ ಒಟ್ಟಿಗೆ, ಮಾತನಾಡಿಕೊಂಡ ಹಾಗೆ, ಪರಲೋಕದ ಹಾದಿ ಹಿಡಿದಿದ್ದರು. ಸರಿ ತಗೋ !

'ನಾಣಿ ನೌಕಾಪಡೆಯಲ್ಲಿ ಕೆಲಸಕ್ಕಿದ್ದ ಎಂದು ಹೇಳಲಿಲ್ಲವೇ ? ಮುಕ್ಕಾಲುವಾಸಿ ಸಮುದ್ರದ ಮೇಲೆಯೇ ಇರುತ್ತಿದ್ದ. ಕೆಲವು ತಿಂಗಳು ಮಾತ್ರ ತನ್ನ ಹೆಂಡತಿಯ ಬಳಿ.

'ಸಿಂಧು ಬೆಂಗಳೂರಿನಲ್ಲೇ ಇರುವುದಕ್ಕೆ ಆಶಿಸಿದಳು. ಸರಿ, ಅವಳಿಗೆ ಒಂದು ಮನೆ ತಕ್ಕೊಟ್ಟ ; ಮನಸ್ಸಿಗೆ ಬಂದಂತೆ ಅಲಂಕರಿಸಿದಳು. ಅವನ ಅಂತಸ್ತಿಗೆ ಹೊಂದುವಂತೆ ಎಲ್ಲಾ ವಿಷಯಗಳಲ್ಲೂ ನಡೆದುಕೊಂಡಳು—ಒಂದು ವಿಷಯ ಬಿಟ್ಟು !

'ಅವಳಿಗೆ ಒಂದು ಕೆಟ್ಟ ಚಾಳಿ ಇತ್ತು ಎಂದು ಹೇಳಿದ್ದೆನಲ್ಲಾ, ಅದು ಬೆಳೆದುಕೊಂಡು ಬಂದಿತ್ತು. ಯಶಸ್ವಿಯಾದಂತೆಲ್ಲ ಭೂತಾಕಾರ ತಾಳಿತು ! ಸ್ನೇಹಿತೆಯರೆಲ್ಲಾ ಹೆದರಲಾರಂಭಿಸಿದರು—ಅವಳನ್ನು ಮನೆಗೆ ಕರೆಯಲು, ಜೊತೆಗೆ ಕರೆದುಕೊಂಡು ಹೋಗಲು ! ಕೊನೆಗೆ ಅವಳ ಮನೆಗೆ ಬರಲು ಸಹ ! ಕಂಡಿದ್ದೆಲ್ಲಾ ಬೇಕವಳಿಗೆ ! ಅದು ಯಾರದಾದರಾಗಿರಲಿ ! ಒಳ್ಳೇ ಎಳೇ ಮಗುವಿನಂತೆ ಗೋರುತ್ತಿದ್ದಳು !

'ನಾಣಿಗೆ ಒಂದು ಮಾತನ್ನ ತಿಳಿಸಿದ್ದಲ್ಲಿ, ಹತೋಟಿಗೆ ಬರುತ್ತಿತ್ತೇನೋ ? ಆದರೆ....ತಿಳಿಸುವವರು ಯಾರು ? ನಾಣಿ ನಂಬಿದನೋ ಸರಿ —ಇಲ್ಲವೋ ?

'ಸಿಂಧುವಿನ ಹತ್ತಿರ ಇಲ್ಲದಿರುವ ಸಾಮಾನೇ ಇರಲಿಲ್ಲ. ಆದರೂ ಜಗತ್ತಿನಲ್ಲಿರುವುದನ್ನೆಲ್ಲಾ ಹೊಂದಿಸಿಕೊಡುವುದಕ್ಕೆ ಸಾಧ್ಯವೇ, ನೀನೇ ಹೇಳು, ಅರುಣ ? ಎಂಥವರಿಗೂ ಎಟುಕದ ಮಾತು ! ಹಾಗಿರುವಲ್ಲಿ ತನ್ನಲ್ಲಿ ಇಲ್ಲದ ಯಾವುದಾದರೊಂದು ಸಾಮಾನನ್ನು ಬೇರೊಬ್ಬರ ಹತ್ತಿರ ಕಂಡ ತಕ್ಷಣ ಹುಚ್ಚಿಯಂತಾಗಿಬಿಡುವುದೇ ! ಮರೆತು ಕೂಡಾ ಒಂದು ಕರವಸ್ತ್ರವನ್ನ ತೋರಿಸುತ್ತಿರಲಿಲ್ಲ ಸ್ನೇಹಿತೆಯರು !

'ಮಿಸೆಸ್ ನಾಣಿಗೆ ಕ್ಲೆಪ್ಟಮೇನಿಯಾ! (Cleptamania)' ಪಿಸು ಗುಟ್ಟುತ್ತಿದ್ದರು.

'ಹೌದು ಅರುಣ, ಬಡವರು ಕದ್ದರೆ ಕಳ್ಳರು ; ಅದೇ ಶ್ರೀಮಂತರು ಕದ್ದರೆ ಅದೊಂದು ಹಿಡಿದು ತಿನ್ನುವ ಖಾಯಿಲೆ ; ಕ್ಲೆಪ್ಟಮೇನಿಯಾ ಎಂಬ ಉದ್ದ ಹೆಸರು.

'ಆ ಸಂಜೆ—ನನಗಿನ್ನೂ ಚೆನ್ನಾಗಿ ನೆನಪಿದೆ. ನಾನವರಲ್ಲಿ ತಂಗಿದ್ದೆ. ಅದೇ ತಾನೆ ಊರಿನಿಂದ ಹಿಂತಿರುಗಿದ ನಾಣಿ ಒಂದು ಪಾರ್ಸಲ್ಲನ್ನು ಸಿಂಧು ವಿನ ಕೈಯಲ್ಲಿಟ್ಟು ಸಲಾಂ ಹೊಡೆದು ನಿಂತ.

'ಏನದು—ಸಾರ್ ?' ಅವಳು ನಗುತ್ತಾ ಕೇಳಿದಳು.

'ಬಿಚ್ಚಿ ನೋಡಿ, ಮೇಡಂ.'

'ಕಪ್ಪೆಯೋ-ಇಲಿಯೋ, ಏನಾದ್ರೂ ಹುಡುಗಾಟ ಮಾಡಿಬಿಟ್ಟಿ ದ್ದೀರೋ ?' ಅಳುಕಳುಕುತ್ತಲೇ ಬಿಚ್ಚಿ ನೋಡಿದ ಸಿಂಧು, ಉಸಿರು ಬಿಗಿ ಹಿಡಿದು ನಿಂತುಬಿಟ್ಟಳು.

'ಇಲ್ಲ—ಅಂತಹ ಅಮೋಘ ಸೀರೆಯನ್ನ ನಾನೂ ಎಲ್ಲೂ ನೋಡಿರ ಲಿಲ್ಲ ! ಬಿಳೀ ಬೆನಾರಿಸ್ ಪೀತಾಂಬರ—ನಡುನಡುವೆ ಪುಟ್ಟಪುಟ್ಟ ಜರಿ ಬುಟ್ಟಾ; ಸೆರಗಲ್ಲಿ, ಕಲಾವಂತಿಕೆಯಿಂದ ಬಿಡಿಸಿದಂತಹ ಹಂಸಗಳ ಸಮೂಹ! ತೇಲುತ್ತ ತೇಲುತ್ತ, ಸೆರಗಿನಿಂದ ಎದ್ದುಬರುವಂತಿದ್ದವು ಅವು !

'ಅಂದು ಅವರ ವಿವಾಹವಾದ ಸುದಿನ. ಜ್ಞಾಪಕದಲ್ಲಿಟ್ಟುಕೊಂಡು, ಈ ಉಡುಗೊರೆ ತಂದುಕೊಟ್ಟಿದ್ದ ನಾಣಿ. ಅವನ ಆ ಪ್ರೇಮ-ಆಸೆಗಳಿಗೇ ಕೊಡಬೇಕು !

'ಹೀಗೇ ಹಾಲ್ಬೆಳಕಾಗಿ ಇರು ಎಂದೆಂದೂ, ನನ್ನ ಸಿಂಧೂ !' ಅವನು ಉದ್ಗರಿಸಿದ್ದು ನನಗೆ ಇನ್ನೂ ಜ್ಞಾಪಕದಲ್ಲಿ ಇದೆ—'ನಮ್ಮ ಸಂಸಾರ ಹೀಗೇ ಕ್ಷೀರಸಾಗರವಾಗಿರಲಿ....'

'ಕ್ಷೀ ರ....ಸಾ....ಗ....ರ....' ಇಂದೂ ಆಂಟಿ ವಿಕಟವಾಗಿ ನಕ್ಕರು 'ಹ....ಹ....ಹ....'

'ಅದಿರಲಿ....' ಕ್ಷಣ ಬಿಟ್ಟು ಮತ್ತೆ ಮುಂದುವರಿದರು.

'ಕಥೆ ಕೇಳು—

'ಬೇಗ ಈ ಸೀರೇನ ಉಟ್ಟು ಬಾ—' ಸಿಂಧೂಗೆ ನಾಣಿ ಹೇಳಿದ— 'ಈಗಲೇ ಶ್ಯಾಂ ಮನೆಗೆ ಹೋಗ್ಬೇಕು....'

'ಶ್ಯಾಂ ಯಾರು ?' ಸಿಂಧೂ ಕೇಳಿದಳು.

'ನನ್ನ ಬಾಲ್ಯಸ್ನೇಹಿತ; ಇದೇ ತಾನೆ ಮದುವೆಯಾಗಿದೆ. ಹೆಂಡತೀನ ಕರಕೊಂಡು ಬಂದಿದ್ದಾನಂತೆ. ಹೋಗಿ ಅಭಿನಂದಿಸಬೇಕಲ್ಲವೇ ?'

'ಶ್ಯಾಂನ ಹೆಂಡತಿ ತುಂಬಾ ಚಿಕ್ಕವಳು; ಅಕ್ಕನ ಮಗಳು.

'ಚಿಕ್ಕವಳಾದರೇನಂತೆ ? ಹೆಣ್ಣುಮಕ್ಕಳು ಬೇಗ ದೊಡ್ಡವರಾಗ್ತಾರೆ ಎಂಬ ಧೋರಣೆಯನ್ನನುಸರಿಸಿ. ಅಕ್ಕ ತಮ್ಮನಿಗೆ ಕಟ್ಟಿದ್ದಳು.

'ತಮ್ಮನಿಗೇನೂ ಇದು ಬೇಸರದ ವಿಷಯವಾಗಿರಲಿಲ್ಲ—ಕಾರಣ, ಅಕ್ಕನಿಗೆ ಒಬ್ಬಳೇ ಮಗಳು ; ಕೂತು ತಿನ್ನುವಷ್ಟು ಆಸ್ತಿ! ಒಲ್ಲೆ ಎನ್ನುವಷ್ಟು ಮುಟ್ಠಾಳರು ಯಾರಿದ್ದಾರೆ ಈಗಿನ ಕಾಲದಲ್ಲಿ ?

'ಸಿಂಧೂ ನೋಡಿದಳು—ತನ್ನ ಮನೆಯನ್ನೂ ಮೀರಿಸುವಂತಹ ಅಮೋಘ ವಸ್ತುಗಳು ಅವರ ಮನೆಯಲ್ಲಿ ! ಮನಸ್ಸು ತಡೆಯಲಿಲ್ಲ. ರಕ್ತಗತವಾಗಿ ಬಂದು, ಬಲಿತು ನಿಂತಿದ್ದ ಕ್ಲೆಪ್ಟೋಮೇನಿಯಾ ಸ್ವಭಾವ ಹೆಡೆಯೆತ್ತಿ ನಿಂತಿತು ! ಈಗಲೇ ಒಂದು ಲಾರೀನ ತಂದು, ಈ ಸಾಮಾನುಗಳನ್ನೆಲ್ಲ ತುಂಬಿ, ನಮ್ಮ ಮನೆಗೆ ಸಾಗಿಸಬೇಕು !' ಎಂಬ ದುರಾಶೆ ಆವರಿಸಿತು. ಪಾಪ, ಅದೆಷ್ಟು ಕಷ್ಟಪಟ್ಟು ತಡೆದುಕೊಂಡಳೋ, ದೇವರೇ ಬಲ್ಲ !

'ಎಲ್ಲಿ—ನಿನ್ನ ಮದುವೆ ಸೀರೆ, ಒಡವೆಯನ್ನೆಲ್ಲಾ ತೋರಿಸು ?' ಮಾಮೂಲಿನಂತೆ ಆ ಹುಡುಗಿಯನ್ನು ಕೇಳಿದಳು ಸಿಂಧು.

'ಮಿಕ್ಕ ಸ್ನೇಹಿತೆಯರಾಗಿದ್ದಲ್ಲಿ, ಮೆಲ್ಲಗೆ ಜಾರಿಕೊಂಡು ಬಿಡುತ್ತಿದ್ದರು. ಆದರೆ ಈ ಹುಡುಗಿ ಹಾಗೆ ಮಾಡಲಿಲ್ಲ. ಪಾಪ, ಅವಳಿಗೇನು ಗೊತ್ತು ಸಿಂಧೂನ ಸ್ವಭಾವ ? ಅಲ್ಲದೆ–ಕಪಟ, ಗುಟ್ಟು ಏನನ್ನೂ ಅರಿಯದ ಹುಡುಗಿ; ಆತ್ಮೀಯತೆಯಿಂದ ಮಾತನಾಡಿಸುತ್ತಿರುವ ಈ ಚೆಲುವೆಯ ಬಗ್ಗೆ ಹೇಗೆ ತಾನೆ ಸಂಶಯ ತಾಳುವಳು ?

'ಸದ್ಯ—ನಮ್ಮನ್ನ ಹೊರಗೆ ರವಾನೆ ಮಾಡ್ಬಿಟ್ಟು. ಆಮೇಲೆ ಆರಂಭಿಸೀಮ್ಮಾ....' ಗಂಡಸರು ಗಾಬರಿಯಾಗಿ ಎದ್ದರು—'ಸೀರೆ ಒಡವೆ ವಿಷಯ ಆರಂಭವಾಯ್ತೂಂದ್ರೆ ಸರಿ, ಈ ಕಲಿಯುಗದ ಪೂರ್ತಿ ಕೂತ್ರೂ ಮುಗಿ

ಯೊಲ್ಲ ನಿಮ್ಮ ಮಾತು !'

'ಅವರ ಕಾರ್ ಸ್ಟಾರ್ಟ್ ಆಗಿ ಗೇಟಿನಿಂದ ಹೊರಗೆ ಹೋಗುವುದಕ್ಕೂ ಆ ಹುಡುಗಿ ತನ್ನ ಗಾಡ್ರೆಜ್ ತೆಗೆಯುವುದಕ್ಕೂ ಸರಿಹೋಯಿತು. ಒಳಗೆ ಕೈಹಾಕಿ, ಸೀರೆಗಳ ರಾಶಿಯನ್ನೇ ತೆಗೆದು ತೆಗೆದು ಮಂಚದ ಮೇಲೆ ಹಾಕಿದಳು. ಲಾಕರ್ ತೆಗೆದು, ಒಡವೆಗಳನ್ನು ಸಿಂಧುವಿನ ಸುತ್ತ ಹರಡಿದಳು.

'ಸಾಕಾ ?' ಸಿಂಧು ಡಂಗಾಗಿ ಕೇಳಿದಳು. ಹುಡುಗಿ ಹೆಮ್ಮೆಯಿಂದ ನಕ್ಕಳು. 'ತಡೀರಿ—ಮುಖ್ಯವಾದದ್ದನ್ನೇ ತೋರಿಸಲಿಲ್ಲ ! ಒಂದು ನಿಮಿಷ' ಎನ್ನುತ್ತಾ ಲಾಕರ್ ಒಳಗೆ ಕೈಹಾಕಿ, ಕೊನೆಯಲ್ಲಿ ಇದ್ದ ಒಂದು ಪೆಟ್ಟಿಗೆಯನ್ನು ಹೊರತೆಗೆದಳು.

'ಇದನ್ನ ನೋಡಿದ್ರಾ ?'

'ಸಿಂಧು ನೋಡಿದಳು. ಹೃದಯದ ಬಡಿತ ಘಳಿಗೆ ನಿಂತಿತು. ಅದು ವಜ್ರದ ಅಡ್ಡಿಗೆ ! ಅಂತಹುದೊಂದು ಅಡ್ಡಿಗೆಯನ್ನು ಹಾಕಿಕೊಳ್ಳಬೇಕೆಂದು ಚಿಕ್ಕ ವಯಸ್ಸಿನಿಂದ ಅದೇನು ತವಕಿಸಿದ್ದಳು ಸಿಂಧು ! ಆದರೆ ಅವಳ ಆಸೆ ಸಿಂಡ್ರೆಲಾ ಕನಸಾಗಿಯೇ ಉಳಿದಿತ್ತು. ಫಳಫಳ ಹೊಳೆಯಿತು ವಜ್ರ ! ಇವಳನ್ನು ನೋಡಿ ನಕ್ಕಂತೆ ಭಾಸವಾಯಿತು. ಬೆಳಕಿನಲ್ಲಿ ಅದರ ಹೊಳಪು ಕಣ್ ಕೋರೈಸಿತು. ನೋಡನೋಡುತ್ತಾ ಸಿಂಧುವಿನ ಬುದ್ಧಿ ಕೈಕೊಟ್ಟಿತು !

'ಪೆಟ್ಟಿಗೆಯಿಂದ ತೆಗೆದವಳೇ ಕತ್ತಿಗೆ ಹಾಕಿಕೊಂಡು ಹೋಗಿ ಕನ್ನಡಿಯ ಮುಂದೆ ನಿಂತಳು. ತನ್ನ ಅಂದವನ್ನು ಕಂಡು ತಾನೇ ಬೆರಗಾದಳು. ಆಹಾ ! —ಈ ಅಡ್ಡಿಗೆಯನ್ನು ತನ್ನಂಥವರು ಹಾಕಿಕೊಳ್ಳಬೇಕು—ಈ ಕರಿಮೋರೆಯವಳು ಅಲ್ಲ ! ತನ್ನಲ್ಲಿರಬೇಕಾದ ಒಡವೆ—ಇವಳಲ್ಲಿ ಹೇಗೆ ಬಂತು ?

'ತೆಗೆದುಕೊಡ್ತೀರಾ ? ಒಳಗಿಡ್ತೀನಿ....'

'ಎಷ್ಟು ಹೊತ್ತಾದರೂ ಸಿಂಧು ತನ್ನ ಅಡ್ಡಿಗೆಯನ್ನು ತೆಗೆದುಕೊಡದಿರಲು ಆ ಹುಡುಗಿ ಮೆಲ್ಲನೆ ಕೇಳಿದಳು. ಮಧುರಸ್ವಪ್ನದಿಂದ ಬೆಚ್ಚಿ ಎಚ್ಚೆತ್ತಳು—ಸಿಂಧು ! ಏನು ! ಈ ಅಡ್ಡಿಗೆಯನ್ನು ತೆಗೆದುಕೊಡುವುದೇ ! ಬರೀ ಕತ್ತಲ್ಲಿ ಮನೆಗೆ ಹೋಗುವುದೇ ! ಆಗದ ಮಾತು !

'ಇದನ್ನ ನಾನೇ ಇಟ್ಕೋತೀನಿ ; ನಂಗೆ ಚೆನ್ನಾಗಿ ಒಪ್ಪುತ್ತೆ—ನಂಗೇ ಕೊಟ್ಟುಬಿಡಿ' ಎಂದು ಹೇಳಿದಳು.

'ಆ ಹುಡುಗಿ ದಿಗ್ಭ್ರಾಂತಳಾಗಿ ನೋಡಿದಳು. ಏನಿದು ಈಕೆ ಹೇಳುವುದು ! ಬುದ್ಧಿ ಕೆಟ್ಟಿಲ್ಲವಷ್ಟೇ ? ಮತ್ತೆ ಮೃದುವಾಗಿ ಹೇಳಿದಳು—'ಸಾಕು ತಮಾಷೆ ; ಅವರುಗಳು ಹಿಂತಿರುಗೋ ಹೊತ್ತಾಯ್ತು ; ತೆಗೆದುಕೊಡಿ '

'ಸಿಂಧು ಅಲುಗಾಡಲಿಲ್ಲ. ಆ ಹುಡುಗಿಗೆ ಖಚಿತವಾಯಿತು—ಈಕೆ ಏನಾದರೂ, ತನ್ನ ಒಡವೆಯನ್ನು ಹಿಂತಿರುಗಿಸುವುದಿಲ್ಲ, ಎಂಬುದು ! ಮುಖ ಬಿಳಿಚಿಕೊಂಡಿತು. ಅವಳಿಗೂ ಒಡವೆಯ ಆಸೆ...ಎಷ್ಟಾದರೂ ಅವಳೂ ಹೆಣ್ಣು....ಅದರಲ್ಲೂ ತನ್ನ ಒಡವೆಯೆಂಬ ಮಮತೆ....ತಾನೇ ತೆಗೆದುಬಿಡಲು ಕೈಹಾಕಿದಳು, ಸಿಂಧುವಿಗೆ ಸಹಿಸಲಿಲ್ಲ. ತನ್ನ ಮೈಮೇಲೆಯೇ, ಹೀಗೆ ಕೈ ಹಾಕುವುದು ! ಅದೂ ಈ ಕರಿಕೈ ! ತಡೆದಳು. ಆ ಹುಡುಗಿಗೆ ಮತ್ತೂ ಭಯ ಹತ್ತಿಕೊಂಡಿತು—ತನ್ನ ಅಡ್ಡಿಗೆ ಕೈಬಿಡುವುದು ಎಂದು. ಕ್ರೋಧ ಉಕ್ಕಿಬಂತು. ಮ್ಯಾನರ್ಸ್ ಎಲ್ಲವನ್ನೂ ಬದಿಗೊತ್ತಿ, ಒಳ್ಳೇ ಹಿಡಿಂಬೆಯಂತೆ ಮೇಲೆರಗಿದಳು. ಕುತ್ತಿಗೆಯಿಂದ ತಳ್ಳಲ್ಪಟ್ಟ ಕರಗಳು ಸಿಂಧುವಿನ ಕೂದಲನ್ನು ಹಿಡಿದೆಳೆದವು. ಆ ಕೈ ಇನ್ನೇನು ಸಿಂಧುವಿನ ಕತ್ತಿನಿಂದ ಆ ಅಡ್ಡಿಗೆಯನ್ನು ಕಳಚಬೇಕು....

'ಸಿಂಧುವಿನ ಮನಸ್ಸಿನ ಸ್ತಿಮಿತ ಕಳಚಿಹೋಯಿತು. ತಾನೇನು ಮಾಡುತ್ತಿದ್ದೇನೆ ಎಂಬ ಪರಿವೆ ಇಲ್ಲದವಳಂತೆ ಪಕ್ಕದ ಮೇಜಿನ ಮೇಲಿದ್ದ ಬ್ರೆಡ್‌ನೈಫನ್ನು ಕೈಗೆ ತೆಗೆದುಕೊಂಡಳು. ಅವಳ ಮನಸ್ಸಿನ ಪೂರಾ ಒಂದೇ ಯೋಚನೆ : ಹೇಗಾದರೂ ಮಾಡಿ ಇವಳಿಂದ ದೂರ ತಪ್ಪಿಸಿಕೊಂಡು ಹೋಗಬೇಕು—ಆ ಅಡ್ಡಿಗೆಯ ಸಹಿತ ! ವಿಕಾರವಾಗಿ ಕಿರುಚಿದ ಹುಡುಗಿ ರಕ್ತದ ಮಡುವಿನಲ್ಲಿ ಕುಸಿದುಬಿದ್ದಳು. ಆ ವೇಳೆಗೆ ತಾನೇ ಹಿಂತಿರುಗಿದ್ದ ಸ್ನೇಹಿತರಿಬ್ಬರೂ ಗಾಬರಿಯಾಗಿ ಓಡಿಬಂದರು. ಪಿಶಾಚಿ ಕಂಡವರಂತೆ ನಿಂತರು !

'ಮುಂದೇನು ಕಥೆ ? ತಿಳಿದೇ ಇದೆಯಲ್ಲಾ ? ಪೋಲೀಸಿನವರು ಬಂದರು—ಸಿಂಧುವಿನ ಕೈಗೆ ಬೇಡಿ ತೊಡಿಸಿ, ಕರೆದುಕೊಂಡು ಹೋದರು. ಅವಳನ್ನು ವಿಚಾರಣೆಗೆ ಗುರಿಪಡಿಸಿ, ಅವಳನ್ನು 'ಅಪರಾಧಿನಿ' ಎಂದು ಸ್ಥಿರ ಪಡಿಸುವುದಕ್ಕೆ ಹೆಚ್ಚು ಕಷ್ಟವಾಗಲಿಲ್ಲ. ಕಾರಣ ಅವಳೇ ಯಾಂತ್ರಿಕವಾಗಿ ಒಪ್ಪಿಕೊಂಡುಬಿಟ್ಟಳು.

'ಜನ ಗುಂಪುಗುಂಪಾಗಿ ಬಂದರು—ತಮಾಷೆ ನೋಡಲು !

'ಯಾರಾದರೂ ಆಗಲಿ, ಮೇಲಿದ್ದರೆ—ಯಶಸ್ವಿಯಾಗಿದ್ದರೆ, ತಡೆಯದು ನೋಡು ಜನಕ್ಕೆ ! ಅವರು ಕೆಳಗೆ ಬೀಳುವುದನ್ನೇ ಕಾಣಲು ಕಾದಿರುತ್ತಾರೆ ; ಒಳ್ಳೇ ಹದ್ದಿನಂತೆ ಎರಗುತ್ತಾರೆ !

'ಇನ್ನು ನಿನ್ನ ಡ್ಯಾಡಿ—ಪಾಪ, ತುಂಬಾ ಆದರ್ಶಜೀವಿ ! ಮರ್ಯಾದೆಗೆ-ಆತ್ಮಗೌರವಕ್ಕೆ ವಿಪರೀತ ಪ್ರಾಮುಖ್ಯತೆ ಕೊಡುವವನು ! ಅಂತಹ ಮನುಷ್ಯನನ್ನು ಮೂರು ಕಾಸು ಮಾಡಿಬಿಟ್ಟಳು ನಿನ್ನ ಮಮ್ಮಿ ! ಎಲ್ಲೆಲೂ ಸ್ನೇಹಿತರು ಅವನಿಗೆ ! ಸದಾ ಜಗತ್ತು ಪೂರ್ತಿ ಸುತ್ತುವ, ಉನ್ನತ ಅಧಿಕಾರಿಗಳೊಡನೆ ಬೆರೆಯುವ, ವೃತ್ತಿ ತಾನೆ ಅವನದು ?

'ತಲೆಯೆತ್ತಿ ತಿರುಗದಂತಾಯಿತು! ಸ್ವರ್ಗದಲ್ಲಿ ಆರಾಮವಾಗಿ ಕುಳಿತು ಅಮೃತವನ್ನು ಚಪ್ಪರಿಸುತ್ತಿರುವವರನ್ನು ಒಮ್ಮೆಲೇ ಕೆಳಗೆ ತಳ್ಳಿದ ಸ್ಥಿತಿ ! ನಿನ್ನನ್ನೇ—ಕಣ್ಣೀರು ತುಂಬಿದ ಕಣ್ಣುಗಳಿಂದ ನೋಡುತ್ತಾ ಕೂತುಬಿಡ್ತಿದ್ದನಂತೆ, ಅರುಣ....

'ಪಾಪ, ಸಿಂಧು ಎಂದರೆ ಪ್ರಾಣ ! ಸಿಂಧುವನ್ನು ದೇವರ ಸ್ಥಾನದಲ್ಲಿ ಇಟ್ಟು ಪೂಜಿಸುತ್ತಿದ್ದ ! ಧಡಾರನೆ ಕೆಳಕ್ಕುರುಳಿದಳು ; ಅವನನ್ನೂ ಕೆಳಕ್ಕುರುಳಿಸಿದಳು ! ಅಂತಹ ತಾಯಿಯ ಕೂಸಾದ ನಿನ್ನ ಗತಿ ಏನು ? ಹೆಣ್ಣು ಕೂಸು-ಜೀವನ ನಿನ್ನನ್ನು ಆದರಿಸುವುದೇ ? ಎಲ್ಲರನ್ನೂ ಸೇರಿಸಿಕೊಂಡಂತೆ, ನಿನ್ನನ್ನು ಸೇರಿಸಿಕೊಳ್ಳುವುದೇ? ಅಸ್ಪೃಶ್ಯಳಂತೆ ನಿನ್ನನ್ನು ಕಡೆಗಾಣಿಸಿಬಿಟ್ರೆ, ನಿನ್ನ ಗತಿ ? 'ಇಂತಹ ತಾಯಿಯ ಮಗಳು' ಎಂಬ ಬಿರುದನ್ನು ಹೊತ್ತ ನಿನಗೆ ಒಳ್ಳೆ ಭವಿಷ್ಯವಿದೆಯೇ ? ಯೋಚಿಸಿ ಯೋಚಿಸಿ ಮುದುಕನಾದ.

'ನಿನ್ನ ಮಮ್ಮಿಗೆ ಶಿಕ್ಷೆ ವಿಧಿಸಿ, ಕಾರಾಗೃಹಕ್ಕೆ ಕರೆದೊಯ್ಯುವಂದು ನಿನ್ನ ತಂದೆಯನ್ನು ·ನೋಡಬೇಡ ! ಅಂದೇ ಅವನ ಕಥೆಯೂ ಮುಗಿಯಿತು, ಅಂತಲೇ ಅಂದುಕೊಂಡಿದ್ದೆವು. ಆ ಹೊತ್ತಿನಲ್ಲಿ ಅವನಿಗೆ ನೈತಿಕ ಬೆಂಬಲವನ್ನು ಕೊಟ್ಟು, ಮನುಷ್ಯನನ್ನಾಗಿ ಉಳಿಸಿದವರು, ಚಂದ್ರೂ ಅಂಕಲ್. ಆದರೂ—ಒಂದು ಭಾನುವಾರ, ಇದ್ದಕ್ಕಿದ್ದಂತೆಯೇ ಗುಂಡಿನ ಸಪ್ಪಳವಾಯಿತು! ಎಲ್ಲರೂ ಗಾಬರಿಯಿಂದ ನಾಣಿಯ ಕೋಣೆಗೆ ಓಡಿದರು.

'ಆದರೆ....ಆ ವೇಳೆಗೆ ಕೈಮಿಂಚಿತ್ತು. ಯಾವ ಅನಾಹುತ ಜರುಗ

ಬಹುದೆಂದು ಚಂದ್ರೂ ಅಂಕಲ್ ಬೆದರಿದ್ದರೋ, ಯಾವುದನ್ನು ತಪ್ಪಿಸಲು ರಾತ್ರಿ ಹಗಲೆನ್ನದೆ ಸರ್ಪಕಾವಲು ಕಾದಿದ್ದರೋ, ಅದು ಅಂದು ನಡೆದು ಹೋಗಿತ್ತು ! ಆದರ್ಶದ ಸವಿಗನಸಿನ ಚೂರುಗಳನ್ನು ನೋಡಲಾರದೆ, ಅವ ಮಾನ ತಡೆಯಲಾರದೆ- ನಿನ್ನ ಡ್ಯಾಡಿ ಆತ್ಮಹತ್ಯೆ ಮಾಡಿಕೊಂಡಿದ್ದರು.

'ಸಾಯುವ ಮುನ್ನ ನಿನ್ನ ಡ್ಯಾಡಿ ವಿಶದವಾಗಿ 'ವಿಲ್' ಬರೆದಿಟ್ಟು ಹೋಗಿದ್ದರು. ಅರ್ಧ ಆಸ್ತಿ ನಿನಗೆ, ಇನ್ನರ್ಧ ದಾನಧರ್ಮಕ್ಕೆ....ಸ್ವಲ್ಪ ನಿನ್ನ ಮಮ್ಮಿಗೆ... ನಿನ್ನ ಮಮ್ಮಿ ಕಾರಾಗೃಹದಲ್ಲಿದ್ದಳು, ನಿಜ. ಆದರೆ ಹಿಂತಿರುಗಿ ಬಂದಾಗ, ಏನಾದರೂ ಆಧಾರ ಬೇಡವೇ ? ಮುಂದಾಲೋಚನೆ ಮಾಡಿ, ಅದಕ್ಕೂ ಏರ್ಪಾಡುಮಾಡಿದ್ದರು ! ಯಾರು ಅಷ್ಟೊಂದು ಆಳವಾಗಿ ಆಲೋಚಿಸುತ್ತಾರೆ ಹೇಳು ? ಅದೂ ಅಂತಹ ಹೆಂಗಸಿನ ಬಗ್ಗೆ !

'ನಿನ್ನ ತಂದೆ ತುಂಬಾ ದೊಡ್ಡ ಮನುಷ್ಯ, ಅರುಣ ! ನಿನ್ನ ಬಗ್ಗೆ ಯಂತೂ ಹೆಜ್ಜೆ ಹೆಜ್ಜೆಗೂ ಸೂಕ್ತ ಏರ್ಪಾಡುಗಳನ್ನು ಮಾಡಿದ್ದರು ! ನಿನ್ನ ಕಾನ್ವೆಂಟ್ ಮದರ್ ಬಗ್ಗೆ ನಾಣಿಗಂತೂ ತುಂಬಾ ಅಭಿಮಾನ. ಅವರ ಮನೆಯವರೆಲ್ಲ ಇವರಿಗೆ ಸ್ನೇಹಿತರಂತೆ. ಇಂಗ್ಲೆಂಡಿಗೆ ನಾಣಿ ಹೋಗಿದ್ದಾಗ ಆದ ಗೆಳೆತನ. ಸರಿ, ಅವರಿಗೇ ನಿನ್ನ ಜವಾಬ್ದಾರಿಯನ್ನು ಒಪ್ಪಿಸಿದರು ಚಂದ್ರುವನ್ನು ಗಾರ್ಡಿಯನ್ ಆಗಿ ನೇಮಿಸಿದರು.

'ಇತ್ತ ನಮ್ಮಮ್ಮ-ಅಪ್ಪ ದುಃಖ ಅವಮಾನ ತಡೆಯಲಾರದೆ ಬೇಗ ಸತ್ತುಹೋದರು. ನನ್ನನ್ನ ಮದುವೆಯಾಗಲು ಜನ ಹಿಂಜರಿದರು. ಹೀಗೆ ತನ್ನ ಕರಾಳ ನೆರಳನ್ನು ನಮ್ಮೆಲ್ಲರ ಹಾದಿಯ ಮೇಲೂ ಹಾಸಿ ನಡೆದು ಬಿಟ್ಟಳು—ಸಿಂಧೂ !'

*   *   *

ಯಾವುದೋ ಕೇಸನ್ನು ನ್ಯಾಯಾಧೀಶನ ಮುಂದಿಡುವ ಅಪರಾಧಿನಿಯಂತೆ ಒಂದೇ ಉಸುರಿಗೆ ಹೇಳಿ ಮುಗಿಸಿದ ಇಂದೂ ಆಂಟಿ ತಕ್ಷಣ ಹುಡುಗಿಯ ಪಕ್ಕ ನೋಡಲಿಲ್ಲ. ಗತಕಾಲದ ಮೋಡ ಅವರ ಕಣ್ಣುಗಳನ್ನು ಇನ್ನೂ ಆವರಿಸಿತ್ತು. ಯಾವ ತಾರೆ ಅಲ್ಲಿ ಮಿನುಗಿ, ಅದೇನು ನುಡಿಯಿತೋ? ಮೆಲ್ಲಗೆ ಮೋಡದ ತೆರೆ ಸರಿಯಿತು ; ಮುಖದಲ್ಲಿ ಶಾಂತತೆ ನೆಲೆಸಿತು.

'ಈಗ....' ಅರುಣಳ ಗಂಟಲು—ತೀವ್ರಗಂಟಲು ಅವರ ಆ ಶಾಂತತೆ

ಯನ್ನು ಭೇದಿಸಿತು—'ನನ್ನ ಮಮ್ಮಿ ಎಲ್ಲಿ ?'

'ಮಮ್ಮಿ ! ಮಮ್ಮಿ !' ಇಂದೂ ಆಂಟಿ ತಿರಸ್ಕಾರದಿಂದ ನಕ್ಕರು—'ಇನ್ನೂ ನಿಂಗೆ ಆ ಕೆಟ್ಟ ಮಮ್ಮಿಯ ಯೋಚನೆಯೆ ?'

ಅವರ ಆ ವ್ಯಂಗ್ಯನಗು ಅರುಣಳ ಹೃದಯವನ್ನು ಚೂರಿಯಂತೆ ಇರಿಯಿತು. ಅತೀವ ಅವಮಾನದಿಂದ ತಲೆತಗ್ಗಿಸಿದಳು ; ಆದರೆ ಒಂದು ಕ್ಷಣ ಅಷ್ಟೇ. ಮತ್ತೆ ಇಂದೂ ಆಂಟಿಯ ಪಕ್ಕ ನೋಡಿದಾಗ, ಆ ಎಳೆಮೊಗದಲ್ಲಿ ಒಂದು ತರಹದ ಬಿಗಿಯಿತ್ತು ; ನಿಶ್ಚಲಭಾವವಿತ್ತು.

'ನನ್ನ ಮಮ್ಮಿ ಕೆಟ್ಟವಳೇ ಇರಬಹುದು....' ನಿಧಾನವಾಗಿ, ಸ್ಪಷ್ಟವಾಗಿ ಹೇಳಿದಳು—'ಕೊಲೆಗಡುಕಳೇ ಇರಬಹುದು ; ರಾಕ್ಷಸಿಯೇ ಆಗಿರಬಹುದು ! ಆದರೆ....ಆದರೂ, ಅವಳು ನನ್ನ ಮಮ್ಮಿ ! ನನ್ನ ಮಮ್ಮಿ ! ನಂಗೆ ಜನ್ಮಕೊಟ್ಟ ತಾಯಿ ! ನಂಗೆ ಅವಳು ಬೇಕು ! ನನ್ನ ಮಮ್ಮೀ ಬೇಕು !'

ಇಂದೂ ಆಂಟಿ ಹಾಕುತ್ತಿದ್ದ ಸ್ವೆಟರ್ ಥೊಪ್ಪೆಂದು ಕೆಳಗೆ ಬಿದ್ದಿತು. ನೆಲಕ್ಕೆ ತಾಗಿದ ನಿಟ್ಟಿಂಗ್ ಕಡ್ಡಿ ಠಣ್ ಎಂದು ಸಿಡಿಕಿತು. 'ಟಿಕಟಿಕ' ಎಂದು ನಿರ್ವಿಕಾರವಾಗಿ ಸಾಗುತ್ತಿದ್ದ ಗಡಿಯಾರದ ಮುಳ್ಳು ಸಹ ನಿಬ್ಬೆರಗಾಗಿ ನಿಂತಂತಹ ಮೌನ !

'ಯಾಕೆ ಆಂಟಿ, ಏನಾಯ್ತು ?' ಗಾಬರಿಯಾಗಿ ಅರುಣ ಕೇಳಿದಳು.

ಇಂದೂ ಆಂಟಿಯ ಮುಖ ಬಿಳಿಚಿಹೋಗಿತ್ತು.

'ನಿಂಗೆ....ನಿಂಗೆ ಬುದ್ಧಿ ಸರಿಯಾಗಿದೆಯೆ ?' ಗದರಿಸಿಕೊಂಡರು.

ಅರುಣಳಿಗೆ ಏನು ಜವಾಬು ಕೊಡಬೇಕೋ ತಿಳಿಯಲಿಲ್ಲ. ಮಿಕಿ ಮಿಕಿ ನೋಡುತ್ತಾ ಕುಳಿತಳು. ಎಂತಹ ಪೆಚ್ಚು ಪ್ರಶ್ನೆ !

'ನಿನ್ನ ಮಮ್ಮಿ ಎಲ್ಲವರಂತಲ್ಲ—ಒಬ್ಬ ಕೊಲೆಪಾತಕಿ ! ಕಳ್ಳಿ ! ಕಾರಾಗೃಹವಾಸಿ !' ಇಂದೂ ಆಂಟಿ ಚೀರಿಯೇಬಿಟ್ಟರು—'ರಾಕ್ಷಸಸ್ತ್ರೀ ! ಅಂಥಾವಳನ್ನ ನಾಲ್ಕು ಜನರೆದುರಿಗೆ ಒಪ್ಪಿಕೊಳ್ಳಲು ನಿಂಗೆ ಮನಸ್ಸು ಹೇಗೆ ಬರತ್ತೆ ?'

ಇದೀಗ ಸರಿಯಾಗಿದೆ ! ಆಂಟಿಗೇ ಎಲ್ಲೋ ಬುದ್ಧಿ ಸರಿಯಾಗಿಲ್ಲ ! ಕೋಪವನ್ನೇ ಕಾಣದ ಅರುಣ ಹುಲಿಯಂತಾದಳು.

'ನನ್ನ ಮಮ್ಮಿಯನ್ನ ನಾಲ್ಕು ಜನ ಅಲ್ಲ, ಲೋಕದೆದುರಿಗೇ ಬೇಕಾದ್ರೂ ಒಪ್ಪಿಕೋತೀನಿ—' ಸೆಟೆದು ನಿಂತು ಹೇಳಿದಳು—'ಆಗಿದ್ದು ಆಗಿಹೋಯ್ತು ; ಈಗ ಮಮ್ಮಿಗೂ ತುಂಬಾ ಪಶ್ಚಾತ್ತಾಪವಾಗಿರಬೇಕು; ಹಳೆಯದನ್ನೇ ಕೆದಕಿ ಕೆದಕಿ, ಅವಳಿಗೆ ಹುಣ್ಣು ಮಾಡೋದೇ ? ಎಲ್ಲರೂ ಅವಳನ್ನ ದೂರ ತಳ್ಳಿಬಿಟ್ರೆ ಹೇಗೆ, ಆಂಟಿ ?...' ಇದಕ್ಕೆ ಏನುತ್ತರ ಕೊಡ ಬೇಕೋ ಇಂದು ಆಂಟಿಗೆ ತಿಳಿಯದಾಯಿತು. ಅರುಣ ಮುಂದುವರಿದಳು—

'ಸ್ವಂತ ರಕ್ತ ಅನ್ನಿಸಿಕೊಂಡಿರೋ ನಾವೇ ವಿಶ್ವಾಸ, ಅನುತಾಪ, ದಯೆ ತೋರದಿದ್ರೆ ? ನಮ್ಮ ಕಾನ್ವೆಂಟಿನಲ್ಲಿ ಮಾತೆತ್ತಿದ್ರೆ ಸರಿ, ಹೇಳ್ತಾರೆ— 'ಮತ್ತೊಂದು ಅವಕಾಶವನ್ನ ಕೊಟ್ಟುನೋಡು' ಎಂದು. ಹಾಗೇ–ನಾವೂ ಯಾಕೆ ಮತ್ತೊಂದು ಅವಕಾಶವನ್ನ ಮಮ್ಮಿಗೆ ಕೊಟ್ಟು ನೋಡಬಾರ್ದು ? ಹೇಳು ಆಂಟೀ—ನಾವೇ ಹಳ್ಳಕ್ಕೆ ತಳ್ಳಿಬಿಡೋದೇ ?'

'ಆದರೆ ಲೋಕದ ನಿಯಮ ಹಾಗಿಲ್ಲವಲ್ಲ, ಮಗೂ. ಲೋಕದಲ್ಲಿದ್ದ ಮೇಲೆ ಅದಕ್ಕೆ ಸರಿಯಾಗಿ ಹೊಂದಿಕೊಂಡಿದ್ರೆ ತಾನೆ, ನಮಗೂ ಒಂದು ಸ್ಥಾನ? ಹತ್ತು ಜನ ತುಳಿಯುವ ಹಾದಿಯನ್ನು ಬಿಟ್ಟು, ಬೇರೆ ಕಡೆ— ಕಲ್ಲುಮುಳ್ಳಿನ ಮೇಲೆ ನಡೆದುಹೋಗೋದೇ ? ನಾಳೆ ಜನ ಏನೆಂದಾರು? ನಿನ್ನನ್ನೂ ದೂರ ತಳ್ಳಿಬಿಟ್ರೆ ?'

ಇಂದೂ ಆಂಟಿಯ ಕಣ್ಣುಗಳಲ್ಲಿ ತೆಳುತೆರೆ ಕಾಣಿಸಿತು.

'ನಮ್ಮ ನಮ್ಮ ಆತ್ಮಸಾಕ್ಷಿಗೆ ಸರಿಯಾಗಿ ನಡೆದರೆ ಸಾಕು, ಆಂಟಿ—' ಅರುಣ ದೃಢಸ್ವರದಲ್ಲಿ ಉತ್ತರಿಸಿದಳು—'ಲೋಕವನ್ನ ಮೆಚ್ಚಿಸಿ ಬಾಳೋ ದಿಕ್ಕೆ ಯಾರ ಕೈಲೂ ಸಾಧ್ಯವಿಲ್ಲ ! ಜನ ಅಂದುಕೊಂಡ್ರೆ ಅಂದುಕೊಳ್ಳಲಿ. ಅದಕ್ಕಾಗಿ ನನ್ನ ಕರ್ತವ್ಯಾನ ಬಿಡಲೇ ? ನನ್ನ ಕರ್ತವ್ಯ ಏನು—ಅನಾಥೆ ಯಾಗಿರೋ ನನ್ನ ಮಮ್ಮೀನ ನೋಡಿಕೊಳ್ಳೋದು ; ಅದನ್ನ ನಾನು ಖಂಡಿತ ಮಾಡ್ತೀನಿ....'

'ಜನ ನಿನ್ನನ್ನ ಮಾತಾಡಿಸದಿದ್ರೆ ?...'

'ಇಷ್ಟವಿದ್ದವರು ನನ್ನ ಕೂಡ ಮಾತಾಡಲಿ ; ಇಷ್ಟವಿಲ್ಲದವರು ಮುಖ ತಿರುಗಿಸಿಕೊಂಡು ಹೋಗಲಿ ! ಅವರುಗಳು ಕೊಡೋ ಸ್ಥಾನಮಾನ ಯಾವುದೂ ನನಗೆ ಬೇಡ !'

'ನೀನು ನಿಜವಾಗಿಯೂ ಚಿನ್ನ, ಅರುಣ್ !' ಎಂದು ಇಂದೂ ಆಂಟಿ ಅವಳನ್ನು ಎದೆಗಪ್ಪಿಕೊಂಡಳು—'ನಿನ್ನಂಥ ಚಿನ್ನದ ಪುತ್ತಳೀನ ಹತ್ತಿರ ಇಟ್ಕೊಂಡು, ಸುಖವಾಗಿರೋ ಭಾಗ್ಯಾನ ಅವಳು ಕೇಳ್ಕೊಂಡು ಬರಲಿಲ್ಲ ! ಅತೀ ದುರಾಶೆಯಿಂದ ಎಷ್ಟೊಂದು ಕೆಳಮಟ್ಟಕ್ಕೆ ಇಳಿದುಬಿಟ್ಟಳು !— ಮುಖ್ಯ, ಅವಳ ಹಣೆಯುಬರಹ ಹಾಗಿತ್ತು.' ಧ್ವನಿ ಗದ್ಗದವಾಯಿತು, ಕಣ್ಣುಗಳಿಂದ ನೀರು ತಡೆಯಿಲ್ಲದೆ ಹರಿಯುಹತ್ತಿತು.

'ಆಂಟಿ ?' ಆಂಟಿಗೆ ಸ್ವಲ್ಪ ಸಮಾಧಾನವಾಗಲೆಂದು ಕಾದಿದ್ದ ಅರುಣ ಮತ್ತೆ ಒತ್ತಿ ಪ್ರಶ್ನಿಸಿದಳು—'ಈಗ ನನ್ನ ಮಮ್ಮಿ ಎಲ್ಲಿ ? ಹೇಳಲೇ ಇಲ್ಲವಲ್ಲ ? ಎಲ್ಲಿ ಅವರೀಗ ?'

'ನಿನ್ನ ಮಮ್ಮಿ....' ಇಂದೂ ಆಂಟಿಯ ಧ್ವನಿ ಭಾವರತಹಿವಾಗಿತ್ತು 'ಸತ್ತುಹೋದಳು—ಅರುಣ್ !....'

'ಹಾ !' ಅರುಣ ಚೀತ್ಕರಿಸಿದಳು.

'ನೊಂದುಕೋಬೇಡ, ಮಗೂ.' ಮುಂಕಾಗಿ ಕುಳಿತ ಅವಳ ಮುಂಗುರುಳುಗಳನ್ನು ಹಿಂದಕ್ಕೆ ತಳ್ಳುತ್ತಾ ಇಂದೂ ಆಂಟಿ ಸಮಾಧಾನ ಮಾಡಿದರು ; 'ಹಾಗಾಗಿದ್ದು ಒಳ್ಳೆಯದಕ್ಕೇ ; ಬದುಕಿದ್ದಿದ್ರೆ, ಅವಳ ಇಡೀ ಜೀವನ ಒಂದು ಪಶ್ಚಾತ್ತಾಪದ ಧಗೆಯಾಗ್ತಿತ್ತು. ನೀನು ಎಲ್ಲ ಮರೆತು, ಅವಳನ್ನ ತಾಯಿ ಅಂತ ಗೌರವಿಸಿದ್ರೂ, ಅವಳು ಎಲ್ಲ ಮರೆತು, ಎಲ್ಲರಂತಾಗ್ತಿರಲಿಲ್ಲ. ಆತ್ಮತಿರಸ್ಕಾರಕಿಂತ ಬೇರೆ ಶಿಕ್ಷೆ ಇಲ್ಲ, ಅರುಣ.'

'ಹೋಗಲಿ—ನನ್ನ ಮಮ್ಮಿ ಎಲ್ಲಿ, ಹೇಗೆ ಸತ್ತಳು ?' ಚೇತರಿಸಿಕೊಂಡು ಅರುಣ ಕೇಳಿದಳು.

'ಬೇರೆಲ್ಲಿ ಮಗೂ—ಜೈಲಿನಲ್ಲೇ ! ಅದೇ ಅವಳ ಕೊನೆಯ ಆಶ್ರಯವಾಯ್ತು. ನನ್ನನ್ನ ನೋಡಿದಾಗಲೆಲ್ಲ ನಿನ್ನ ಬಗ್ಗೆ ಕೇಳ್ತಿದ್ದಳು ; ನಿನ್ನನ್ನ ನೆನೆದು ನೆನೆದು ಅಳ್ತಿದ್ದಳು.'

'ಅಂದರೆ—ಮಮ್ಮಿಗೆ ನನ್ನ ಮೇಲೆ ಪ್ರೀತಿ ಇತ್ತು ! ಮಮ್ಮಿಗೆ ನನ್ನ ಮೇಲೆ ಪ್ರೀತಿ ಇತ್ತಲ್ಲಾ ?' ಅರುಣ ಪುಲಕಿತಳಾಗಿ ಕೇಳಿದಳು.

'ಇಲ್ಲದೆ ಉಂಟೇ ! ಇದೇನು ಪ್ರಶ್ನೆ, ಮಗು ! ಎಷ್ಟಾದ್ರೂ ತಾಯಿಯ ಹೃದಯ—ಬೇಡವೇ ? 'ಅರುಣ ಎಲ್ಲಿ ? ಅರುಣ ಹೇಗಿದ್ದಾಳೆ ? ಅರುಣ

ಏನು ಮಾಡಿದಳು ?' ಸದಾ ಇದೇ ಮಾತು ! ಯಾವಾಗಲೂ ನಿನ್ನದೇ ನೆನಪು ! ದೇವಗಾನದಂತೆ ಅರುಣಳ ಕಿವಿಯಲ್ಲಿ ಮೊರೆಯಿತು ಆಂಟಿಯ ಧ್ವನಿ ! ಅರಳಿದ ಕಣ್ಣುಗಳಿಂದ ಆಲಿಸುತ್ತಾ ಕೂತಳು ಅರುಣ.

'ತನ್ನಿಂದಾಗಿ ಗಂಡ ಸತ್ತ ಎಂಬ ಶೋಕವೇ ಅವಳ ಅರ್ಧಜೀವ ಹಿಂಡಿತು ; ಅದರಲ್ಲೂ ಅಂತಹ ಗಂಡನಿಗೆ ತನ್ನಿಂದಾದ ಅಪಮಾನ ! ಅದೂ ಎಂತಹ ಅಪಮಾನ ! ಅದು, ಕಠಿಣ ಜೈಲುವಾಸ, ಭಯ, ಪಶ್ಚಾತ್ತಾಪ, ನಿನ್ನ ಭವಿಷ್ಯದ ಬಗ್ಗೆ ಆತಂಕ, ಎಲ್ಲಾ ಸೇರಿ, ಅವಳನ್ನ ಕಣ್ಣುಮುಚ್ಚುವಂತೆ ಮಾಡ್ತು. ಇಲ್ಲದಿದ್ರೆ, ಈಗ ಅವಳನ್ನು ಬಿಡುವ ಕಾಲ—'ತುಂಬಾ ನಮ್ರ ಅಪರಾಧಿನಿ' ಎಂದು ಅವಳ ಶಿಕ್ಷೆಯನ್ನ ಕಡಮೆ ಮಾಡಿದ್ದರು. ಹೋಗಲಿಬಿಡು, ಹೀಗಾಗಿದ್ದೂ ಒಳ್ಳೆಯದಕ್ಕೇ—' ಇಂದೂ ಆಂಟಿ ನಿಟ್ಟುಸಿರೆಳೆದರು—'ಇದ್ದೇನು ಮಾಡ್ಬೇಕು-ಅವಳು, ಹೇಳು ?'

ಅರುಣಳ ಮನಸ್ಸು ಆ ಮಾತನ್ನು ಒಪ್ಪಲಿಲ್ಲ. ಬೆಪ್ಪಳಂತೆ ಶೂನ್ಯ ವನ್ನು ನಿಟ್ಟಿಸಿ ನೋಡುತ್ತಾ ಕುಳಿತಳು. ವಜ್ರಕ್ಕಾಗಿ ಹಾತೊರೆದು, ಸಂಪಾ ದಿಸಿ, ಕಳೆದುಕೊಂಡ ಮನಃಸ್ಥಿತಿ—ಅವಳದು !

## ೧೧

ಅರುಣ ತುಂಬಾ ಕೇಳಿಕೊಂಡಮೇಲೆ, ಹಿಂದೆ ಅವಳ ತಂದೆತಾಯಿಗಳು ವಾಸಿಸುತ್ತಿದ್ದ ಮನೆಗೆ ಕರೆದುಕೊಂಡು ಹೋದರು ಇಂದೂ ಆಂಟಿ. ಮೊದ ಮೊದಲು ಚಂದ್ರೂ ಅಂಕಲ್ ಒಪ್ಪಲಿಲ್ಲ.

'ನಿಂಗೆ ಯಾರು ಹೇಳಿದ್ರು—ಇದನ್ನೆಲ್ಲಾ ಹೇಳು ಎಂದು ?' ಎಂದು ಇಂದೂ ಆಂಟಿಯನ್ನು ತರಾಟೆಗೆ ತೆಗೆದುಕೊಂಡರು. 'ಹೋಗಿ ಹೋಗಿ, ಮಗೂನ ಕಿವಿಯಲ್ಲಾ ಇದನ್ನೆಲ್ಲಾ ಊದೋದು ? ನಾಳೆ ಮನಸ್ಸಿಗೆ ಹಚ್ಕೊಂಡು ಹೆಚ್ಚುಕಮ್ಮಿಯಾದ್ರೆ ? ನಾ ಹೇಳಿರಲಿಲ್ವೇ ನಿಂಗೆ—ನಿನ್ನ ಪಾಡಿಗೆ ನೀ ಸುಮ್ಮನಿರು, ಅಂತ ? ತಲೆಹರಟೆ ! ಚಿಕ್ಕವಯಸ್ಸಿಂದ ಅಷ್ಟೇ -ನೀ ಶುದ್ಧ ತಲೆಹರಟೆ ! ಒಬ್ಬರ ಮಾತು ಕೇಳಿದವಳಲ್ಲ !'

ಇಂದೂ ಆಂಟಿ ಬೆವತುಬೆ—ದರಿಬಿಟ್ಟರು. ಆದರೆ ಅರುಣ ಮಾತ್ರ

ಅಲ್ಲಾಡಲಿಲ್ಲ.

'ಆ ಮನೆಗೆ ಭೂತ ಬಂದಿದೆಯಂತೆ!' ಅರುಣಳನ್ನು ಚಂದ್ರೂ ಅಂಕಲ್ ಹೆದರಿಸಿದರು—'ಅದಕ್ಕೇ ಯಾರೂ, ಯಾವ ಹೊತ್ತಲ್ಲೂ, ಅದ್ರ ಹತ್ರಾನೇ ಸುಳಿಯೋದಿಲ್ಲ! ಹುಷಾರ್!'

'ನಮ್ಮ ಕಾನ್ವೆಂಟಿಗೆ ಮೂರು ಭೂತಗಳು ಬಂದಿವೆ—' ಅರುಣ ತಿಳಿಸಿದಳು—'ಅವರ ಪಾಡಿಗೆ ಅದಿವೆ; ನಮ್ಮ ಪಾಡಿಗೆ ನಾವಿದೀವಿ. ಈಗ ಆ ಭೂತಕ್ಕೇ ಮುಜುಗರವಾಗಿ ಓಡಿಹೋಗಿದೆ!'

'ಸರಿ—ನಿನ್ನ ಕೂಡ ವಾದಿಸಿ ಪ್ರಯೋಜನ ಇಲ್ಲ' ಕೊನೆಗೆ ಅಂಕಲ್ ಸೋತರು—'ಶುದ್ಧ ಹಟಮಾರಿ! ನಾಣಿ ಹಾಗಲ್ಲ. ನೀನು! ಅವಳ....' ತುಟಿ ಕಚ್ಚಿದರು. ಮತ್ತೇನು ಹೇಳಬಿಡುತ್ತೇನೋ! ಎಂದು ಅಂಜಿದವರಂತೆ, ಅವಸರವಸರವಾಗಿ ಹೊರಟುಹೋದರು.

'ನಂಗೆ ಈಗೆಲ್ಲ ಗೊತ್ತು, ಅಂಕಲ್—' ಅರುಣ ಮನಸ್ಸಿನಲ್ಲೇ ನಕ್ಕಳು—'ಸುಮ್ಮನೆ ಯಾಕೆ ನಾಟಕ ಆಡ್ತೀರಿ? ಈಗ ನಾನು ದೊಡ್ಡವಳು—ಹಿಂದಿನ ಪುಟ್ಟ ಅರುಣ ಅಲ್ಲ! ಪ್ರತಿಯೊಂದನ್ನೂ ನಾ ತಿಳಿದುಕೋಬೇಕು—ತಿಳಿದುಕೋತೀನಿ; ಖಂಡಿತ ಮನಸ್ಸಿಗೆ ಹಚ್ಕೊಂಡು ಕೊರಗಲ್ಲ—ಭಯಪಡಬೇಡಿ. ಎಲ್ಲಾ ಅರಿತು ಹುಷಾರಾಗ್ತೀನಿ'

* * *

ಇಂದೂ ಆಂಟಿ ತಿಳಿಸಿದಂತೆ ಆ ಮನೆ ಒಂಟಿಯಾಗಿತ್ತು. ಸುತ್ತಲೂ ಪ್ರಕಾಂಡ ಮರಗಳು, ದೂರದಲ್ಲಿ ಕೆಲವು ಮನೆ, ಇವಿಷ್ಟನ್ನು ಬಿಟ್ಟರೆ, ಹಿಂದಿನ ಕಾಲದ ಕಥೆಗಳಿಂದ ಎದ್ದು ಬಂದಂತಿತ್ತು—ಅದು! ಗೇಟಿನ ಶಬ್ದ ಆದ ತಕ್ಷಣ ಎಲ್ಲಿಂದಲೋ ಗೂರ್ಖಾ ಪ್ರತ್ಯಕ್ಷನಾದ. ಆತ ಇಂದೂ ಆಂಟಿಯನ್ನು ನೋಡಿ ಸಲಾಮ್ ಮಾಡಿದನು.

'ಈ ಮನೆಯ ಗೂರ್ಖಾ' ಇಂದು ಆಂಟಿ ಅರುಣಳ ಕುತೂಹಲವನ್ನು ಶಮನ ಮಾಡಿದರು—'ಹಿಂದುಗಡೆಯೇ ಅವನ ಮನೆ ಇದೆ; ಹುಟ್ಟಾ ಮೂಕ. ಆದರೆ ಕಣ್ಣಿಗೆ ಕಾವಲಾಗಿ ಮನೆ ಕಾಯ್ತಾನೆ. ಅವನನ್ನೂ ಮರೆತಿಲ್ಲ ನಿನ್ನ ಡ್ಯಾಡಿ—ವಿಲ್‌ನಲ್ಲಿ!'

ಹೊಸಿಲ ಬಳಿಯೇ ನಿಂತು ಅರುಣ ಸುತ್ತಲೂ ನೋಡಿದಳು. ನೆನ್ನೆ

ಬಿಟ್ಟುಹೋದ ಹಾಗಿತ್ತು ಮನೆ! ಸುಸಜ್ಜಿತ ತೊಟ್ಟಿ—ಕಲಾಮಯವಾದ ಸಾಮಾನುಗಳು....ಇದೇ ತೊಟ್ಟಿಯಲ್ಲಿ ತಾನು ಹಿಂದೆ—ಬಹು ಹಿಂದೆ ಆಡುತ್ತಿದ್ದಳೇ? ಎಷ್ಟು ಜ್ಞಾಪಿಸಿಕೊಂಡರೂ ಹಾಳು ನೆನಪು ಬರದು; ಮನಸ್ಸನ್ನು ಕೆದಕಿ ಹುಣ್ಣುಮಾಡಬೇಕೆಂದೆನಿಸಿತು. 'ಆ ಪಿಯಾನೋ ಯಾರದು?' ಬೆರಗಾಗಿ ನಿಂತು ಪ್ರಶ್ನಿಸಿದಳು. 'ನಿನ್ನ ಡ್ಯಾಡಿ....ಬಾರಿಸು ತ್ತಿದ್ದರು....' ಇಂದೂ ಆಂಟಿಯ ಧ್ವನಿ ನಿರ್ಜೀವವಾಗಿತ್ತು.

'ಓ!....'

ಅದಕ್ಕೇ ಅವಳಿಗೆ ಪಿಯಾನೋ ಶಬ್ದ ಕೇಳಿದರೆ, ಎದೆಯಲ್ಲೆಲ್ಲಾ ಏನೋ ಸಂಕಟ! ತಡೆಯಲಾರದವಳಂತೆ ಅರುಣ ಬಾಗಿಲಿಗೊರಗಿದಳು.

ಕಾರಣವನ್ನು ಅರಿಯದ ಮದರ್ ಸುಪೀರಿಯರ್ ಏನೆಲ್ಲ ಚಡಪಡಿಸಿ ಬಿಟ್ಟರು—'ಪಿಯಾನೋ ಕಲಿ, ಮಗು; ನಿನ್ನ ಡ್ಯಾಡಿಗೆ ಅದು ತುಂಬ ಇಷ್ಟ' ಎಂದು!

'ಇಗೋ, ನಿನ್ನ ಕುರ್ಚಿ....' ಮುಂದೆ ಬಂದ ಆಂಟಿ ಪುಟ್ಟ ಕುರ್ಚಿಯೊಂದನ್ನು ತೋರಿಸಿದರು—'ಅಲ್ಲಿ, ಆ ಟೇಬಲ್ ಹತ್ತಿರ ನಿನ್ನ ಡ್ಯಾಡಿ ಕೂರುತ್ತಿದ್ದರು; ನೀನು ಕಾಲ ಬಳಿ ಕೂರ್‍ತಿದ್ದೆ.'

'ಹೌದೇ?' ಕಣ್ಣರಳಿಸಿ ನೋಡಿದಳು; ಹತ್ತಿರ ಹೋಗಿ ಆ ಮೇಜನ್ನು ಸವರಿದಳು.

ತನ್ನ ಡ್ಯಾಡಿ ಮತ್ತು ಮಮ್ಮಿ ಕುಳಿತಿದ್ದ ಜಾಗದಲ್ಲಿ ಮತ್ತೆಮತ್ತೆ ನಡೆದಳು—ತೀರ್ಥಯಾತ್ರೆ ಮಾಡುತ್ತಿರುವವಳಂತೆ....ಬಾಗಿ ಕಣ್ಣಿಗೊತ್ತಿ ಕೊಂಡಳು- ಪವಿತ್ರ ಕ್ಷೇತ್ರವೆಂಬಂತೆ....ಇಂದೂ ಆಂಟಿ ನೋಡಲಾರದಾದರು.

'ಇದು ನಿನ್ನ ಕೋಣೆ; ಅದೇ ನಿನ್ನ ಮಂಚ; ಸ್ಪೆಷಲ್ ಆಗಿ ಹೇಳಿ ಮಾಡಿಸಿದರು ನಿಮ್ಮ ತಂದೆ. ಅಗೋ! ಆ ಅಲಮಾರಿನಲ್ಲಿರೋದೆಲ್ಲ ನಿನ್ನ ಆಟದ ಸಾಮಾನುಗಳು! ಅಷ್ಟಿದ್ರೂ, ಎಷ್ಟಿದ್ದರೂ—'ಇನ್ನೂ ಬೇಕು—ಇನ್ನೂ ಬೇಕು!' ಅಂತ ಹಟ ಮಾಡ್ತಿದ್ದೆ ನೀನು! ತಂದು ತಂದು, ರಾಶಿ ರಾಶಿ ಸುರೀತಿದ್ರು ನಿನ್ನ ಅಪ್ಪ! ಇದೇ ಅಡಿಗೆಯ ಮನೆ; ಇದೇ....'

ಹೀಗೆ ಒಂದೊಂದಾಗಿ ತೋರಿಸುತ್ತಾ ಮುಂದೆ ನಡೆದಿದ್ದರು ಆಂಟಿ. ತನ್ನ ಮಮ್ಮಿಯ ಕೋಣೆಯ ಬಳಿ ಬಂದಾಗ, ಯಾವುದೋ ಮಂತ್ರಶಕ್ತಿ

ಯಿಂದ ಎಳೆಯಲ್ಪಟ್ಟವಳಂತೆ ಅರುಣ ನಿಂತುಬಿಟ್ಟಳು—ಬಾಗಿಲಲ್ಲೇ !

ಬಾಗಿಲಿಗೆ ಪರದೆಗಳು ಇಳಿಬಿಟ್ಟಿದ್ದವು. ಡ್ರೆಸ್ಸಿಂಗ್ ಟೇಬಲ್ಲಿನ ಮೇಲೆ ಸೌಂದರ್ಯಸಾಮಗ್ರಿಗಳು ಹಾಗೇ ಇದ್ದವು. ಬಟ್ಟೆಯ ಸ್ಟ್ಯಾಂಡಿನ ಮೇಲೆ ಒಂದೆರಡು ಷರಾಯಿ, ಎರಡು ಮೂರು ಸೀರೆಗಳು....ಹಾಸಿಗೆಯ ಮೇಲೆ ಕಸೂತಿಯ ಬೆಡ್‌ಸ್ಪ್ರೆಡ್ !

'ನಿನ್ನ ಮಮ್ಮಿ ಹಾಕಿದ್ದು—' ಆಂಟಿ ತಿಳಿಸಿದರು.

ಅರುಣಳ ಮುಖಭಾವವನ್ನೇ ಗಮನಿಸಿ ನೋಡಿದರು. ಅರುಣ ಮಂಚದ ಹತ್ತಿರ ಹೋಗಿ ನಿಂತಳು. 'Best Wishes, Sweet Dreams, Be Happy, Good Luck.' ಕಸೂತಿ ಅಕ್ಷರಗಳು ಅಣಕಿಸಿ ನಕ್ಕವು.

'ಇದು....' ಇಂದೂ ಆಂಟಿಯ ಧ್ವನಿ ಗಡಗಡ ನಡುಗಿತು—'ಇದು ನಿನ್ನ ಮಮ್ಮಿಯ ವಾರ್ಡ್‌ರೋಬ್.'

ಪರ್ಸಿನಿಂದ ಬೀಗದ ಕೈಯನ್ನು ತೆಗೆದವರೇ ಗಾಡ್ರೇಜನ್ನು ತೆಗೆದರು.

ಅರುಣ ಅಚ್ಚರಿಯಿಂದ ನೋಡಿದಳು. ಇದೇನು ಸೀರೆ ಅಂಗಡಿಯೋ ? ಒಂದಕ್ಕಿಂತ ಒಂದು ಅಮೋಘ ! ಎಲ್ಲಿಂದ ಆರಿಸಿ ತಂದದ್ದು !

'ಇವೆಲ್ಲ....ಮುಂದಕ್ಕೆ....ನಿನಗೆ....ನಿನಗೇ ಮಗು....'

ಅರುಣ ತನ್ನ ಕಣ್ಣುಗಳನ್ನು ನಂಬಲಾರದೆ ಅವರತ್ತ ತಿರುಗಿದಳು.

'ಊ ಮಗೂ, ಒಡವೆಗಳೆಲ್ಲಾ ಬ್ಯಾಂಕಿನಲ್ಲಿಟ್ಟಿದ್ದಾರೆ ಡ್ಯಾಡಿ. ನಿನ್ನ ಮದುವೆ ಹೊತ್ನಲ್ಲಿ ಕೊಡುವಂತೆ ಬರೆದಿದ್ದಾರೆ....ವಿಲ್‌ನಲ್ಲಿ....'

'ಅದು ಸರಿ....ಇಷ್ಟೆಲ್ಲಾ ಇಲ್ಲಿದೆಯಲ್ಲಾ, ಕಳ್ಳ ಬಂದರೆ ? ಇಲ್ಲಿ ಯಾರೂ ಇಲ್ಲ !'

'ಭೂತದ ಮನೆಗೆ ಯಾವ್ನೋನು ಬರ್‍ತಾನೆ ?' ಇಂದೂ ಆಂಟಿ ನಕ್ಕರು —'ನಿನ್ನ ತಾಯಿಯ ಭೂತ ಇಲ್ಲಿ ಓಡಾಡತ್ತಂತೆ !'

'ಯಾರು ಹೇಳಿದ್ರು ?' ಅರುಣ ಕೆರಳಿ ಕೆಂಡವಾದಳು—'ಯಾರು ಹೀಗೆ ನನ್ನ ತಾಯೀನ ಭೂತ ಮಾಡಿರೋದು ?'

'ಬೇಕಾದಷ್ಟು ಜನ ನೋಡಿದಾರೆ, ಮಗೂ ; ಅಲ್ಲದೆ, ಆ ಗೂರ್ಖಾ ಇರೋವರ್ರೂ ಎಂಥಾ ಡಕಾಯಿತನೂ ಬರೋಲ್ಲ ! ಇವನ್ನೆಲ್ಲಾ ಇನ್‌ಶ್ಯೂರ್ ಬೇರೆ ಮಾಡಿದಾರೆ ನಿನ್ನ ತಂದೆ '

ಅರುಣ ಮತ್ತೊಮ್ಮೆ ಸುತ್ತಲೂ ನೋಡಿದಳು. ಈಗ ಬಿಟ್ಟು ಹೋದ ಹಾಗೆ—ಈಗ ಎಲ್ಲರೂ ಎಲ್ಲಿಂದಲೋ ಬಂದು ತಮ್ಮ ತಮ್ಮ ಕೆಲಸಗಳಲ್ಲಿ ಕೈಹಚ್ಚುವ ಹಾಗೆಇತ್ತು—ಮನೆ !

'ಡ್ಯಾಡಿ ಯಾಕೆ ಹೀಗೆ ಇಟ್ಟರು ಮನೇನಾ ?' ತನ್ನ ತಲೆಯನ್ನು ಕೊರೆಯುತ್ತಿದ್ದ ವಿಚಾರವನ್ನು ಹೊರಗೆಡವಿದಳು—'ಒಳ್ಳೇ ಮ್ಯೂಸಿಯಂ ಹಾಗಿದೆಯಲ್ಲಾ !'

'ಸೆಂಟಿಮೆಂಟ್ !' ಆಂಟಿ ಮೊಟಕು ಉತ್ತರ ಕೊಟ್ಟರು.

ಆ ಕೋಣೆಯಿಂದ ಹೊರಗೆ ಬಂದಾಗ ಸರಕ್ಕನೆ ಅರುಣಳಿಗೆ ಏನೋ ಜ್ಞಾಪಕವಾಗಿ ತಿರುಗಿದಳು—

'ಆಂಟೀ....ಆ ಸೀರೆ....ಅದನ್ನ ತೋರಿಸ್ತೀರಾ ಸ್ವಲ್ಪ ?'

'ಯಾವ ಸೀರೆಯನ್ನ ?'

'ಅದೇ, ಆ ಬಿಳೀ ಬುಟ್ಟಾ ಸೀರೆ ! ಒಡಲೆಲ್ಲಾ ಜರೀ ಹಂಸ ! ನೀವು ಅಂದು ಹೇಳಿದ್ರಲ್ಲಾ ? ಅದೇ ಅಂದು....ಅಂದು...'

ಇಂದೂ ಆಂಟಿ ಮರದ ಕೊರಡಿನಂತಾದರು.

'ಛೇ, ನಾನು ಕೇಳಬಾರದಾಗಿತ್ತೇನೋ? ತಪ್ಪು ಮಾಡಿದೆನೇನೋ?' ಅರುಣ ಪರಿತಪಿಸಿದಳು.

'ಅದು ಇಲ್ಲಿಲ್ಲ, ಅರುಣ—' ಇಂದೂ ಆಂಟಿ ಹೇಳಲಾರದೆ ಹೇಳಿದರು : 'ಅದನ್ನ ಅಂದೇ ಅಂದು....ಸುಟ್ಟು ಬೂದಿ ಮಾಡಿದರು ನಿನ್ನ ಡ್ಯಾಡಿ'!

ತೋಟದಲ್ಲಿ ಬಹುಹೊತ್ತು ಅಡ್ಡಾಡಿದಳು ಅರುಣ—ಹಿಂದಿನದೇನಾದರೂ ನೆನಪು ಬರುವುದೇನೋ ಎಂದು.

'ಇದೇ ಚೊಕ್ಕತ್ತನೆಯ ಮರವನ್ನ ಹತ್ತುತ್ತಿದ್ದೆ ನೀನು—ಈ ಕಲ್ಲು ಬೆಂಚಿನ ಮೂಲಕ ; ಹತ್ತಿ ನಿಂತು, ಹತ್ತು ಬೀದಿಗೂ ಕೇಳಿಬರೋ ಹಾಗೆ ಕಿರುಚುತ್ತಿದ್ದೆ—'ಬಾ ಮಮ್ಮೀ—ಮಮ್ಮೀ, ನನ್ನನ್ನ ಹಿಡಿದುಕೋ ! ನೋಡೋಣ ?' ಅಂತ. ಏದುತ್ತಾ ಓಡಿಬಂದ ನಿನ್ನ ಮಮ್ಮಿ ಭಯದಿಂದ ನಿಂತುಬಿಡ್ತಿದ್ದರು—ಮೇಲಿನ ರೆಂಬೆಯ ಮೇಲೆ ಕೂತಿದ್ದ ನಿನ್ನನ್ನು ಕಂಡು! 'ಬಾ ಕಂದ !' ಎಂದವಳು ಕೂಗಿದ್ರೆ, ಇಳೀಬೇಕಲ್ಲಾ ಬಜಾರಿ ? ಒಳ್ಳೇ ಕೋತಿಯ ಹಾಗೆ ಅಣಕಿಸುತ್ತಿದ್ದೆ ! ಡ್ಯಾಡಿ ಬರುವವರೆಗೂ ಮಮ್ಮಿ ಅಲ್ಲೇ

ಬಿಸ್ಕತ್ ಪ್ಯಾಕೆಟ್ ಹಿಡಿದು ನಿಂತು....'

ಇಂದೂ ಆಂಟಿ ಕಥೆಕಥೆಯಾಗಿ ಹೇಳಿದರು :

'ಇಲ್ಲೇ, ಈ ಕಲ್ಲುಮುಳ್ಳಿನ ಮೇಲೆಲ್ಲಾ ಓಡಾಡ್ತಿದ್ದೆ—ಬೀಳ್ತಿದ್ದೆ ! ಕಾಲಲ್ಲೆಲ್ಲಾ ಒಂದೇ ಮುಳ್ಳು ! ಮೊದಲ ದಿನ ನಿನ್ನ ಡ್ಯಾಡಿ ನಿಂಗೆ ಬೂಟ್ಸು ತಕ್ಕೊಟ್ಟಾಗ....ನಂಗೆ ಇನ್ನೂ ಚೆನ್ನಾಗಿ ಜ್ಞಾಪಕ ಇದೆ—ಎಷ್ಟೊಂದು ಅತ್ತು ರಂಪ ಮಾಡಿಬಿಟ್ಟೆ ! ಏನೋ ಮಾಡಿಬಿಟ್ರು ನಿಂಗೆ—ಎನ್ನುವ ಹಾಗೆ! ಆಮೇಲೆ ಆ ಬೂಟ್ಸನ್ನ ನೀ ತೆಗೆದ್ರೆ ಕೇಳು! ಊಂ—ಬೂಟ್ಸಿನ ರುಚಿ ಕಂಡೆಯೋ ಇಲ್ಲೋ, ಮೂರುಹೊತ್ತೂ ಅದೇ ! ಕೊನೆಗೆ ದೇವರ ಮನೆಗೆ ಸಹ ! ತಿಂಡಿ ಕೊಟ್ರೆ ಸರಿ—ನಿಂಗೆ ಆ ದೊಡ್ಡ ತಟ್ಟೆ, ಅದೇ ನಿಮ್ಮ ಡ್ಯಾಡಿಯ ತಾತನ ತಟ್ಟೆ, ಅದ್ರಲ್ಲೇ ಕೊಡಬೇಕು ! 'ಅದ್ರಲ್ಲಿ ಕೊಟ್ಟರೆ ಲಕ್ಷಣವಾಗಿ ಕೊಡ್ತಾರೆ—ಸಟ್ಟಾಗಿ ತಿನ್ನಬಹುದು' ಎಂಬ ಎಣಿಕೆಯೇನೋ ? ಎಲ್ಲಿ ಮುಚ್ಚಿಟ್ಟರಲಿ, ಅದನ್ನ ಹುಡುಕಿ, ಬಲುಕಷ್ಟದಿಂದ ನಿನ್ನ ಪುಟ್ಟ ಕೈಗಳಲ್ಲಿ ಭದ್ರವಾಗಿ ಹಿಡಿದುಕೊಂಡು, ತಪ್ಪು ಕಾಲು ಹಾಕ್ತಾ ತಿರುಗುತ್ತಿದ್ದೆ—ನಿನ್ನ ಮಮ್ಮಿಯ ಹಿಂದೆಮುಂದೆ !'

ತನ್ನ ಈ ಬಾಲಲೀಲೆಯನ್ನೆಲ್ಲಾ ಮುಗ್ಧಳಾಗಿ ಕೇಳಿದಳು ಅರುಣ. ಕಳೆದುಹೋದ ಆ ಸುದಿನಗಳು ಮತ್ತೆ ಬರಬಾರದೆ ? ನಡೆದದ್ದೆಲ್ಲಾ ಒಂದು ಕೆಟ್ಟ ಕನಸಾಗಿ ಪರಿಣಮಿಸಿ, ತಾನು ತನ್ನೀಮನೆಯಲ್ಲಿ, ತನ್ನ ಮಮ್ಮಿ–ಡ್ಯಾಡಿಗಳ ನಡುವೆ ನಲಿಯಬಾರದೆ ?

'ಎಲ್ಲಾ ಅವರವರ ಹಣೆಯಬರಹ, ಅರುಣ ' ಅವಳ ಮನಸ್ಸಿ ನೋಟವನ್ನು ಗುರುತಿಸಿದ ಆಂಟಿ ಉಸುರಿದರು—'ನಿನ್ನ–ಅವರ ಋಣಾನು ಬಂಧ ಅಷ್ಟೇ ಇದ್ದದ್ದು.'

'ಅಷ್ಟೇನಾ ... ಅಷ್ಟೇನಾ....?'ಅರುಣ ಕಂಬನಿದುಂಬಿ ನೋಡಿದಳು —ಆ ನಿರ್ಜೀವ ಮನ್ನೆಯನ್ನೇ—'ಸಾಕಾ ಇಷ್ಟೇ ? ಎಲ್ಲಾ ಬಿಟ್ಟು ನಂಗೇಕೆ ಹೀಗಾಯ್ತು ? ಹೀಗಾಗಬೇಕಿತ್ತು ?'

ಆ ನಿರ್ಜೀವ ಮನೆ ನಿರ್ವಿಕಾರವಾಗಿ ನೋಡಿತು—'ನೀನು ಯಾರೋ ನಂಗೆ ಗೊತ್ತಿಲ್ಲ ; ನಂಗೆ ಏನೂ ಗೊತ್ತಿಲ್ಲ ; ನನ್ನನ್ನ ಕೇಳಬೇಡ....' ಎಂಬಂತೆ.

ತೋಟದಲ್ಲಿ—ಬಳ್ಳಿಯಿಂದ ಬಳುಕುತ್ತಿದ್ದ ಮೊಗ್ಗನ್ನೇ ನೋಡುತ್ತಾ ಇಂದೂ ಆಂಟಿ ಅಂದುಕೊಂಡರು—'ಆಯಾ ಬಳ್ಳಿಯಲ್ಲಿ ಅದರ ಮೊಗ್ಗಿರ ಬೇಕು—ಆಗಲೇ ಸೊಗಸು ! ಅದು ಬಿಟ್ಟು, ಮೊಗ್ಗು ಕೆಳಗೆ ಬಿದ್ದರೆ, ಅಥವಾ ಸುಂಟರಗಾಳಿಯಲ್ಲಿ ಬಳ್ಳಿ ಹರಿದುಹೋದರೆ....ಆಗ ಮೊಗ್ಗಿನ ಸ್ಥಿತಿ ಶೋಚನೀಯ !'

ಸಮೀಪದಲ್ಲಿಯೇ—ಮನೆಯ ತೆರೆದ ಬಾಗಿಲು ಕಿಟಕಿಗಳನ್ನೇ ಎವೆ ಯಿಕ್ಕದೆ ನೋಡುತ್ತಿದ್ದ ಆ ಇನ್ನೊಂದು ಮೊಗ್ಗಿನ ಬಳುಕನ್ನು ನೋಡ ಲಾರದೆ ಕಣ್ಣು ಮುಚ್ಚಿಕೊಂಡರು. ಅದರ ಮೂಕವೇದನೆ—ಅದೇನು ಘೋರ !

'ಸಿಂಧೂ, ಸಿಂಧೂ ! ಅದೇನು ಮಾಡಿಬಿಟ್ಟೆ ?'

## ೧೨

ಆ ಮನೆಗೆ ಹೋಗಿಬಂದಮೇಲೆ ಅರುಣ ಮಂಕಾದಳು ; ಸಣ್ಣಗೆ ಜ್ವರ ಕಾಣಿಸಿಕೊಂಡಿತು ; ಏರುತ್ತಾ ಹೋಯಿತು. ಇಂದೂ ಆಂಟಿಗೆ ಭಯ ಹತ್ತಿ ಕೊಂಡಿತು. 'ಏನಪ್ಪಾ ! ದುಡುಕಿ ಎಲ್ಲಾ ತಿಳಿಸಿಬಿಟ್ಟೆ ! ಹುಡುಗಿಯ ಮೇಲೆ ಯಾವ ಪರಿಣಾಮ ಬೀರುವುದೋ, ಯಾವ ವಿಪರೀತಕ್ಕೆ ತಿರುಗುವುದೋ' ಎಂದು.

ಚಂದ್ರೂ ಅಂಕಲ್‌ರ ತೀಕ್ಷ್ಣ ಮಾತುಗಳನ್ನು ಊಹಿಸಿಕೊಂಡು ಬೆದರಿ ದರು — ಜೊತೆಗೆ ಏನೋ ಒಂದು ತರಹವಾಗಿ ಮಂಕಾಗಿಬಿಟ್ಟಿದ್ದಳು ಅರುಣ. ಹೆಚ್ಚು ಮಾತಿಲ್ಲ—ಕಥೆಯಿಲ್ಲ. ಅವಳ ಆ ತಿಳಿನಗು ಎಲ್ಲಿ ಹೋಯಿತೋ ? ನೋಡಿ ಇಂದೂ ಆಂಟಿಗೆ ಸಂಕಟ ಹತ್ತಿಕೊಂಡು ಬರುತ್ತಿತ್ತು. ಯಾವು ಯಾವುದೋ ಭಯ ಆರಂಭವಾಯಿತು.

ಹೀಗೆಯೇ ಅರುಣ ಎಷ್ಟು ದಿನ ಇರುತ್ತಿದ್ದಳೋ ? ಹಠಾತ್ತನೆ ಒಂದು ಸಂಜೆ ಪ್ರಸಾದ್ ಬಂದ ; ಬಂದವನೇ ಅರುಣಳನ್ನು ಅವಳ ಆ ರಸಹೀನ ಲೋಕದಿಂದ ಎಳೆದು ತಂದ !

'ಏನ್ರೀ ಅರುಣಮ್ಮನವರೇ, ಹೀಗಾಗಿಬಿಟ್ಟಿದೀರಿ ! ವ್ಹೈ ಹುಷಾರು

ಇದೆ ತಾನೆ ?'

ಅವನ ಗಂಟಲನ್ನು ಕೇಳಿದ ತಕ್ಷಣ ಅರುಣಳ ಮುಖದಲ್ಲಿ ರಕ್ತ ನುಗ್ಗಿ ಬಂದಿತು ; ಕಣ್ಣುಗಳಲ್ಲಿ ಹೊಳಪು ಮೂಡಿತು. ಬಾಗಿಲತ್ತ ನೋಡಿದಳು.

ಪ್ರಸಾದ್ ಈಗ ಇನ್ನೂ ಎತ್ತರವಾಗಿ ಬೆಳೆದುಬಿಟ್ಟಿದ್ದ ! ಎಳೇ ತುಟಿಗಳು ಬಲಿತಿದ್ದವು, ಚಿಗುರುಮೀಸೆ ಬೇರೆ ! ಸದಾ ಹಣೆಯ ಮೇಲೆ ತೇಲುತ್ತಿದ್ದ ಒರಟುಕೂದಲು ಹಿಂದಕ್ಕೆ ಬಾಚಲ್ಪಟ್ಟು, ಮಿರಮಿರನೆ ಹೊಳೆಯುತ್ತಿತ್ತು—ಹೊಸದಾಗಿ ಗಂಭೀರ ಕಲಿತ ಕಿಶೋರಿಯಂತೆ! ಕಣ್ಣುಗಳಲ್ಲೇನೋ ಮೊದಲಿನದೇ ಮಾಧುರ್ಯ ; ಹಿಂದಿನದೇ ಹುಡುಗಾಟಿಕೆ ! ಆದರೆ ಮೈಕೈ ತುಂಬಿಕೊಂಡು ಸುಂದರ ಯುವಕನಾಗಿಬಿಟ್ಟಿದ್ದ !

ಹೌದು, ಈಗೆರಡು ವರ್ಷಗಳ ಹಿಂದೆ ಬಂದು, ಗುಡ್‌ಬೈ ಹೇಳಿ ಹೋಗಿದ್ದ ಪ್ರಸಾದ್ ಇನ್ನೂ ಹುಡುಗ. ಈಗ—ಯುವಕ ! ಆಗಿನ ಪೈಜಾಮಾ ಪ್ರಸಾದ್‌ಗೂ, ಈಗಿನ ಷರಾಯಿ ಪ್ರಸಾದ್‌ಗೂ ಎಷ್ಟೊಂದು ಅಂತರ! ಆಗೆಲ್ಲ ಮುಖದಲ್ಲಿ ಏನೋ ಒಂದು ತರಹದ ಅಧೈರ್ಯ, ಸದಾ ತುಟಿಗಳ ಮೇಲೆ ಲಾಸ್ಯವಾಡುತ್ತಿದ್ದ ಕಿರುನಗೆಯ ಮೇಲೆ ಆತಂಕದ ಛಾಯೆ !

ಈಗ ಆತ್ಮವಿಶ್ವಾಸ ನರನರಗಳಲ್ಲಿಯೂ ಎದ್ದು ಕಾಣುತ್ತಿತ್ತು—ಮುಖದ ತುಂಬಾ ಅದೇ ಸಹಜ ಕಿರುನಗೆ. ತನ್ನನ್ನೇ ಮರೆತವಳಂತೆ ಅರುಣ ಅವನನ್ನೇ ನೋಡಿದಳು. ಅವನೂ ಅಷ್ಟೇ !

ವಿಶಾಲವಾದ ಕಣ್ಣುಗಳು...ಗುಂಗುರುಕೂದಲು....ರೋಜಾಹೂವಿನಂತಹ ಬಾಯಿ....ಕವಿಯೊಬ್ಬನ ಗೀತೆ ನೆನಪಿಗೆ ಬಂದಿತು ಅವನಿಗೆ. ಯಾರು ಕಂಡಿದ್ದರು—ಆ ಸ್ಪಾಯಿಲ್ಟ್ (Spoilt) ಅರುಣ ಇಷ್ಟೊಂದು ಚೆಲುವೆಯಾಗ್ತಾಳೆ ಎಂದು ! ಬೇಕೆಂದೋ, ಇಲ್ಲ ಮರೆತೋ, ಅವನೂ ಅರುಣಳನ್ನೇ ಎವೆಯಿಕ್ಕದೇ ನೋಡಿದನು. ಇಂದೂ ಆಂಟಿ ಇಷ್ಟನ್ನೂ ಗಮನಿಸಿದರು.

'ಏನಾಗಿದೆ ನಿಂಗೆ ?' ಅರುಣಳ ಹತ್ತಿರ ಕುರ್ಚಿ ಎಳೆದುಕೊಂಡು ಕೇಳಿದನು.

'ಸಿಂಗಪೂರ್ ಫ್ಲೂ—' ಅವಳು ಕ್ಷೀಣವಾಗಿ ಉತ್ತರಿಸಿದಳು.

'ಸಿಂಗಪೂರಿಂದ—ಎಲ್ಲಾ ಬಿಟ್ಟು ಫ್ಲೂನೇ !' ಅವನು ಹುಬ್ಬೇರಿಸಿ

ದನು—'ಸಿಂಗಪೂರ್ ನೈಲಾನ್, ಸಿಂಗಪೂರ್ ಟ್ರಾನ್ಸಿಸ್ಟರ್, ಅಂತ ಅಲ್ಲಿ ಎಷ್ಟೊಂದು ಒಳ್ಳೆಯ ಸಾಮಾನುಗಳಿವೆ ! ಸಿಂಗಪೂರಿಂದ ಟೈಪ್‌ರೈಟರ್ ತರಿಸಿಕೊಳ್ಳಬಹುದಾಗಿತ್ತು.'

ಅವಳು ನಕ್ಕಳು. ಇಂದೂ ಆಂಟಿಗೆ ಸಮಾಧಾನವಾಯಿತು.

'ಇನ್ನು ಪರವಾಗಿಲ್ಲ, ಸರಿಹೋಗ್ತಾಳೆ—' ಎಂದು ಅಂದುಕೊಂಡರು —'ಪ್ರಸಾದ್ ಬಂದುಬಿಟ್ಟ !'

ಅವರ ಎಣಿಕೆ ಸುಳ್ಳಾಗಲಿಲ್ಲ. ಎರಡೇ ದಿನಗಳಲ್ಲಿ ಅರುಣ ಮೊದಲಿನಂತಾದಳು. ಪ್ರಸಾದ್ ದಿನಾ ಬಂದು ಹೋಗುತ್ತಿದ್ದ. ಅವನ ಆ ಸರಸ ಮಾತುಕತೆ ಮನೆ ತುಂಬುತ್ತಿತ್ತು.

'ತುಂಬಾ ಚಳಿ—ನಂಗೊಂದು ಒಳ್ಳೆ ಸ್ವೆಟರ್ ಹಾಕಿಕೊಡ್ತೀಯಾ, ಆಂಟಿ ?' ಪ್ರಸಾದ್ ಕೇಳಿದನು.

'ಅದಕ್ಕೇನಂತೆ—ಅರುಣಳ ಕೈಲಿ ಹಾಕಿಸಿದರಾಯ್ತು....' ಇಂದೂ ಆಂಟಿ ತಲೆತೂಗಿದರು.

'ಅರುಣಳ ಕೈಲಿ !' ಪ್ರಸಾದ್ ಗಾಬರಿಗೊಂಡನು—'ಅಂದರೆ ನಾನು ವುಲ್ ಇನ್‌ಶ್ಯೂರ್ ಮಾಡಿ ತರಬೇಕೂನ್ನಿ—'

'ತಂದು ಹಾಕು—ನೋಡೋವಿಯಂತೆ !' ಅರುಣ ಜಂಬಕೊಚ್ಚಿಕೊಂಡಳು—'ಇಡೀ ಭಾರತದಲ್ಲೇ ಯಾರೂ ಹಾಕಿಕೊಂಡಿರಲಾರರು—ಅಂತಹ ಸುಂದರ ಸ್ವೆಟರ್ನ ಹಾಕ್ಕೊಡ್ತೀನಿ.'

'ಅಮ್ಮಯ್ಯಾ !' ಪ್ರಸಾದ್ ಮೂಗಿನ ಮೇಲೆ ಬೆರಳಿಟ್ಟುಕೊಂಡನು —'ಉತ್ತರನ ಪೌರುಷ ಅಲ್ಲ ತಾನೆ ?'

ಪಾಪ, ಅರುಣ ಯಾವ ಘಳಿಗೆಯಲ್ಲಿ ಆ ಸ್ವೆಟರನ್ನ ಆರಂಭಿಸಿದಳೋ, ಅದು ಬಡಪೆಟ್ಟಿಗೆ ಮುಗಿಯಲೇ ಇಲ್ಲ !

'ನಾ ಬಂದಾಗಲೆಲ್ಲಾ ಬಿಚ್ತಾನೇ ಇದೀಯಲ್ಲಾ—ಹಾಕೋದು ಯಾವಾಗ ? ಇಲ್ಲ, ಇದೊಂದು ಹೊಸಾ ಮಾದರಿಯೋ ?' ಪ್ರಸಾದ್ ಹಾಸ್ಯಮಾಡಿದನು.

'ಮಂಗಳವಾರ ಆರಂಭಿಸಿದೆ—ಅದಕ್ಕೇ ಹೀಗಾಯ್ತು !' ಅರುಣ ವಿವರಿಸಿದಳು.

'ರಾಹುಕಾಲ ನೋಡಿದ್ದೆ ತಾನೆ?'

'ಅರುಣಾ?' ಇಂದೂ ಆಂಟಿ ಕೂಗಿಕೊಂಡರು—'ಎಲ್ಲಿಯವರೆಗೂ ಆಯ್ತು—ನೋಡೋಣ? ತಗೊಂಡು ಬಾ.'

'ಪೂರ್ತಿ ಆಯ್ತು, ಆಂಟೀ—' ಪ್ರಸಾದ್ ಕೂತಲ್ಲಿಂದಲೇ ಕೂಗಿಕೊಂಡ—'ನಾ ಹಾಕ್ಕೊಂಡಿದೀನಿ.'

'ಒಳಗೆ ಹೋಗಿ ತೋರಿಸು—' ಅರುಣ ಮೆಲ್ಲಗೆ ಗುದ್ದಿದಳು—'ಇಲ್ಲಿಂದಲೇ ಹೀಗೆ ಗಟ್ಟಿಯಾಗಿ ಕೂಗಿಕೊಂಡ್ರೆ—ಯಾವುದೋ ಭೂತ ಕೂತಿದೆ ಅಂದುಕೋತಾರೆ.'

ತಕ್ಷಣ ಅರುಣಳ ತೊಡೆಯ ಮೇಲಿದ್ದ ಅರ್ಧ ಸ್ವೆಟರನ್ನು ಹಿಡಿದುಕೊಂಡು ಹೊರಟನು.

'ಅಯ್ಯೋ, ಹೋಯ್ತು ಕತ್ತೆ!' ಅರುಣ ಎಳೆದುಕೊಂಡಳು—'ಅನ್ಯಾಯ, ಸ್ಟಿಚಸ್ ಎಲ್ಲ ಬಿದ್ದು ಹೋಯ್ತು!'

'ನಿಟ್ಟೊ ಪರ್ಲ್ಲೊ—ಏನೂ ಕೆಳಗೆ ಬಿದ್ದಿಲ್ಲ ತಾನೆ?' ಅವನು ಆತಂಕದಿಂದ ಕೇಳಿದನು—'ಪರ್ಲ್ಲೊ ನಿಟ್ಟೊ ಎಲ್ಲಾ ಸರಿಯಾಗಿದೆ ತಾನೆ?'

'ಒಳ್ಳೇ ಸಾಲಿಗ್ರಾಮಾನ ಎತ್ಕೊಂಡು ಬರೋ ಹಾಗೆ ತರ್ತಿದಾಳೆ—ನೋಡಾಂಟಿ?' ಹಿಂಬಾಲಿಸಿ ಬಂದ ಪ್ರಸಾದ್ ತಮಾಷೆ ಮಾಡಿದನು.

'ಸಾಲಿಗ್ರಾಮ ಅಂದರೇನು?' ಅರುಣ ಪ್ರಶ್ನಾರ್ಥಕವಾಗಿ ತಿರುಗಿದಳು.

'ಓ ಮರೆತೆ—ಕ್ಷಮಿಸಿ; ನೀವು ಕಾನ್ವೆಂಟಿನವರು! ನಿಮಗೆಲ್ಲಿ ನಮ್ಮ ಸಾಲಿಗ್ರಾಮ, ಅಭಿಷೇಕ, ಮಂದಾಸನ, ಎಲ್ಲಾ ಗೊತ್ತು ಹೇಳಿ? ಸಾಲಿಗ್ರಾಮ, ಎಂದರೆ—ಗಾಡು! G-o-d, G-o-d! ಗಾಡು! ತಿಳೀತಾ?

ಅರುಣ ನಕ್ಕಳು. ಹೀಗೆ ಪರಸ್ಪರ ಆಗಾಗ್ಗೆ ಸೇರುತ್ತಿದ್ದರು. ಮೊದಲಿನಂತೆ ಮೂವರೂ ಹರಟುತ್ತಾ ಕೂತಿರುತ್ತಿದ್ದರು. ನಡುವೆ ಪಾಪ—ಯಾವುದೋ ಅರ್ಜೆಂಟ್ ಕೆಲಸದ ನೆನಪು ಬರುತ್ತಿತ್ತು ಇಂದೂ ಆಂಟಿಗೆ. ಒಳಗೆ ಹೋಗಬೇಕು ತಾನೆ? ಕೆಲಸ ಬಿಟ್ಟು ಹರಟುತ್ತಾ ಕುಳಿತರೆ ಆಯಿತೆ?

'ಇಗೋ ಬಂದೆ—' ಎಂದು ತಮ್ಮಷ್ಟಕ್ಕೆ ತಾವೇ ಗೊಣಗಿಕೊಂಡು ಒಳಗೆ ನಡೆಯುತ್ತಿದ್ದರು.

ಅವರು ಎದ್ದದ್ದೇ ಗೊತ್ತಾಗುತ್ತಿರಲಿಲ್ಲ—ಈ ಮಾತಿನಮಲ್ಲರಿಗೆ!

ಅವರ ಆ ತಿಳಿನಗುವಿನಲ್ಲಿ ತಮ್ಮ ಜೀವನದ ಕಹಿಯನ್ನೆಲ್ಲಾ ಮರೆತು ಒಂದಾಗಿ ನಿಲ್ಲುತ್ತಿದ್ದರು—ಇಂದೂ ಆಂಟಿ. ತಮ್ಮ ಅಡಿಗೆಮನೆಯಲ್ಲಿ !

* * *

'ನೋಡು ನೋಡು, ಅರುಣ—ನಿನ್ನ ಫಾದರ್ !' ಪ್ರಸಾದ್ ಎಚ್ಚರಿಸಿದನು.

'ಎಲ್ಲಿ ?' ಗಾಬರಿಯಾಗಿ ಅರುಣ ಸುತ್ತ ನೋಡಿದಳು.

'ಆಗೋ ಅಲ್ಲಿ !' ದೂರದಲ್ಲಿ ಬರುತ್ತಿದ್ದ ಬಿಳಿ ಬಟ್ಟೆಯ ಮಾಂಕನ್ನು ತೋರಿಸಿದನು ಪ್ರಸಾದ್—'ನಿಮ್ಮ ಕಾನ್ವೆಂಟಿನಲ್ಲಿ ಹಾಗೆ ತಾನೆ ಅವರನ್ನ ಕರೆಯೋದು, ಚೈಲ್ಡ್ ?'

ಅವನ ತುಂಟು ಕಣ್ಣುಗಳು ನಕ್ಕವು. ಅರುಣ ಹುಸಿಕೋಪದಿಂದ ಮುಖವನ್ನು ತಿರುಗಿಸಿದಳು. ಇವನಿಗೆ ಯಾವಾಗಲೂ ಅಷ್ಟೇ—ತನ್ನ ಬಗ್ಗೆ ಹುಡುಗಾಟವೇ ! ಅದೂ ಈ ಸಲ ಊರಿನಿಂದ ಬಂದ ಮೇಲೆ ತುಂಬಾ ದೊಡ್ಡ ಮನುಷ್ಯ ಆಗಿಬಿಟ್ಟಿದ್ದಾನೆ !

ಸಂಧ್ಯಾರವಿಯ ಹೊತ್ತು ಆಗ ; ಆದರೆ ಪ್ರಸಾದ್‌ನ ಬಾಳಿನಲ್ಲಿ ? ಕೆಂಗಿರಣದಲ್ಲಿ ಮಿಂದು—ಅಪೂರ್ವಶೋಭೆಯಿಂದ ಬೆಳಗುತ್ತಿದ್ದ ಆ ಮುಗ್ಧ ಮುಖದತ್ತ ಕಣ್ಣಾಡಿಸಿದಾಗ, ಯಾವುದೋ ಚೇತನದ ಅರಿವಾಯಿತು—ಅವನಲ್ಲಿ.

'Anger ಬಂತೇನು Dear, ಇಷ್ಟೊಂದು little thingsಗೆಲ್ಲಾ ! My ವೈ್ಫ್ !' ಬೇಕೆಂದು ಕಾನ್ವೆಂಟ್ ಭಾಷೆಯಲ್ಲಿ ಕೀಟಲೆ ಮಾಡಿದ.

ಅರುಣ ಬದಲೀಯಲಿಲ್ಲ ; ಮತ್ತೂ ಮುಖ ತಿರುವಿದಳು.

'ಯಾಕಿಷ್ಟು Feel ಮಾಡ್ಕೋತಿಯು, ಮೆನ್ ! Promise, ನನ್ನ mindನಲ್ಲಿ ಏನೂ ಇಲ್ಲ, ಮೆನ್ ! If you want ಇಂದೂ ಆಂಟೀನ ask ಮಾಡು, Men, ಅವರು tell ಮಾಡ್ತಾರೆ—ನಾನು What sort of boy ಅನ್ನೋದನ್ನ. ಸುಮ್ಮನೆ tease ಮಾಡಿದೆ ಅಷ್ಟೇ—ಅಷ್ಟಕ್ಕೇ ಇಷ್ಟೊಂದು temperಏ ! ಇಷ್ಟು cool ಆದ್ರೆ ಹೇಗೆ, ಮೆನ್ ? ಏನಾದ್ರೂ talk ಮಾಡು—ನಾನು listen ಮಾಡ್ತೀನಿ ; ಆಗ Nice ಆಗಿರತ್ತೆ-ಅ ? ಹೋಗಲಿ, ಅಲ್ಲಿ ಏನಾದ್ರೂ drink ಮಾಡೋಣ—Come ಮಾಡ್ತೀಯ ?

ಅಲ್ಲೇ ಎಲ್ಲಾದ್ರೂ sit ಮಾಡಿ....'

'ನೀವೋ ನಿಮ್ಮ ಕನ್ನಡಾನೋ!' ಅರುಣಾಳಿಗೆ ನಗು ತಡೆಯಲಿಲ್ಲ. 'ಬಹಳ ಜೋರಾಗಿದೆಯಲ್ಲಾ ?'

'ನಿಮ್ಮ ಕಾನ್ವೆಂಟ್ ಕನ್ನಡ!' ಪ್ರಸಾದ್ ಕೈಮುಗಿದ—'ಮಾತು ಮಾತಿಗೂ ಇಂಗ್ಲೀಷ್ ಪದ! ಸಾಕಪ್ಪಾ ಸಾಕು, ಈ ಕಾನ್ವೆಂಟ್ ವಿದ್ಯಾಭ್ಯಾಸ!'

'ಯಾಕೆ—ನಿಮಗೆ ನನ್ನ ಕಾನ್ವೆಂಟ್ ಇಷ್ಟವಿಲ್ಲವೇ ?' ಅರುಣ ಸ್ವಲ್ಪ ಸಿಟ್ಟಾಗಿ ಕೇಳಿದಳು.

'ಉಹು–ಆದರೆ ಅದರ ಹುಡುಗಿಯರು ಮಾತ್ರ ಇಷ್ಟ....ತುಂಬಾನೇ ಇಷ್ಟ....' ತುಂಟನಗೆ ನಗುತ್ತಾ ಹೇಳಿದ—'ಅದ್ರಲ್ಲೂ ಒಬ್ಬ ಹುಡುಗಿ....'

ಅವಳ ಮುಖ—ಹತ್ತಿರದಲ್ಲೇ ಅರಳಿ ನಿಂತಿದ್ದ ಕೆಂಪುಗುಲಾಬಿಗಿಂತ ಕೆಂಪಗಾಯಿತು.

'ಅರುಣ ?' ಅವನು ಮುಂದಕ್ಕೆ ಬಾಗಿ, ಹುಲ್ಲಿನ ಗರಿಗಳನ್ನೆಲ್ಲ ಕಿತ್ತು ಎಸೆಯುವುದರಲ್ಲಿ ತಲ್ಲೀನಳಾಗಿದ್ದ ಅವಳ ಬಲಗೈಯನ್ನು ಹಿಡಿದುಕೊಂಡು ಬಲವಾಗಿ ಅಮುಕಿದ. ಅವಳು ಪ್ರತಿಭಟಿಸಲಿಲ್ಲ. ಎಷ್ಟು ಹಿತಕರವಾಗಿತ್ತು ಅವನ ಸ್ಪರ್ಶ! ಮೈಯಲ್ಲೆಲ್ಲಾ ಅವಳಿಗೆ ಏನೋ ಒಂದು ತರಹದ ಅದ್ಭುತ ರೋಮಾಂಚನ! ಸಂಮಿಶ್ರಿತ ಭಾವನೆಗಳಿಂದ ಅವಳು ತಲೆಯೆತ್ತಿದಳು. ಈರ್ವರ ದೃಷ್ಟಿಗಳೂ ಒಂದಾದವು.

'ಅರುಣ್ ?' ಅವನ ಧ್ವನಿಯಲ್ಲಿ ಅದೇನು ಮಾರ್ದವತೆ! ಕರೆದಾಗ ಹೆಸರಿನಲ್ಲಿ ಅದೇನು ಇಂಪು!—'ನನ್ನನ್ನ ಮದುವೆಯಾಗ್ತೀಯಾ ?'

'ಮ–ದು–ವೆ !'

ಅದೇಕೋ ಏನೋ, ಅಸ್ಪಷ್ಟ ಭೀತಿ ಅರುಣಾಳ ಮನದಲ್ಲಿ ನೆರಳಾಡಿತು ಯಾವುಯಾವುದೋ ಬೇಡದ ಚಿತ್ರಗಳು—ಆಲೋಚನೆಗಳು, ಕಣ್ಣುಮುಂದೆ ಹರಿದಾಡಿದವು ; ಮನಸ್ಸನ್ನು ಕೊರೆದವು.

'ನಿಮ್ಮ ಕಾನ್ವೆಂಟ್ ಭಾಷೆಯಲ್ಲೇ ಕೇಳಬೇಕೇನು ? 'Will you marry me ?' ಎಂದು ಕೇಳಿದರೇನಾ, ನಿಂಗೆ ಅರ್ಥವಾಗೋದು ? ನಂಗೆ ಆ ಸ್ಟೈಲ್ ಎಲ್ಲಾ ಬರೋದಿಲ್ಲಾಮಾ! ಪಕ್ಕಾ ಬ್ರಾಹ್ಮಣ ನಾನು!'

ಅವನು ಕೀಟಲೆ ಮಾಡಿದ. ಅವಳು ನಕ್ಕಳಷ್ಟೇ; ಬದಲೀಯಲಿಲ್ಲ.

'ಉ–ಅನ್ನು ಹುಡುಗಿ; ಅನ್ನೇ ಹುಡುಗಿ!' ಅವನು ಪಕ್ಕಕ್ಕೆ ಸರಿದು ಬಲವಂತ ಮಾಡಿದ—'ಇಲ್ಲದಿದ್ರೆ ನೋಡು, ನಾನು ಮನೆಗೆ ಹಿಂತಿರುಗೊಲ್ಲ ಅಷ್ಟೇ. ಇಲ್ಲೇ ಭಾವೀಲಿ ಬಿದ್ದು ಸತ್ತುಹೋಗ್ತೀನಿ.'

'ಅನ್ಯಾಯ—ಇಲ್ಲಿ ಭಾವೀನೇ ಇಲ್ಲವಲ್ಲಾ?' ಅರುಣ ಆತಂಕ ತೋರಿದಳು—'ಪಾಪ, ಮನೆಗೇ ಹಿಂತಿರುಗಿ ಬೀಳಬೇಕಾಗತ್ತೆ!'

'ಈಗ ಯಾರೇ ಭಾವಿಗೆ ಬೀಳೋದು?' ಅವನು ರೇಗಿದ—'ನೀನು 'ಹೂ' ಅಂದೇ ಅಂತೀ; ನಾ ನಿನ್ನನ್ನ ಮದುವೆ ಆಗೇ ಆಗ್ತೀನಿ—ಎಲ್ಲಿ ಹೇಳು ಹುಡುಗಿ? ನಾ ಇಷ್ಟೊಂದು ಒಲವು ತೋರಿದಮೇಲೂ ನೀನು 'ಒಲ್ಲೆ' ಅಂದ್ರೆ—ನಾಚಿಗ್ಗೇಡು!'

ಜಗಮೊಂಡ! ಕೊನೆಗೂ 'ಹೂ' ಹೇಳಿಸಿಯೇ ಬಿಟ್ಟ ಪ್ರೇಮಿಗಳ ಭಾಷೆಯಲ್ಲಿ!

* * *

ಈ ಶುಭಸಮಾಚಾರವನ್ನು ಕೇಳಿ ಇಂದೂ ಆಂಟಿ ಹಿಗ್ಗಿದರು. ಪ್ರಸಾದ್—ಅವರಿಗೆ ಹೊಟ್ಟೆಯಲ್ಲಿ ಹುಟ್ಟಿದ ಮಗನಂತಾಗಿಬಿಟ್ಟಿದ್ದ. ಅರುಣಳಿಗೆ ಮಾತ್ರ ಯಾವುದೋ ಅಳುಕು.

ಪ್ರಸಾದ್‌ಗೆ ತನ್ನ ಬಗ್ಗೆ ಏನೇನೂ ಗೊತ್ತಿಲ್ಲ! ಎಲ್ಲವನ್ನೂ ಗೋಪ್ಯವಾಗಿಟ್ಟಿದ್ದು ಮದುವೆಯಾಗುವುದಕ್ಕಿಂತ, ತನ್ನ ತಾಯಿಯ ಚರಿತ್ರೆಯನ್ನು ತಿಳಿಸಿಬಿಟ್ಟರೆ ಮೇಲಲ್ಲವೇ?

ಎಂದಾದರೂ ಮೂರನೆಯವರ ಬಾಯಿಂದ ತಿಳಿದರೆ? ಮನಸ್ಸಿಗೆ ಆಘಾತವಾಗಿ—ತನ್ನ ಬಗ್ಗೆ ತಿರಸ್ಕಾರ ಮೂಡಿದರೆ? ಹಾಗಾಗುವುದಕ್ಕಿಂತ ತಾನೇ ತಿಳಿಸುವುದು ಒಳ್ಳೆಯದು! ಆದರೆ....ಅರುಣ ಹಿಂಜರಿದಳು. ಯಾವ ಹುಡುಗಿ, ಯಾವ ಬಾಯಿಯಿಂದ ತಿಳಿಸಬಲ್ಲಳು—'ನನ್ನ ಸುತ್ತ ರಕ್ತ ಮಡುಗಟ್ಟಿ ನಿಂತಿದೆ! ನಾನೊಬ್ಬ ಪಾಪಿಷ್ಠ ಹುಡುಗಿ! ನನ್ನ ತಾಯಿ ಇಂಥವಳು—ಮಹಾ ಕೆಟ್ಟ ಹೆಂಗಸು—ಕಾರಾಗೃಹವಾಸಿ!' ಎಂದು? ಯಾವ ಮಗಳು ತಾನೆ ಹೇಳಬಲ್ಲಳು?

'ಸುಮ್ಮನಿದ್ದು ಬಿಡು—' ಇಂದೂ ಆಂಟಿ ಉಪದೇಶಿಸಿದರು—'ಏನೂ

ತಿಳಿಸಬೇಡ; ನಿನ್ನ ಪಾಡಿಗೆ ನೀನು ಬಾಯಿ ಮುಚ್ಚಿಕೊಂಡಿರು. ನಿನ್ನ ತಾಯಿಯ ಪಾಪಕರ್ಮಕ್ಕೂ ನಿನಗೂ ಸಂಬಂಧವಿಲ್ಲ. ಆದರಲ್ಲಿ ನಿನ್ನ ಪಾತ್ರ ಏನಿದೆ ಹೇಳು? ಅರಿಯದ ಕೂಸು ತಾನೆ ನೀನು? ಯಾರ ತಪ್ಪಿಗೆ ಯಾರು ಹೊಣೆ? ಅನ್ಯಾಯವಾಗಿ ನಿನ್ನ ಸುಖವನ್ನ ಕೈಯಾರೆ ಹಾಳುಮಾಡ್ಕೋ ಬೇಡಮ್ಮಾ...' ಆದರೆ ಅರುಣ ಕೇಳಬೇಕಲ್ಲಾ? ಸುಳ್ಳು, ಕಪಟ, ಒಂದೂ ಅವಳಿಗಾಗದು!

'ಯಾವುದ್ರಲ್ಲೂ ಅಷ್ಟೇ—ನೇರವಾಗಿರಬೇಕು ಆಂಟಿ! ಅದ್ರಲ್ಲೂ ಗಂಡಹೆಂಡಿರ ನಡುವೆ ಮುಚ್ಚುಮರೆ ಇರಬಾರದು.' ಒಂದೇ ಮನಸ್ಸು ಮಾಡಿಬಿಟ್ಟಳು!

ಅಂದು—ಪಾರ್ಕ್‌ಗೆ ಅವರಿಬ್ಬರೂ ಹೋಗಿದ್ದ ದಿನ. ಪ್ರಸಾದ್ ಯಾವುದೋ ವಿಷಯವನ್ನು ಬಲುಸ್ವಾರಸ್ಯವಾಗಿ ವಿವರಿಸುತ್ತಿದ್ದನು. ಮಿಕ್ಕ ದಿನಗಳಾಗಿದ್ದಲ್ಲಿ, ಅರುಣ ನಕ್ಕುನಕ್ಕು ಹಣ್ಣಾಗುತ್ತಿದ್ದಳು. ಆದರೆ ಅವನ ಗಮನ ಅವಳ ಮೇಲಿರಲಿಲ್ಲ. ಮನಸ್ಸು ಭಾವ-ದ್ವಂದ್ವಗಳ ತರಂಗಗಳಲ್ಲಿ ಸಿಕ್ಕಿ ಹೊಯ್ದಾಡುತ್ತಿತ್ತು

'ನೀನು ಕೇಳಿಸಿಕೋತಿಲ್ಲ, ಎಲ್ಲೋ ನೋಡ್ತಿದೀ!' ಹಠಾತ್ತನೆ ಪ್ರಸಾದ್ ನಿಲ್ಲಿಸಿ ಆಕ್ಷೇಪಿಸಿದ.

'ಹೌದು ಪ್ರಸಾದ್' ಅರುಣ ಒಪ್ಪಿಕೊಂಡಳು. ಅವಳ ಧ್ವನಿ ಬಳಲಿತ್ತು; ಕಣ್ಣುಗಳು ನಿಸ್ತೇಜವಾಗಿದ್ದವು.

'ಯಾಕೆ ಅರುಣ್, ಮೈ ಹುಷಾರಿಲ್ಲವೇ?' ಹತ್ತಿರ ಸಾರಿ, ಅವಳ ಕೆನ್ನೆಗಳ ಮೇಲೆ ಮೃದುವಾಗಿ ಕೈಯನ್ನಿಟ್ಟು ಕೇಳಿದ.

ಅರುಣಳ ಕಣ್ಣಾಲಿಗಳು ತುಂಬಿಬಂದವು. ನೀರವವಾಗಿ ಅಳತೊಡಗಿದಳು. ಅವನು ಮತ್ತೂ ಗಾಬರಿಯಾದ. ತನ್ನ ರಾಣಿಗೆ ಏನು ಕೆಟ್ಟದಾಯಿತೋ? ಹೇಳಬಾರದೆ? ಅವಳು ತಡವರಿಸಿದಳು. ಹೇಗೆ ಹೇಳುವುದು? ಕೊನೆಗೆ ಧೈರ್ಯಮಾಡಿಕೊಡು ಆರಂಭಿಸಿದಳು.

ಅವಳು ಎಲ್ಲಾ ಹೇಳಿ ಮುಗಿಸುವವರೆಗೂ ಪ್ರಸಾದ್ ನಿಶ್ಚಲನಾಗಿ ಕುಳಿತಿದ್ದ—ಮೈಯೆಲ್ಲಾ ಕಿವಿಯಾಗಿ! ಮುಗಿಸಿದ ತಕ್ಷಣ, ಅರುಣಳ ತಲೆಯನ್ನು ತನ್ನ ಎದೆಯತ್ತ ಎಳೆದುಕೊಂಡು, ದೃಢಧ್ವನಿಯಲ್ಲಿ ಹೇಳಿದ—

'ಅರುಣ, ಈ ಹಳೆಯ ಕಥೆಗೂ ನಿಂಗೂ ಸಂಬಂಧವಿಲ್ಲ ; ನಿರಪರಾಧಿ ನೀನು ! ಯಾರದೋ ತಪ್ಪಿನ ಛಾಯೆ ನಿನ್ನ ಸುಂದರ ಜೀವನವನ್ನ ಯಾಕೆ ಕಾಡಬೇಕು ಹೇಳು ? ಅದರ ಆ ಕರಾಳ ನೆರಳನ್ನ ದೂರ ತಳ್ಳು, ಅರುಣ ! ಈಗತಾನೆ ಹೇಳಿದೆಯಲ್ಲಾ ಕಥೆ, ಅಷ್ಟನ್ನೂ ಮರೆತುಬಿಡು ! ಏನೂ ನಿಂಗೆ ಗೊತ್ತೇ ಇಲ್ಲವೇನೋ–ಹಿಂದೆ ಇದೆಲ್ಲಾ ನಡೆಯಲೇ ಇಲ್ಲವೇನೋ, ಎಂಬಂತಿದ್ದು ಬಿಡು. ಒಟ್ಟಿನಲ್ಲಿ, ನನ್ನ ಹಿಂದಿನ ಅರುಣ ಆಗು, ಮರಿ....'

'ಆದರೆ, ಅವನ್ನೆಲ್ಲಾ ಜ್ಞಾಪಿಸಿಕೊಂಡ್ರೆ ಭಯ....'

'ಭಯ ಎನ್ನೋ ಮಾತನ್ನ ಮಾತ್ರ ನನ್ನ ಮುಂದೆ ಎತ್ತಬೇಡ !' ಪ್ರಸಾದ್‌ನ ಧ್ವನಿ ಮೃದುವಾಗಿದ್ದರೂ, ಅದರಾಳದಲ್ಲಿ ಬಿಗಿಯಿತ್ತು—'ಜೀವನದ ಪ್ರತಿ ಸುಖ-ದುಃಖಗಳಿಗೂ ಭಾಗಿಯಾಗಿ ನಾನಿರೋವಾಗ, ನಿಂಗ್ಯಾಕೆ ಭಯ ?'

ಅರುಣ ಬೆರಗಾಗಿ ಅವನನ್ನೇ ನೋಡುತ್ತಾ ಕುಳಿತಳು. ಹಠಾತ್ತನೆ ಅವಳ ಹೃದಯದ ಮೇಲಿನಿಂದ ದೊಡ್ಡ ಹೊರೆ ಇಳಿಸಿದಂತಾಗಿತ್ತು.

'ಇನ್ಮೇಲೆ—' ಪ್ರಸಾದ್ ತಿಳಿಸಿದ—'ನನ್ನ-ನಿನ್ನ ಬಾಳಿನ ಸುಖ ದುಃಖಗಳೇ ನಮ್ಮ ಜೀವನದ ಕಥೆ ! ಆ ಕಥೆಯೇ ನಮಗೆ ನಿತ್ಯನೂತನ —ಶಾಶ್ವತ ! ನೀನು ಒಂದು ವೇಳೆ—ಒಂದು ವೇಳೆ ವ್ಯಭಿಚಾರಿಣಿಯ ಮಗಳಾಗಿದ್ದರೂ, ನಾನು ನಿನ್ನನ್ನೇ ಮದುವೆಯಾಗ್ತಿದ್ದೆ, ಅರುಣ ! ನಿನ್ನ ತಾಯಿಯ ಕಥೆಗೂ ನಮಗೂ ಸಂಬಂಧವಿಲ್ಲ !'

* * *

ಕೆಲವು ತಿಂಗಳಿಂದ ಚಂದ್ರೂ ಅಂಕಲ್‌ನ ಪತ್ತೆಯೇ ಇರಲಿಲ್ಲ !

'ಏನಾಯಿತೋ ?' ಕಳವಳಗೊಂಡ ಅರುಣಳನ್ನು ಇಂದೂ ಆಂಟಿ ಸಮಾಧಾನ ಮಾಡಿದರು—'ಯಾವ ಕೆಲಸದ ಮೇಲೆ ಎಲ್ಲಿಗೆ ಹೋಗಿದ್ದಾರೋ ? ಗೊತ್ತಿಲ್ಲವೇ ಅವರ ಬುದ್ಧಿ ? ಇಂದು ಹೆಸರಘಟ್ಟ—ನಾಳೆ ನ್ಯೂಯಾರ್ಕ್, ನಾಡದ್ದು ಪೂನಾ—ಆಚೆ ನಾಡದ್ದು ಜಪಾನ್ ! ಹೀಗೆ....'

'ಅಷ್ಟೊಂದು ದುಡ್ಡು ಎಲ್ಲಿಂದ ಬರತ್ತೆ, ಆಂಟಿ ?'

'ಬಿಸಿನೆಸ್, ಮಗೂ ; ಮೊದಲು ತುಂಬಾ ಬಡತನದಲ್ಲಿದ್ರು ; ಹೇಳಲಿಲ್ವೇ, ಚಂದ್ರೂ ಬಡವರ ಮಗ-ಎಂದು ? ಮದುವೆ ಆಯ್ತು ನೋಡು,

ಆರಂಭವಾಯ್ತು ಶುಕ್ರದೆಶೆ! ಥೇಟ್ ಲಕ್ಷ್ಮಿ ಹಾಗೇ ಕಾಲಿಟ್ಟಳು, ಆ ಹೆಂಡತಿಯಾದವಳು! ನೋಡೋದಿಕ್ಕೆ ಅಷ್ಟಷ್ಟರಲ್ಲೇ ಇದ್ದಳು—ಒಳ್ಳೇ ಪೂರ್ವ ಕಾಲದ ಪುಟ್ಟಕ್ಕನ ಹಾಗೆ....ಆದರೆ ಆ ಅದೃಷ್ಟ? ಮುಖ್ಯ....' ಇಂದೂ ಆಂಟಿ ನಿಟ್ಟುಸಿರಿಟ್ಟರು—'ಜೀವನದಲ್ಲಿ ಅದೃಷ್ಟ ಅನ್ನೋದು ಇರಬೇಕು, ನೋಡು; ಅದೃಷ್ಟ ಇಲ್ಲದೇ ಇರೋವನು ಬದುಕಿದ್ರೂ ಸತ್ತಂತೆಯೇ!'

'ಆಂಟಿ?' ಅರುಣ ಆತಂಕದಿಂದ ಪ್ರಶ್ನಿಸಿದಳು—'ಚಂದ್ರೂ ಅಂಕಲ್‌ಗೆ ನನ್ನ-ಪ್ರಸಾದ್‌ನ ವಿಷಯ ತಿಳಿದಿಲ್ಲ. ತಿಳಿದರೆ ಸುಮ್ಮನಿರ್ತಾರೆಯೇ?'

'ಅರುಣಾ?' ಇಂದೂ ಆಂಟಿಯ ಸಲಹೆಯಲ್ಲಿ ಒಂದು ತರಹದ ಆವೇಶವಿತ್ತು—'ಹಿಂದೆ ನಿನ್ನ ತಾಯಿ ಹೀಗೇ, ದೊಡ್ಡವರಿಗೆ ಬೆದರಿ, ಕೈಯಾರೆ ತನ್ನ ಭವಿಷ್ಯವನ್ನೇ ಹಾಳುಮಾಡಿಕೊಂಡುಬಿಟ್ಟಳು. ಆ ನೋವು ಅವಳಿಗೇ ಗೊತ್ತು! ಜೊತೆಗೆ--ತನ್ನನ್ನೇ ನಂಬಿದ್ದ ಇನ್ನೊಬ್ಬನ ಹೃದಯವನ್ನೂ ನೋಯಿಸಿದಳು, ನೀನೂ ಅದೇ ಕೆಲಸ ಮಾಡ್ತೀಯಾ?'

ಅರುಣ ಏನೂ ಹೇಳಲಾರದಾದಳು.

'ಮದುವೆ ವೈಯಕ್ತಿಕ ಪ್ರಶ್ನೆ; ನೋಡಮ್ಮಾ, ನೀನೂ ವಯಸ್ಸಿಗೆ ಬಂದವಳು; ಓದಿದವಳು. ನಿನ್ನ ಮನಸ್ಸಿನ ಕರೆ ಯಾವ ದಿಕ್ಕಿನಿಂದ ಬರತ್ತೋ, ಅದಕ್ಕೇ ಓಗೊಡು. ನಿರ್ಭಯವಾಗಿ ಓಗೊಟ್ಟು, ಬಾಳಸಂಗಾತಿಯ ಜೊತೆ ಬಂದ ಕಷ್ಟವನ್ನೆಲ್ಲಾ ಎದುರಿಸು!'

ಹಠಾತ್ತನೆ ಚಂದ್ರೂ ಅಂಕಲ್ ಒಂದು ದಿನ ಪ್ರತ್ಯಕ್ಷವಾದರು.

'ಅಬ್ಬಾ, ಬಂದಿರಾ!' ಅರುಣ ಓಡಿಹೋಗಿ ಕಟ್ಟಿಕೊಂಡಳು—'ಬಿಸಿನೆಸ್ ಟೂರ್ ಮೇಲೆ ಹೋದವರ ಸವಾರಿ ಎಲ್ಲಿ ನೆಟ್ಟಗೆ ವೈಕುಂಠಕ್ಕೆ ಎದ್ದುಬಿಡ್ತೋ ಅಂತ ಅಂಜಿದ್ದೆ.'

'ಎಲ್ಲಿ ಹೋಗಿತ್ತು ರಾಯರ ಅಂಬಾರಿ ಇಷ್ಟು ದಿನ?' ಗಂಟಲನ್ನು ಕೇಳಿ ಹೊರಬಂದ ಇಂದೂ ಆಂಟಿ ಟವಲಲ್ಲಿ ಕೈ ಒರೆಸಿಕೊಳ್ಳುತ್ತಾ ಕೇಳಿದರು—'ನಮ್ಮ ಮಗೂ ಅಂತೂ, ಒಳ್ಳೆ ಎಳೇ ಕರು ಹಂಗೆ ಒದ್ದಾಡಿಬಿಡ್ತು!'

ಕೇಳಿ ಚಂದ್ರೂ ಅಂಕಲ್‌ರವರ ಮುಖ ಸಂತೋಷದಿಂದ ಅಗಲವಾಯಿತು. 'ಹೌದೇನೇ ಹುಡುಗಿ?' ಕೆನ್ನೆ ಚಿವುಟಿದರು—'ನನ್ನ ಅನೂಪ್ ಬಂದಿದ್ದಾನೆ—' ಎಲ್ಲರಿಗೂ ಘೋಷಿಸಿದರು.

'ಯಾವಾಗ ? ಎಲ್ಲಿಂದ ? ಎಷ್ಟು ದಿನ ಆಯ್ತು ?' ಕೊಟ್ಟ ಪ್ರಶ್ನೆಗಳ ಬಾಣಗಳಿಂದ ಬಿರಿದುಹೋಗುವಂತಾಯಿತು.

*　*　*

ಓದು ಮುಗಿಸಿ ಹಿಂತಿರುಗಿದ ಅನೂಪ್ ಒಳ್ಳೆ ಜೋರಾಗಿದ್ದ.

'ಪಕ್ಕಾ ಸಾಹೇಬನಾಗಿಬಿಟ್ಟಿದ್ದೀಯಲ್ಲೋ ?' ಇಂದೂ ಆಂಟಿ ಉದ್ಗರಿಸಿದರು—'ಗುರುತೇ ಸಿಗಲ್ಲ ?'

ಅವನನ್ನು ನೋಡಿದ ತಕ್ಷಣ ಯಾಕೋ ಅರುಣಳಿಗೆ ತುಂಬಾ ಮುಜುಗರ. ಉಹು—ತನ್ನ ಹಿಂದಿನ ಅನೂಪ್ ಅಲ್ಲ ಇವನು ! ಆಪಾದ ಮಸ್ತಕ ಬರೀ ಸ್ಟೈಲು-ಥಳಕು ! ಅಮೇರಿಕಾ ಹೀಗೆ ಮಾಡುತ್ತದೆಯೆ ?

ಚಿಕ್ಕಂದಿನಲ್ಲೂ ಅನೂಪ್ ಚೆಲುವ ; ಈಗ ಫುಲ್‌ಡ್ರೆಸ್‌ನಲ್ಲಿ ಒಂದು ನಿಂತನೆಂದರೆ, ಒಳ್ಳೇ ಹಾಲಿವುಡ್ ನಟ ಎದುರು ಬಂದು ನಿಂತಂತೆಯೇ ! ಒಳ್ಳೆಯ ವರ ಬಂದಿರುವ ಸುದ್ದಿ ಹರಡುವುದು ಎಷ್ಟು ಹೊತ್ತು ?

ಊರಲ್ಲಿರುವ ನೆಂಟರೆಲ್ಲ ಬಾದರಾಯಣ ಸಂಬಂಧಗಳನ್ನು ಹುಡುಕಿ ಕಾಗದ ಹಾಕಿದರು ; ಜಾತಕ ಹಿಡಿದುಕೊಂಡು ಅಲೆದಾಡಿದರು. ಹೆಣ್ಣು, ಕಾರು, ಹಣ್ಣು, ಹೊನ್ನು, ಎಲ್ಲವನ್ನೂ ಅವನ ಮುಂದೆ ಪೆರೇಡ್ ಮಾಡಿದರು. ಎಲ್ಲಾ ಹುಡುಗಿಯರಿಗೂ ಇಷ್ಟ, ಅಮೇರಿಕಾಗೆ ಹೋಗುವುದಕ್ಕೆ !

'ನೋಡಿದೆಯಾ ನನ್ನ ಮಗನ್ನ ? ಹೇಗಿದಾನೆ !' ಚಂದ್ರೂ ಅಂಕಲ್ ಹೆಮ್ಮೆಯಿಂದ ಅವನ ಬೆನ್ನ ಹಿಂದೆ ಓಡಿಯಾಡಿದರು ; ಅಪರೂಪದ ಬೊಂಬೆಯನ್ನು ಪ್ರದರ್ಶಿಸುವಂತೆ ಅವನನ್ನು ಪ್ರದರ್ಶಿಸಿದರು ! ಆದರೆ ಅರುಣ ಒಬ್ಬಳು ಮಾತ್ರ ಬೆರಗಾಗಲಿಲ್ಲ. ತಮಾಷೆ ನೋಡುವಂತೆ ವೀಕ್ಷಿಸಿದಳು. ಅಮೇರಿಕನ್ನರಿಗಿಂತ ಅಮೇರಿಕನ್‌ನಂತೆ ಕಾಣುತ್ತಿದ್ದ ಅನೂಪ್ ! ಸದಾ ಅಲ್ಲಿಯದೇ ಮಾತು !

'ನಾವು ನ್ಯೂಯಾರ್ಕಿಗೆ ಹೋಗಿದ್ದಾಗ . ವಾಷಿಂಗ್‌ಟನ್‌ನಲ್ಲಿ ಒಂದು ಸಲ ಯುನೈಟೆಡ್ ನೇಷನ್ಸ್‌ನಲ್ಲಿ....ಕೆನೆಡಾ ಟ್ರಿಪ್ ಹಾಕಿದಾಗ....ಅಲ್ಲಿ ವೈಟ್‌ಹೌಸ್ ಹೇಗಿದೆ ಅಂದ್ರೆ.. ....'

ಕೇಳಿ ಕೇಳಿ ಅರುಣಳಿಗೆ ಚಿಟ್ಟು ಹಿಡಿದುಹೋಯಿತು

ಯಾವುದಾದರೊಂದು ಸಾಮಾನನ್ನು ನೋಡಿದರೂ ಅಷ್ಟೇ—

'ಅಯ್ಯೋ, ಇದೇನು ಮಹಾ ! ನಮ್ಮ ಅಮೇರಿಕಾದಲ್ಲಿ...ಅಮೇರಿಕಾದ ಸಾಮಾನುಗಳು....ಅಮೇರಿಕಾದಿಂದ ನಾ ತಂದಿರೋ ಸಾಮಾನುಗಳು ..'

'ಮಿಸ್ಟರ್ ಅಮೇರಿಕಾ !' ಅರುಣ ಅವನಿಗೆ ಹೆಸರಿಟ್ಟುಬಿಟ್ಟಳು.

ಅನೂಪ್‌ನ ಮನವನ್ನು ಅರುಣ ಸೆರೆಹಿಡಿದುಬಿಟ್ಟಳು. ಮೊದಲಿನಿಂದ ಅಷ್ಟೇ, ಅವನಿಗೆ ಅರುಣ ಎಂದರೆ ಬಹಳ ಪ್ರೀತಿ ; ಬಾಲ್ಯಗೆಳೆಯರು ತಾನೆ ?

ಅಲ್ಲದೆ—'ಅವಳೇ ಮುಂದಕ್ಕೆ ನಿನ್ನ ಹೆಂಡತಿಯಾಗುವವಳು' ಎಂದು ಅವನ ತಂದೆ ಚಿಕ್ಕಂದಿನಿಂದ ಹೇಳಿ ಹೇಳಿ, ಅವಳ ಚಿತ್ರ ಅವನ ಹೃದಯ ದಲ್ಲಿ ಸ್ಥಿರವಾಗಿ ನಿಂತಿತ್ತು !

ದೂರ ಇದ್ದರೂ ತಂದೆ ಅರುಣಳ ವಿಷಯವನ್ನು ಪುಟಪುಟವಾಗಿ ಬರೆ ಯುತ್ತಿದ್ದರು. ಅವರ ಆ ಸುಂದರ ಚಿತ್ರಣ ಅವಳ ಸ್ಥಾನವನ್ನು ಮತ್ತೂ ಏರಿಸಿತ್ತು.

ಈ ಸಲ ಆತ ಇಂಡಿಯಾಗೆ ಬಂದ ಉದ್ದೇಶ—ಅವಳನ್ನು ಮದುವೆ ಯಾಗಿ, ತನ್ನೊಡನೆ ಅಮೇರಿಕಾಗೆ ಕರೆದುಕೊಂಡು ಹೋಗಲು. ಆದರೆ ಅವಳು ನಿರಾಕರಿಸಿದಾಗ ಅವನಿಗಾದ ನಿರಾಶೆ ಅಷ್ಟಿಷ್ಟಲ್ಲ. ಜೊತೆಗೆ ದಿಗ್ಭ್ರಮೆ ಸಹ ! ತನ್ನನ್ನೇ ಅರುಣ ತಿರಸ್ಕರಿಸುತ್ತಿರುವುದು !

'ಅನೂಪ್—ಅರುಣ...' ಎಂದು ಬಾಯಿಪಾಠ ಮಾಡಿಕೊಂಡು ಬಿಟ್ಟಿದ್ದ ಚಂದ್ರೂ ಅಂಕಲ್ ಅರುಣಳ ಈ ಪ್ರತಿಭಟನೆಯನ್ನು ಕಂಡು ಸಿಡಿಲು ಬಡಿದವರಂತೆ ನಿಂತರು. ಇದೇ ಅವರ ಸ್ವಪ್ನವಾಗಿತ್ತು ; ಸ್ವಪ್ನದಲ್ಲಿ ಸಹ ಅಂದುಕೊಂಡಿರಲಿಲ್ಲ—ಹೀಗಾಗಬಹುದು, ಎಂದು !

'Excuse me—' ಕೂಗಾಡಿದರು—(ಅನೂಪ್ ಜೊತೆ ಇದ್ದಿದ್ದು ಈ 'Excuse me, Sorry, O K. No mention—' ಎಲ್ಲಾ ಅವರಿಗೂ ಬಾಯಿಪಾಠವಾಗಿಬಿಟ್ಟಿದ್ದವು !) 'ನನ್ನ ಅನೂಪ್ ಏನಾಗಿದ್ದಾನೆ ?'

ಎಂದೂ ಕೋಪ ತೋರದಿದ್ದ ಅಂಕಲ್‌ನ ಈ ರೌದ್ರಾವತಾರವನ್ನು ಕಂಡು ಬೆದರಿದಳು ಅರುಣ ಈ ಸಂಬಂಧವನ್ನು ಇಷ್ಟೊಂದು ಮನಸ್ಸಿಗೆ ಹಚ್ಚಿಕೊಂಡು ಬಿಟ್ಟಿದ್ದಾರೆಯೇ ಅಂಕಲ್ ? ಹಾಗಾದರೆ, ಅವರ ಹೃದ ಯಕ್ಕೆ ಘಾಸಿಯಾಗುವುದು ಖಂಡಿತ !

'ನಾನು ಎಣಿಸಿದಷ್ಟು ಸುಲಭವಲ್ಲ ಕೆಲಸ—' ಅಂದುಕೊಂಡಳು.

ತನ್ನದೇ ಮೂಕ ವೇದನೆಯಲ್ಲೂ, ತನಗೆ ತಂದೆತಾಯಿ ಎಲ್ಲ ಆಗಿದ್ದು, ತನ್ನನ್ನು ಒಂದು ಘಟ್ಟಕ್ಕೆ ತಂದಿದ್ದ ಆ ಹಿರಿಯ ಜೀವಕ್ಕೆ ಇನ್ನಷ್ಟು ನೋವನ್ನುಂಟುಮಾಡಲು ಮನಸ್ಸು ಒಪ್ಪಲಿಲ್ಲ. ಹಿಮ್ಮೆಟ್ಟಿತು.

ಆದರೆ ಪ್ರಸಾದ್‌ನ ಮುಖ ಕಣ್ಣು ಮುಂದೆ ಬಂದು ನಿಲ್ಲುತ್ತಲೂ ಮತ್ತೆ ದೃಢವಾಯಿತು. ತನ್ನ ಬಾಳನ್ನು ತಾನು ರೂಪಿಸಿಕೊಳ್ಳಬೇಕು! ಅದೇ ಮಾನವನ ಆದ್ಯಕರ್ತವ್ಯ. ತಮ್ಮ ತಮ್ಮ ಸುಖ-ದುಃಖ, ಒಲವು-ದ್ವೇಷಗಳನ್ನು ಅರಿತು, ಜೀವನ ದೋಣಿಯನ್ನು ಉಚಿತ ಮಾರ್ಗದಲ್ಲಿ ತಿರುಗಿಸದಿದ್ದರೆ–ಬಿಡದಿದ್ದರೆ, ಅವರಿಗೂ ನಷ್ಟ! ಸಮಾಜಕ್ಕೂ ದ್ರೋಹ!

ಅತೃಪ್ತ ಹೃದಯ, ವಿಫಲಗೊಂಡ ಆಕಾಂಕ್ಷೆಗಳ ಬಿಸಿಯುಸಿರು, ಇವೆಲ್ಲಾ ಎಲ್ಲಿಯವರೆಗೆ ತಾಗುವುದೋ—ಯಾರ ಶಾಂತಿಸುಖವನ್ನು ಭಗ್ನಗೊಳಿಸುವುದೋ?

'ಏನಾದ್ರೂ ಸರಿ—ನಾನೀಗ ಸೋಲಬಾರದು' ನಿರ್ಧರಿಸಿದಳು—'ಪ್ರಸಾದ್‌ಗೆ ವಾಗ್ದಾನ ಮಾಡಿದಮೇಲೆ, ಅವನಿಗೆ ನನ್ನ ಹೃದಯವನ್ನ ಅರ್ಪಿಸಿದಮೇಲೆ, ಎರಡನೇ ಮಾತೇ ಇಲ್ಲ! ನನ್ನ ಜೀವನ—ನನ್ನದು!'

'ನನ್ನ ಅನೂಪ್ ನೋಡೋದಿಕ್ಕೆ ಎಷ್ಟು ಚೆನ್ನಾಗಿದ್ದಾನೆ! ಏನು ಜೋರಾಗಿದ್ದಾನೆ! ಎಲ್ಲರೂ ಹೇಳ್ತಾರೆ—ಒಳ್ಳೇ ರಾಜಕುಮಾರನ ಹಾಗಿದ್ದಾನೇಂತ! ಅವನು ಓದಿರೋ ಓದು ನೋಡು? ಫಾರಿನ್ ಯೂನಿವರ್ಸಿಟಿಗಳ ಎಲ್ಲಾ ಬಿರುದೂ ಅವನ ಹೆಸರಿನ ಹಿಂದೆ ಇದೆ. ಅದೇ ನಿನ್ನ ಪ್ರಸಾದ್ ಬರೀ ಒಂದು ಎಂ.ಎಸ್‌.ಸಿ., ಅಷ್ಟೇ. ನನ್ನ ಅನೂಪ್‌ನನ್ನ ಮದುವೆ ಮಾಡಿಕೊಂಡ ತಕ್ಷಣ ಅಮೇರಿಕಾಗೆ ಹೋಗಬಹುದು; ಅಲ್ಲಿ ಅವನಿಗೆ ಏನು ದೊಡ್ಡ ಕೆಲಸ ಇದೆ ಗೊತ್ತೆ? ನೀನೂ ಅಲ್ಲಿ ಮುಂದಕ್ಕೋದಬಹುದು. ನಿಂಗದೆಲ್ಲಾ ತುಂಬಾ ಇಷ್ಟ—ಅಲ್ಲವಾ? ಕಾಂಟಿನೆಂಟ್ ಸುತ್ತೋದು, ಭಾರಿ ಓದು ಓದೋದು, ಏರೋಪ್ಲೇನ್‌ನಲ್ಲಿ ತಿರುಗೋದು, ಕಾರ್ ಡ್ರೈವ್ ಮಾಡೋದು—ಇವೆಲ್ಲಾ?'

ಎಳೇ ಮಗುವಿಗೆ ಆಸೆ ತೋರಿಸುವಂತೆ ತೋರಿಸಿದರು ಚಂದ್ರೂ ಅಂಕಲ್. ಪರಿಪರಿಯಾಗಿ ಹೇಳಿನೋಡಿದರು. ದೈನ್ಯದಿಂದ ಬೇಡಿಕೊಂಡರು. ಉಹುಂ—ಅರುಣ ಬಡಪೆಟ್ಟಿಗೆ ಜಗ್ಗಲಿಲ್ಲ.

'ನಾನು ಮದುವೆ ಆದ್ರೆ, ನನ್ನ ಪ್ರಸಾದ್‌ನನ್ನೇ ಆಗೋದು! ಇಲ್ಲದಿದ್ರೆ ನನ್ ಆಗಿಬಿಡ್ತೀನಿ—' ಹೆದರಿಸಿದಳು. 'ಚಿಕ್ಕಂದಿನಿಂದ ನಂಗೆ Nun ಆಗಬೇಕೂಂತ ಆಸೆ '

'ಸರಿ, ಹಾಳಾಗಿ ಹೋಗು!—ನಿನ್ನ ತಲೆ!' ಚಂದ್ರೂ ಅಂಕಲ್ ಕೂಗಾಡಿದರು—'ಆದರೆ ನಿಲ್ಲು ಒಂದು ವಿಷಯ! ನಿನ್ನ ಡ್ಯಾಡಿ ವಿಲ್‌ನಲ್ಲಿ ಬರೆದಿದ್ದಾರೆ—'ಅರುಣ ಚಂದ್ರೂವಿನ ಮಗ ಅನೂಪ್‌ನನ್ನೇ ಮದುವೆ ಆಗಬೇಕು. ಅವಳು ಬೇರೆ ಯಾರನ್ನಾದ್ರೂ ಮದುವೆಯಾದಳೋ, ಒಂದು ಬಿಡಿಕಾಸು ಸಹ ಅವಳಿಗೆ ಹೋಗಬಾರದು ; ಎಲ್ಲ ಅನೂಪ್‌ಗೆ ಹೋಗಬೇಕು' —ಎಂದು. ನಿನ್ನ ಪ್ರಸಾದ್ ಕೂಡ ಬಡವ; ಹೇಗೆ ಜೀವಿಸ್ತೀರಿ ?'

ಅರುಣ ಮೂಕಳಾಗಿ ನಿಂತಳು. ಕೊನೆಯ ಅಸ್ತ್ರವನ್ನು ಉಪಯೋಗಿಸಿದ ಚಂದ್ರೂ ಅಂಕಲ್, ಚಾವಟಿ ಏಟನ್ನು ಕೊಟ್ಟು, ಹದಮಾಡಿದ ಕುದುರೆಯ ಎದುರಿಗೆ ನಿಂತ ಸವಾರನಂತೆ ನಕ್ಕರು—ಆತ್ಮತೃಪ್ತಿಯಿಂದ.

ಏನು ಹೇಳಬೇಕೋ—ಏನು ಮಾಡಬೇಕೋ, ಅರುಣಳಿಗೆ ತೋಚಲಿಲ್ಲ. ಇಂತಹ ವಿಲಕ್ಷಣ ಉಯಿಲನ್ನು ಯಾರು ಊಹಿಸಿದ್ದರು ?

'ಜಗತ್ತು ವಿಶಾಲವಾಗಿದೆ, ಅಂಕಲ್–' ಕೊನೆಗೆ ಮೆಲ್ಲನುಸುರಿದಳು: 'ನಮ್ಮಂಥಾ ಬಡವರು–ಕಡುಬಡವರು, ಲೆಖ್ಖವಿಲ್ಲದಷ್ಟು ಇದ್ದಾರಲ್ಲ. ಅವರೆಲ್ಲ ಬದುಕಿಲ್ಲವೇ ? ಅವರೆಲ್ಲ ಸುಖವಾಗಿಲ್ಲವೇ ? ಹಾಗೇ ನಾವೂ....ಏನೋ ಇದ್ದದರಲ್ಲಿ ಸುಖವಾಗಿ, ಮಾನವಾಗಿ, ನಾನೂ ಪ್ರಸಾದ್ ಒಟ್ಟಿಗೆ ಬಾಳಿದ್ರೆ ಸಾಕು. ನಾವಿಬ್ರೂ ಜೊತೆಯಲ್ಲಿದ್ದರೆ, ಅದೇ ಸ್ವರ್ಗ! ಗುಡಿಸಲೇ ಅರಮನೆ!....ಯಾರಿಗೆ ಗೊತ್ತು ?....' ಅವಳ ಕಣ್ಣುಗಳು ಫಳಫಳನೆ ಹೊಳೆದವು—'ನಾನು ಪ್ರಸಾದ್‌ನ ಬಾಳಿನಲ್ಲಿ ಕಾಲಿಟ್ಟ ಘಳಿಗೆ ಒಳ್ಳೆಯದಾಗಿ, ಅವನು ಇನ್ನೂ ಅನುಕೂಲಸ್ಥಿತಿಗೆ ಬರಬಹುದು! ನಾನು ಅವನ ಭಾಗ್ಯಲಕ್ಷ್ಮಿಯಾಗಿ ಪರಿಣಮಿಸಬಹುದು !....'

'ಅರುಣ್!....' ಚಂದ್ರೂ ಅಂಕಲ್ ಧಿಗ್ಗನೆದ್ದು ಹತ್ತಿರ ಬಂದು, ಅರುಣಳ ಹಣೆಯ ಮೇಲೆ ಮುತ್ತಿಟ್ಟರು.

'ನಿನ್ನ ತಾಯಿಗೆ ಬರಲಿಲ್ಲ ನೋಡು, ಈ ಉದಾರ ಮನೋಭಾವ ! ಅವಳದೇ ಬೇರೆಯ ತರಹ–ಬರೀ ದುರಾಶೆ! ದುರಾಶೆ! ತಾನೂ ಹಾಳಾ

ದಳು, ನನ್ನ ಬಾಳನ್ನೂ ಒಣಗಿಸಿದಳು ! ಅದೇ ನೀನು ...'

ಇನ್ನೂ ಏನೇನು ಹೇಳುತ್ತಿದ್ದರೋ, ಗಂಟಲು ಕಟ್ಟಿತು. ಅಲ್ಲಿ ಒಂದು ಕ್ಷಣವೂ ನಿಲ್ಲಲಾರದವರಂತೆ ಹೊರಟುಹೋದರು. ಅವರು ಹೊರಟುಹೋದ ದಿಕ್ಕನ್ನೇ ನೋಡುತ್ತಾ ನಿಂತಳು ಅರುಣ—ಬೆಪ್ಪಳಂತೆ.

'ಎಕ್ಸ್‌ಯೂಸ್ ಮಿ....' ಹಿಂದುಗಡೆ ಅನೂಪ್‌ನ ಧ್ವನಿಯಾಯಿತು 'ಕಂಗ್ರ್ಯಾಚುಲೇಷನ್ಸ್'—ಬಲವಂತದ ನಗೆಯಿಂದ ಹೇಳಿದನು.

ಏನು ಮಾತನಾಡಬೇಕು ಎಂಬುದೇ ತೋರದೆ, ಅರುಣ ತಲೆತಗ್ಗಿಸಿ ನಿಂತಳು—ಅಪರಾಧಿನಿಯಂತೆ.

ಕ್ಷಣ ಬಿಟ್ಟು—'ನನ್ನನ್ನ ಕ್ಷಮಿಸು, ಅನೂಪ್—' ಎಂದಳು.

'No mention' ಅನೂಪ್ ನಕ್ಕನು_ಯಾಂತ್ರಿಕವಾಗಿ.

'ಹೇಗಿದೆ ಈಗ ನೆಗಡಿ ?' ಅರುಣ ಕೇಳಿದಳು.

ಏನಾದರೂ ಮಾತು ಬೆಳೆಸಬೇಕಲ್ಲ ?'Better—Thank you!'

'ಊರಿಗೆ ಹೋಗೋದಿಕ್ಕೂ ಮುಂಚೆ, ಖಂಡಿತ ಬಂದು ನಮ್ಮನ್ನ ನೋಡಬೇಕು ಅನೂಪ್. ನಮ್ಮ ಸ್ನೇಹ ಮುರೀಬಾರ್ದು.'

'ಓ.ಕೆ.'

'ಇವನ Vocabularyಯೆಲ್ಲ ಮುಗಿಯಿತು—ಇನ್ನೇನಿದೆ ಮಾತನಾಡೋದಿಕ್ಕೆ ?' ಅರುಣ ಚಿಂತಿಸಿದಳು—'ಅಮೇರಿಕಾ ವಿಷಯ ಕೇಳಲೆ ? ಅಲ್ಲಿಗೆ ರಾತ್ರಿಯೆಲ್ಲಾ ಜಾಗರಣೆಯೇ ಸರಿ ! ಒಂದು ಹರಿಕಥೆಯನ್ನೇ ಆರಂಭಿಸಿಬಿಡ್ತಾನೆ !'

'ನನ್ನ ಡ್ಯಾಡಿ ಹೇಳಿದ್ದನ್ನ ಮನಸ್ಸಿಗೆ ಹಚ್ಕೋಬೇಡ, ಅರುಣ್.' ಅನೂಪ್‌ನ ಧ್ವನಿ ಮೃದುವಾಯಿತು—'ಈ Old peopleರ natureಏ ಹಾಗೆ—ಏನು ಮಾಡೋದು ? ನಮ್ಮ ಅಮೇರಿಕಾದಲ್ಲೂ....'

ಅಷ್ಟರಲ್ಲಿ ಗಂಟೆ ಎಚ್ಚರಿಸಿತು ; ಯಾವುದೋ ಕಾರ್ಯಕ್ರಮದ ನೆನಪು ಬಂದಿತು.

'Excuse me—' ಹೊರಟುಬಿಟ್ಟ.

ಅರುಣ ನಿರಾಳವಾಗಿ ಉಸಿರಾಡಿದಳು. ಹುಟ್ಟಿದ ಇಪ್ಪತ್ತು ವರ್ಷಗಳಿಗೆ —ಈಗ ಮೊದಲ ಬಾರಿಗೆ-ಹೃದಯ ಹಗುರವಾಗಿತ್ತು. ಬಲವಾದ ಆಸರೆಯನ್ನು ಹಿಡಿದಿತ್ತು ; ದೃಢವಾದ ದಂಡೆಯನ್ನು ಮುಟ್ಟಿತ್ತು.

ಉಯಿಲಿನ ಬಗ್ಗೆ ಕೇಳಿ ಇಂದೂ ಆಂಟಿ ವ್ಯಥಿತರಾದರು—'ನಿನ್ನ ಡ್ಯಾಡಿ ಅಷ್ಟೊಂದು ಕಟ್ಟುನಿಟ್ಟಾಗಿ ಬರೆಯಬಾರದಿತ್ತು! ಕೇಂದ್ರ ಸರ್ಕಾರದ ನಿರ್ಣಯದ ಹಾಗೆ ಬೆಳೆಸಲು ನೋಡಬಹುದೇ? ಯಾರೋ ಮಾಡಿದ ಪಾಪವನ್ನ ಯಾರ ಮೇಲೋ ಕಾರುವುದೇ? ಛೇ!—ಸ್ವಲ್ಪ ಯೋಚಿಸ ಬೇಕಿತ್ತು-ತಿಳಿದುಕೊಳ್ಳಬೇಕಿತ್ತು! ಅನ್ಯಾಯ—ಸಿಂಧೂ ನಿನ್ನ ಬಗ್ಗೆ ಸ್ವಲ್ಪ ಸಹ ಯೋಚಿಸಲಿಲ್ಲ! ಮಗಳ ಸುಖವನ್ನ ಕೈಯಾರೆ ಹಿಸುಕಿದಳು! ಎಂತಹ ಕೆಟ್ಟ ತಾಯಿ!' ಕೈಕೈ ಹಿಸುಕಿಕೊಂಡರು.

ಪ್ರಸಾದ್‌ಗೆ ಮಾತ್ರ ಈ ಸಮಾಚಾರದಿಂದ ಸಂತೋಷವಾಯಿತು.

'ಒಳ್ಳೇದೇ ಆಯ್ತು-ಹೀಗಾಗಿದ್ದು! ನಂಗೆ ತುಂಬಾ ಭಯ ಆಗಿತ್ತು, ಎಲ್ಲಿ ನಿಂಗೆ ಧಿಡೀರ್ ಅಂತ ಅಷ್ಟು ಆಸ್ತೀನೂ ಒಟ್ಟಿಗೆ ಬಂದು, ನನ್ಮೇಲೆ ಜೋರು ಮಾಡ್ತೀಯೋ-ಅಮ್ಮಾವರಿಗೆ ಜಂಬ ಏರುತ್ತೋ ಅಂತ! ಸದ್ಯ ಹಾಗಾಗಲಿಲ್ಲ!'

ಅರುಣಳ ಹೃದಯ ಹಗುರವಾಯಿತು. ಹೌದು, ಅವಳಿಗೆ ತುಂಬಾ ಅಂಜಿಕೆಯಾಗಿತ್ತು—'ಪ್ರಸಾದ್‌ಗೆ ನಿರಾಶೆಯಾದರೆ ಹೇಗೆ?' ಎಂದು.

ಹಣದ ಮಹಿಮೆಯೇ ಅಂತಹುದು! ಎಂತಹ ಒಳ್ಳೆಯವರನ್ನೂ ಕೆಟ್ಟವರನ್ನಾಗಿ ಮಾಡುವ ಶಕ್ತಿ ಹಣಕ್ಕಿದೆ! ಅಭಿಮಾನದಿಂದ ಅವನತ್ತ ನೋಡಿದಳು, 'ಅಮೇರಿಕಾಗೆ ನಾ ಹೋಗದಿದ್ರೇನು? ಕಾಂಟಿನೆಂಟನ್ನ ನೋಡದಿದ್ರೇನು? ಕಾರು-ಏರೋಪ್ಲೇನನ್ನ ಇಡದಿದ್ರೇನು? ಚಿನ್ನದಂಥಾ ಪತಿಯ ಕೈಹಿಡಿಯುವೆ; ಅದಕ್ಕಿಂತಲೇ ಭಾಗ್ಯ?' ಎಂದುಕೊಂಡಳು. 'ಅದೇ ಪರಮ ಆಸ್ತಿ.'

'ನಂಗೆ ನಿಮ್ಮ ಬಗ್ಗೆ ಸ್ವಲ್ಪ ನಿರಾಶೆಯೇ ಆಯ್ತು' ಬೇಕೆಂದು ಕೀಟಲೆ ಮಾಡಿದಳು—'ಪರವಾಗಿಲ್ಲ ಅರುಣ, ಆ ನಿನ್ನ ಅನೂಪ್‌ನನ್ನೇ ಮದುವೆ ಯಾಗು ಅಂತ, ದೊಡ್ಡ ಮನಸ್ಸಿನಿಂದ ಹೇಳುವಿರಿ—ಅಂದುಕೊಂಡಿದ್ದೆ....,

'ಹಾಗೆಲ್ಲ ನನ್ನದನ್ನ ಸುಲಭವಾಗಿ ಬಿಟ್ಟುಕೊಡೋ ಆಸಾಮಿ ನಾನಲ್ಲ, ಅರುಣ—' ಅವನು ಮೀಸೆ ತಿರುವಿದನು. 'ಆ—ಅಷ್ಟೊಂದು ದೊಡ್ಡ ಗುಣ

ನನ್ನಲ್ಲಿಲ್ಲ. ಆದರೆ—' ಕಡೆಗಣ್ಣಿನಿಂದ ನೋಡಿದನು—'ಯಾರಿಗೆ ಗೊತ್ತು, ಎಂದಾದರೊಂದು ದಿನ ಪಶ್ಚಾತ್ತಾಪ ಪಡುವೆನೇನೋ—'ಅನ್ಯಾಯ, ಅರುಣಳನ್ನ ಅನೂಪ್‌ಗೆ ಒಪ್ಪಿಸಿ, ಹಾಯಾಗಿ ಕೈ ಒದರಲಿಲ್ಲವಲ್ಲಾ !' ಎಂದು.'

'ಹಾಗೆ ಪಶ್ಚಾತ್ತಾಪ ಪಡೋಹಾಗೆ ನಾನೆಂದೂ ಆಡೋದಿಲ್ಲ—ಭಯ ಪಡಬೇಡಿ—' ಅರುಣ ಭರವಸೆ ಕೊಟ್ಟಳು.

'ಥ್ಯಾಂಕ್ ಯೂ.'

'ದಮ್ಮಯ್ಯ, ಜನ್ಮಪೂರ್ತಿ ಥ್ಯಾಂಕ್ ಯೂ ಹೇಳಬೇಡಿ !' ಅರುಣ ಮುಖ ಸೊಟ್ಟ ಮಾಡಿದಳು—'ಅನೂಪ್ ಊರಿಗೆ ಬಂದಾಗಿನಿಂದ ಇದೇ ಮಾತು ! ಮಾತುಮಾತಿಗೂ ಥ್ಯಾಂಕ್ ಯೂ, ನೋ ಮೆನ್‌ಷನ್, ಎಕ್ಸ್ ಯೂಸ್ ಮಿ, ಓ.ಕೆ. ! ಕೇಳಿ ಕೇಳಿ ತಲೆ ಚಿಟ್ಟುಹಿಡಿದು ಹೋಗಿದೆ !' ಅವನು ನಕ್ಕನು.

'ಅದಿರಲಿ—ಅನೂಪ್ ಹೇಗಿದ್ದಾನೆ ನೋಡೋದಿಕ್ಕೇ? ಹೇಳಲೇ ಇಲ್ಲವಲ್ಲ ?' ಜ್ಞಾಪಿಸಿಕೊಂಡು ಕೇಳಿದನು.

'ತುಂಬಾ ಚೆನ್ನಾಗಿದ್ದಾನೆ !' ಅರುಣ ಉತ್ಸಾಹದಿಂದ ಆರಂಭಿಸಿ ದಳು—'ಥೇಟ್ ಧರ್ಮೇಂದ್ರ ಹಾಗೇ ಇದ್ದಾನೆ ! ಯೂರೋಪಿಯನ್ನರಿ ಗಿಂತ ಬೆಳ್ಳಗೆ ! ಅದ್ರಲ್ಲೂ ನೀಲಿ ಸೂಟನ್ನ ಹಾಕ್ಕೊಂಡು ಎದುರಿಗೆ ಬಂದು ನಿಂತರೆ....'

'ಕತ್ತಲಾಯ್ತು' ಪ್ರಸಾದ್ ಅವಸರವಸರವಾಗಿ ಎದ್ದನು—'ಇಂದೂ ಆಂಟಿ ಕಾಯ್ತಿರಬಹುದು—ನಾವು ಬರಲಿಲ್ಲಾಂತ....ಹೋಗೋಣವೇ ?'

'ಅನೂಪನಷ್ಟು ರೂಪವಂತ....' ಅರುಣ ಮುಂದುವರಿಸಿದಳು—ರಸ್ತೆಯಲ್ಲೂ....

'ಅನೂಪ್ ಹಾಳಾದ !' ಪ್ರಸಾದ್ ಅಸಹನೆಯಿಂದ ಅವಳ ಬಾಯಿ ಮುಚ್ಚಿದವನು—'ನಮಗೇನಾಗಬೇಕಾಗಿದೆ, ಊರಲ್ಲಿರುವವರ ರೂಪವನ್ನ ಕಟ್ಕೊಂಡು ! ಬೇಗ ಹೆಜ್ಜೆ ಇಡು !'

* * *

'ಎಲ್ಲಿ ಸ್ವೀಟ್ಸ್, ಮೆನ್ ?' ಅರುಣಳ ಎನ್‌ಗೇಜ್‌ಮೆಂಟ್‌ನ ಸುದ್ದಿ ಯನ್ನು ಕೇಳಿದ ತಕ್ಷಣ ಕಾನ್ವೆಂಟಿಗೆ ಕಾನ್ವೆಂಟೇ ಮುತ್ತಿಗೆಹಾಕಿತು.

'ಇಗೋ, ರೆಡಿಯಾಗಿ ತಂದಿದೀನಿ.' ಅರುಣ ಬ್ಯಾಗ್‌ನಿಂದ ತೆಗೆದು, ಎಲ್ಲರಿಗೂ ಕಾಣುವಂತೆ ಎತ್ತಿಹಿಡಿದಳು. ಎಲ್ಲರೂ ನೋಡಿದರು. ಗೊಳ್ಳೆಂದು ನಕ್ಕರು. ಎರಡು ದೊಡ್ಡ ಸೀಸೆ ತುಂಬಾ ಉಪ್ಪಿನಕಾಯಿ! 'ಪಿಕಲ್ಸ್' ಎಂದರೆ ಬೋರ್ಡರ್ಸ್‌ಗೆಲ್ಲ ಪ್ರಾಣ! Day Scholarsನ್ನು ಗೋಗರೆದು ತರಿಸಿಕೊಳ್ಳುತ್ತಿದ್ದರು—ಅದರಲ್ಲೂ ಆವೂಗಾಯನ್ನು!

'Very hot! Too hot men! Terrible!' ಎನ್ನುತ್ತಲೇ ಚಪ್ಪರಿಸುತ್ತಿದ್ದರು! ಒಂದು ತಿಂಗಳ ಉಪ್ಪಿನಕಾಯಿಯನ್ನು ಎರಡೇ ದಿನಗಳಲ್ಲಿ ಮುಗಿಸಿಬಿಡುತ್ತಿದ್ದರು!

ಮದರ್ ಸುಪೀರಿಯರ್‌ಗಂತೂ ಎಲ್ಲಿಲ್ಲದ ಸಂತೋಷ ಆ ಹೊತ್ತು! ತಾನು ಹೊಣೆ ಹೊತ್ತು ಬೆಳೆಸಿದ ಹುಡುಗಿ—ಬೇಡವೇ? ಅರುಣಳಿಗೆ ಮ–ದು–ವೆ!

'ಸದ್ಯ—ನಮ್ಮ ಚೈಲ್ಡ್ ಎಲ್ಲರಂತಾದಳು! ಆವರಿಸಿದ್ದ ಆ ಮಂಕು ತೊಲಗಿತಲ್ಲಾ—ಎಲ್ಲಾ ಜೀಸಸ್‌ನ ಕೃಪೆ!' ಕ್ರಾಸ್ ಮಾಡಿಕೊಂಡರು.

ಆ ಕಾನ್ವೆಂಟನ್ನು ಬಿಟ್ಟು ಪ್ರಸಾದ್‌ನ ಜೊತೆ ಹೊರಟಾಗ ಅರುಣಳಿಗೂ ವೇದನೆಯಾಯಿತು. ಏನೆಂದರೂ ತಾನೂ ಬೆಳೆದ ವಾತಾವರಣ–ಜನ. ಅದೇ ತನ್ನ ಮನೆ, ಅವರೇ ತನ್ನ ಬಂಧುಬಳಗ, ಎನ್ನುವಂತಾಗಿತ್ತು.

ಇದ್ದಕ್ಕಿದ್ದಂತೆ ಮಂಡಿಯೂರಿ, ಮೊದಲ ಬಾರಿಗೆ ಹಿಂದೂ ಪದ್ಧತಿಯ ಪ್ರಕಾರ ನಮಸ್ಕಾರ ಮಾಡಿದ ಅರುಣಳನ್ನು ಹಿಡಿದೆತ್ತಿದಾಗ, ಮದರ್ ಸುಪೀರಿಯರ್‌ರ ಕಣ್ಣುಗಳಿಂದ ನೀರು ಸುರಿಯುತ್ತಿತ್ತು. ಅಂದು ಪೂರ್ತಿ ಆ ಕಾನ್ವೆಂಟಿನ ಮದರ್ಸ್-ಸಿಸ್ಟರ್ಸ್ ಎಲ್ಲರೂ ಪ್ರಾರ್ಥನೆ ಮಾಡಿದರು—ಅರುಣಳ ಶ್ರೇಯಸ್ಸಿಗಾಗಿ

ಗುಡ್‌ಬೈ ಹೇಳಲು ಅರುಣ–ಪ್ರಸಾದ್ ಈರ್ವರೂ ಇಂದೂ ಆಂಟಿಯ ಮನೆಗೆ ಬಂದಾಗ ಆಕೆ ಪೂಜಾಗೃಹದಲ್ಲಿದ್ದರು.

'ಇದೇನು ಆಂಟಿ—ತಪಸ್ಸು?' ಅರುಣ ತಮಾಷೆ ಮಾಡಿದಳು.

'ನಿಂಗೆ ಒಳ್ಳೆಯದಾಗಲಿ—ನಿನ್ನ ಸಂಸಾರ ಸುಭದ್ರವಾಗಿ ನಿಲ್ಲಲಿ, ಅಂತ ದೇವರನ್ನ ಕೇಳಿಕೋತಾ ಇದ್ದೆ, ಮಗು. ಎರಡು ವಂಶಗಳ ಏಕಮಾತ್ರ ಕುಡಿ ನೀನು!'

ಇದನ್ನು ಹೇಳುವಾಗ ಇಂದೂ ಆಂಟಿಯ ಧ್ವನಿ ಗದ್ಗದವಾಯಿತು. ನವದಂಪತಿಗಳ ಹೃದಯ ತುಂಬಿಬಂದಿತು.

'ನಮ್ಮಲ್ಲೇ ಬಂದು ಇದ್ದುಬಿಡಿ, ಆಂಟೀ—' ಈರ್ವರೂ ಒಟ್ಟಿಗೇ ಹೇಳಿದರು--'ಹೇಗೂ ನಮಗೆ ಯಾರೂ ಇಲ್ಲ ನೀವೇ ತಾಯಿ, ತಂದೆ, ಅಜ್ಜಿ, ತಾತ, ಆಂಟಿ, ಫ್ರೆಂಡ್ ಎಲ್ಲಾ ! ಚೆನ್ನಾಗಿರತ್ತೆ.'

'ಇಲ್ಲ ಮಗು—' ಇಂದೂ ಆಂಟಿ ಖಂಡಿತವಾದ ಧ್ವನಿಯಲ್ಲಿ ಅವರ ಬೇಡಿಕೆಯನ್ನು ನಿರಾಕರಿಸಿದರು 'ನಾನು ಇಷ್ಟರಲ್ಲೇ ಕಾಶಿಗೆ ಹೋಗ್ತೀನೆ.'

'ಕಾಶಿಗೆ? ಅಲ್ಲಿ ಯಾರಿದ್ದಾರೆ?' ಅರುಣ ಪ್ರಶ್ನಿಸಿದಳು.

'God-ಗಾಡ್ ಇದಾರೆ' ಪ್ರಸಾದ್ ವಿವರಿಸಿದನು— 'ವಿರೂಪಾಕ್ಷ ಗಾಡ್ ಇದಾರೆ ಅಲ್ಲಿ. ಪಾಪ! ಕಾನ್ವೆಂಟ್‌ನ ಹುಡುಗಿ; ಜೀಸಸ್‌ನ ಬಿಟ್ರೆ, ನಿಂಗೆ ಏನು ಗೊತ್ತು ಹೇಳು?'

'ನಾನು ನಿನ್ನ ಮಮ್ಮಿಗೆ ಮಾತು ಕೊಟ್ಟಿದ್ದೆ—' ಇಂದೂ ಆಂಟಿಯ ಮುಖದ ಮೇಲೆ ಅಪೂರ್ವ ಶಾಂತತೆ ನೆಲೆಸಿತ್ತು—ನಿನ್ಮೇಲೆ ಕಣ್ಣಿಟ್ಟು, ಕೈಲಾದ ಸಹಾಯ ಮಾಡ್ತೀನಿ, ಎಂದು. ಇಂದು ಅದು ನೆರವೇರಿತು! ನನ್ನ ಕರ್ತವ್ಯ ಮುಗಿಯಿತು. ದೇವರು ನಿನಗೆ ಒಳ್ಳೇದು ಮಾಡಲಿ. ನೆನಪಿನಲ್ಲಿಡು ಅರುಣ—ಏನಾದ್ರೂ ಸರಿ, ನಿನ್ನ ಕರ್ತವ್ಯಾನ ಮರೀಬೇಡ! ಆದರ್ಶ ಗಳನ್ನ ತುಳೀಬೇಡ! ಸ್ನೇಹ-ವಿಶ್ವಾಸಗಳನ್ನ ಹಾಳುಮಾಡ್ಕೋಬೇಡ. ಒಳ್ಳೆಯ ಬಾಳನ್ನ ಬಾಳು, ಮಗು .. ಏನಾದ್ರೂ ಸರೀನೆ, ಒಳ್ಳೆಯ ಬಾಳನ್ನ ಬಾಳು....ಒಳ್ಳೆಯ ಬಾಳನ್ನ ಬಾಳು!....'

ಅರುಣ ಹೊರಟು ನಿಂತಾಗ, ಎರಡು ತಂತಿ ಮತ್ತು ಒಂದು ಪತ್ರ ವನ್ನು ಇಂದೂ ಆಂಟಿ ಅವಳ ಕೈಯಲ್ಲಿಟ್ಟರು. ಅರುಣ ಒಡೆದು ಓದಿದಳು. ಅವಳ ವಿವಾಹಿತ ಜೀವನ ಸುಖಮಯವಾಗಿರುವಂತೆ ಹಾರೈಸಿ ಚಂದ್ರೂ ಅಂಕಲ್ ಮತ್ತು ಅನೂಪ್ ತಂತಿ ಕಳುಹಿಸಿದ್ದರು. ಕಾಗದದಲ್ಲಿ ಬರೆದಿತ್ತು:

'ತಂದೆಯ ಆಸ್ತಿ ಮಗಳಿಗೇ ಸೇರಬೇಕು; ಅಲ್ಲದೆ, ನಮಗೆ ಬೇಕಾ ಗಿದ್ದುದು ನೀನು—ಅರುಣ! ನಿನ್ನ ಆಸ್ತಿ ಅಲ್ಲ! ನನಗೆ ಆ ಸೌಭಾಗ್ಯ ವಿಲ್ಲದೆ ಹೋಯಿತು. ಒಳ್ಳೆಯದು, ದೇವರು ನಿನ್ನನ್ನ ಚೆನ್ನಾಗಿ ಕಾಪಾಡಲಿ. ನಿನ್ನ ಆಸ್ತಿಯನ್ನ ನಿನಗೇ ಹಿಂತಿರುಗಿಸಿದ್ದೀವಿ....'

ತನ್ನ ಕಣ್ಣುಗಳನ್ನೇ ನಂಬಲಾರದವಳಂತೆ ಅರುಣ ಆ ಕಾಗದವನ್ನೇ ಓದುತ್ತಾ ನಿಂತಳು—ಮತ್ತೂ ಮತ್ತೂ !

'ನಂಗೆ ಬೇಡ ಆ ಆಸ್ತಿ !' ಪ್ರಸಾದ್ ಸಿಟ್ಟಿನಿಂದ ಆ ಕಾಗದವನ್ನು ಹರಿಯಲು ಮುಂದೆ ಬಂದನು—'ನಾನು ಬಡವ ನಿಜ; ಆದರೆ ನನ್ನ ಗುಡಿಸಿಲಲ್ಲಿ....'

'ಅಷ್ಟು ಅವಸರಪಡಬೇಡ' ಇಂದೂ ಆಂಟಿ ತಡೆದರು—' ಏನಾದ್ರೂ ದುಡುಕಬಾರದು, ನೋಡು ! ಅದ್ರಲ್ಲೂ ಗಂಡಸರು ! ಈ ಆಸ್ತಿ ನ್ಯಾಯವಾಗಿಯೇ ಅರುಣಳದ್ದು ; ಮತ್ತು, ನಾನು ಶಪಥ ಮಾಡಿ ಹೇಳ್ತೀನೆ—ಇದರ ಒಂದೊಂದು ಕಾಸೂ ನ್ಯಾಯುವಾದ ಹಣ ! ಎಲ್ಲಾ ಅವಳ ತಂದೆಯದು. ಚಂದ್ರೂ ಅಂಕಲ್ ಈ ಕಾಗದದಲ್ಲಿ ಬರೆದಿರೋ ಹಾಗೆ, ತಂದೆಯ ಆಸ್ತಿ ಮಗಳಿಗೆ ತಾನೆ ಸೇರಬೇಕು ? ಏನೋ, ಅವರು ದುಡುಕಿ ವಿಲ್‌ನಲ್ಲಿ ಹಾಗೆ ಬರೆದಿಟ್ರು ಅಂದ್ರೆ, ನೀನೂ ಹೀಗಾಡಬಹುದಾ ? ಯಾವ ದೇವರಿಗೆ ಪ್ರೀತಿ ಹೇಳು ?....'

'ಆದರೆ....ಆಂಟಿ....'

'ಅರುಣ ಅನುಭವಿಸಲಿ ; ಅವಳ ಮಕ್ಕಳು ಅನುಭವಿಸಲಿ. ತಪ್ಪೇನು? ನಿನ್ನ ಗುಡಿಸಿಲಲ್ಲೇ ಇದ್ದು ತಿಂದರಾಯ್ತು—'

ಪ್ರಸಾದ್ ಶಾಂತವಾದನು—ಆಗಲೇ ಬೇಕಾಯಿತು.

'ಆಂಟೀ—ನಮ್ಮ ಊರಿಗೆ ಯಾವಾಗ ಬರ್ತೀರಿ ?' ಎಂದು ಅರುಣ ಕೇಳಿದಳು.

'ಗಾಡ್ ಮನಸ್ಸು ಮಾಡಿದಾಗ!' ಆಂಟಿ ತುಂಟನಗೆ ಚೆಲ್ಲಿದರು.

'ಗಾಡ್ ಗಾಡ್ ಗಾಡ್ ! ಯಾಕೋ ಇಂದೆಲ್ಲಾ ಗಾಡ್ ಮಾತೇ ಆಗಿಬಿಟ್ಟಿದೆ !' ಅರುಣ ನಕ್ಕಳು—'ಹೆವನ್‌ನಲ್ಲಿ ಗಾಡ್‌ಗೆ ನಮ್ಮ ಈ ನೆನಪಿನಿಂದಾಗಿ ಕೆಮ್ಮು ಶುರು ಆಗಿರ್ಬೇಕು—ಅಲ್ಲಾ ?'

'ಹೂ—ಬೇಗ ಬಾ, ಟ್ಯಾಕ್ಸಿ ಕಾಯ್ತಾ ಇದೆ ; ಆಮೇಲೆ ಯಾವ ಗಾಡೂ ಮೀಟರ್ ಚಾರ್ಜನ್ನ ಕೊಡಲ್ಲ !' ಪ್ರಸಾದ್ ಕೂಗಿಕೊಂಡನು.

ಇಂದು ಆಂಟಿ ಅರುಣಳ ನೆತ್ತಿಗೆ ಕುಂಕುಮ ಇಟ್ಟು, ಮೃದುವಾಗಿ ತುಟಿ ಒತ್ತಿದರು—ಮುಂಗುರುಳಿನ ಮೇಲೆ !

ಕಾಲುದಾರಿ ಹೋಗಿರಬೇಕು ಟ್ಯಾಕ್ಸಿ—ಅರುಣ ಹಠಾತ್ತನೆ ಜ್ಞಾಪಿಸಿಕೊಂಡಳು—'ಅರೇ, ನನ್ನ ಹ್ಯಾಂಡ್‌ಬ್ಯಾಗನ್ನ ಅಲ್ಲೇ ಬಿಟ್ಟುಬಿಟ್ಟೆ!'

'ಎಲ್ಲಿ ?' ಪ್ರಸಾದ್ ಪ್ರಶ್ನಾರ್ಥಕವಾಗಿ ತಿರುಗಿದನು.

'ಅದೇ—ಆಂಟಿಯ ಮನೆಯಲ್ಲಿ.'

'ಅಲ್ಲಿ ತಾನೆ ? ಇರಲಿ ಬಿಡು ; ಇನ್ನೊಂದು ಸಲ ಬಂದಾಗ ತೆಗೆದುಕೊಂಡು ಹೋದರಾಯ್ತು.'

'ಆದರೆ ಆಂಟಿಗೆ ಗೊತ್ತಿಲ್ಲ ನಾನಲ್ಲಿಟ್ಟಿರೋದು ! ವೆರಾಂಡಾದ ಕುರ್ಚಿ ಇದೆ ನೋಡಿ, ಅದರ ಮೇಲೆ ಮರೆತು ಬಂದಿದ್ದೀನಿ. ಅಲ್ಲದೆ—' ಅರುಣ ಗಾಬರಿಯಾದಳು—'ಆ ಹ್ಯಾಂಡ್‌ಬ್ಯಾಗ್‌ನಲ್ಲಿ ಚಂದ್ರೂ ಅಂಕಲ್‌ರ ಕಾಗದ ಇದೆ !'

'ಇಂಥಾ ಮರಗೂಳಿ ಜೊತೆ ನಾನು ಸಂಸಾರ ಮಾಡಿದ ಹಾಗೇ !' ಪ್ರಸಾದ್ ಗೊಣಗಿದನು—'ಡ್ರೈವರ್ ?'

'ಇಂಥಾ ಕೋಪಿಷ್ಠನ ಕೂಡ ನಾ ಬದುಕಿದಹಾಗೇ ಆಯ್ತು!' ಅರುಣ ಅವನ ಭುಜದ ಮೇಲೆ ಆರಾಮವಾಗಿ ಒರಗಿದಳು. 'ನಾ ನಿನ್ನ ಕೂಡ ಇರಲ್ಲಪ್ಪಾ ; ಎಲ್ಲಾದ್ರೂ ಒಂದು ಆಶ್ರಮಕ್ಕೆ ಸೇರಿಬಿಡ್ತೀನಿ.'

'ಆಶ್ರಮದಲ್ಲಿ ಹೆಂಗಸರನ್ನ ಸೇರಿಸಿಕೊಳ್ಳೋದಿಲ್ವಂತೆ ! ಕಾರಣ, ಸನ್ಯಾಸಿಯಾಗಿರೋವ್ರೆಲ್ಲ ಮತ್ತೆ ಗೃಹಸ್ಥರಾಗ್ತಾರಂತೆ !' ಪ್ರಸಾದ್ ವಿವರಿಸಿದನು—'ನನ್ನ ಬಡಗುಡಿಸಲೇ ಗತಿ ನಿಮಗೆ—ಅರುಣಮ್ಮನೋರೇ !'

ಟ್ಯಾಕ್ಸಿ ಇಂದೂ ಆಂಟಿಯ ಮನೆಯ ಮುಂದೆ ನಿಂತಾಗ ಮುಂಬಾಗಿಲು ಹಾಕಿತ್ತು.

'ಬೇಡ, ನೀವಿಲ್ಲೇ ಇರಿ—' ಅರುಣ ಮಾತ್ರ ಕೆಳಗಿಳಿದಳು.

'ಆಂಟಿ ಏನೋ ಪಟ್ಟಾಗಿ ಪೂಜೆ ಮಾಡ್ತಿರೋ ಹಾಗೆ ಕಾಣತ್ತೆ ; ಪಾಪ ! ಯಾಕೆ ಮೇಲೆ ಮೇಲೆ ಎಬ್ಬಿಸಬೇಕು ? ಹಿಂದಿನ ಬಾಗಿಲಿಂದ ಹೋಗಿ ಬಂದರಾಯ್ತು' ಎಂದುಕೊಂಡು ನಡೆದಳು.

ಅವಳು ಊಹಿಸಿದಂತೆ ಹಿಂದಿನ ಬಾಗಿಲಿನ ಅಗಳಿ ಹಾಕಿರಲಿಲ್ಲ. ಆಂಟಿಯನ್ನು ಚಕಿತಗೊಳಿಸುವ ಹುಡುಗತನ ; ಮೆಲ್ಲಡಿಯಿಟ್ಟು ಕಾಲಿಟ್ಟಳು ಒಳಗೆ.—ದಿಗ್ಭ್ರಾಂತಳಾಗಿ ನಿಂತಳು!

ಮೊಂಬತ್ತಿಯ ದೀಪದ ಮುಂದೆ ಕೂತಿದ್ದರು ಆಂಟಿ. ಮೆಲ್ಲಮೆಲ್ಲಗೆ ಅದರ ಕೆನ್ನಾಲಿಗೆ ಕೆಳಗೆ ಹರಡಿದ್ದ ಸೀರೆಯ ಮೇಲೆ ಹರಿದಾಡುತ್ತಿತ್ತು: ಕ್ರಮೇಣ ತೀವ್ರವಾಯಿತು.

ಬಿಳಿಯ ಪೀತಾಂಬರದ ಸೀರೆ....ಹಳೆಯ ಕಾಲದ ಸೀರೆ...ನಡು ನಡುವೆ ಜರಿ ಬುಟ್ಟಾ! ಸೆರಗು ತುಂಬಾ—ಈಗ ಎದ್ದು ಹಾರಿ ಬರು ವಂತಿದ್ದ ಜರಿಯ ಹಂಸಗಳು! ಎಲ್ಲೆಲ್ಲೂ ಹೆಪ್ಪುಗಟ್ಟಿದ್ದ ರಕ್ತದ ಕಲೆ! ಅರುಣ ಉಸಿರುಕಟ್ಟಿ ನಿಂತಳು!

ಏನೋ ಶಬ್ದವಾದಂತಾಗಿ, ಇಂದೂ ಆಂಟಿ ತಲೆಯೆತ್ತಿದರು. ಗರಬಡಿ ದವರಂತೆ ನೋಡಿದರು. ಭೀತಿ-ದುಃಖ, ಕಳವಳ-ಅಪಮಾನ, ಎಲ್ಲ ಭಾವನೆ ಗಳೂ ಒಟ್ಟಿಗೆ ಧಾವಿಸಿ ಬಂದು ನೆಲಸಿತು—ಅವರ ಕಣ್ಣುಗಳಲ್ಲಿ! ಮುಖ ಕಂಗೆಟ್ಟಿತು

ಮೊಗ್ಗು....ತನ್ನ ಬಳ್ಳಿಯನ್ನು ಕಂಡಿತು. ಗುರುತಿಸಿತು! ಒಳಗಡೆಯೇ ಅಡಗಿ ಕೊರೆಯುತ್ತಿದ್ದ ಭಾವನೆಗಳೆಲ್ಲ ಮೇಲೇರಿದವು! ಮೇಲೇರಿ, ಸಾಗರ ದಂತೆ ಉಕ್ಕಿ, ನೊರೆನೊರೆಯಾಗಿ ಹರಿದು, ಮೊರೆಯಿಟ್ಟಿತು—ಹೃದಯಾಂತ ರಾಳದಿಂದ!

'ಮಮ್ಮಿ!'....ಕೂಗು ತಾನೇತಾನಾಗಿ ಭೇದಿಸಿಕೊಂಡು ಬಂದಿತು ಹೃದಯಗರ್ಭದಿಂದ—'ಮ-ಮ್ಮಿ!'

ಅರುಣ ಓಡಿಹೋಗಿ ತಬ್ಬಿಕೊಂಡಳು.

---

# ಕೆಲವು ಉತ್ತಮ ಕಾದಂಬರಿಗಳು

| | |
|---|---|
| ಮೋಹಿನಿ (ಬೃಹತ್ಕಾದಂಬರಿ—ನಾಲ್ಕು ಭಾಗಗಳಲ್ಲಿ) —ವಿ. ಎಂ. ಇನಾಂದಾರ್ (ಸೆಟ್) | ರೂ. 25.00 |
| ಯಾತ್ರಿಕರು—ವಿ. ಎಂ. ಇನಾಂದಾರ್ | 6.00 |
| ಮೂರಾಬಟ್ಟೆ—ವಿ. ಎಂ. ಇನಾಂದಾರ್ | 5.00 |
| ನವಿಲುನೌಕೆ—ವಿ. ಎಂ. ಇನಾಂದಾರ್ | 5.00 |
| ವಿಜಯಕಲ್ಯಾಣ—ಎಚ್. ತಿಪ್ಪೇರುದ್ರಸ್ವಾಮಿ | 6.00 |
| ಸತ್ಯಾಶ್ರಯ ಸಾಮ್ರಾಜ್ಯ—ಎಚ್. ತಿಪ್ಪೇರುದ್ರಸ್ವಾಮಿ | 3.25 |
| ವಚನವಿರೂಪಾಕ್ಷ—ಎಚ್. ತಿಪ್ಪೇರುದ್ರಸ್ವಾಮಿ | 5.50 |
| ವಾತ್ಸಲ್ಯಪಥ—ವ್ಯಾಸರಾಯ ಬಲ್ಲಾಳ | 10.00 |
| ಅನುರಕ್ತೆ—ವ್ಯಾಸರಾಯ ಬಲ್ಲಾಳ | 6.75 |
| ಗಂಡನನ್ನು ಗೆದ್ದವರು— ಎಂ. ವಿ. ಸೀತಾರಾಮಯ್ಯ | 6.00 |
| ಕರಾವಳಿ—ವಿಶುಕುಮಾರ್ | 10.50 |
| ವಿಪ್ಲವ—ವಿಶುಕುಮಾರ್ | 5.75 |
| ಹಂಸಕ್ಷೀರ—ವಿಶುಕುಮಾರ್ | 5.75 |
| ಮದರ್—ವಿಶುಕುಮಾರ್ | 8.50 |
| ಕರ್ಫ್ಯೂ—ವಿಶುಕುಮಾರ್ | 5.00 |
| ಧೂಮಕೇತು—ರಾವ ಬಹಾದ್ದೂರ | 4.00 |
| ವೃಂದಾವನ—ರಾವ ಬಹಾದ್ದೂರ | 10.00 |
| ಬಿತ್ತಿ ಬೆಳೆದವರು—ರಾವ ಬಹಾದ್ದೂರ | 15.00 |
| ಕನಸು-ನನಸು (ಮೃಗಜಲ)—ರಾವ ಬಹಾದ್ದೂರ | 10.00 |
| ಮುತ್ತು ಕಟ್ಟಿದಳು—ರಾವ ಬಹಾದ್ದೂರ | 6.50 |
| ಬಾಳುಬಂಗಾರ—ರಾವ ಬಹಾದ್ದೂರ | 10.00 |
| ಕಾಂಚನಮೃಗ—ರಾವ ಬಹಾದ್ದೂರ | 7.50 |
| ಮೌನಗೌರಿ—ಕೃಷ್ಣಮೂರ್ತಿ ಪುರಾಣಿಕ | 6.00 |
| ಶಪ್ತವಾಪಿ—ಸಿ. ಎನ್. ಜಯಲಕ್ಷ್ಮೀದೇವಿ | 13.50 |
| ವೀಣಾ ! ಓ ವೀಣಾ !—ಎನ್. ಪಂಕಜ | 10.00 |
| ಗಗನ—ಎನ್. ಪಂಕಜ | 6.00 |
| ಮುಗಿಲು ಮಿಂಚು—ಎನ್. ಪಂಕಜ | 7.50 |
| ಹೂ-ಬಿಸಿಲು—ಪ್ರೇಮಾ ಭಟ್ | 5.00 |
| ಕರುಳಿನ ಕುಡಿ—ಮ. ನ. ಮೂರ್ತಿ | 5.50 |

**ಗೀತಾ ಬುಕ್ ಹೌಸ್ : ಪ್ರಕಾಶಕರು : ಮೈಸೂರು 570 001**

ಬಳ್ಳಿ-ಮೊಗ್ಗು/ರೂ. 5.00